
ಸಂಚಿಕೆ
೨೦
ಜನವರಿ ೨೦೧೯

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಬೃಂದಾವನ ವಾಣಿಯ ೨೦ನೇ  ವಿಶೇಷ ಸಂಚಿಕೆ



ಸಂಚಿಕೆ ೨೦, ಜನವರಿ ೨೦೧೯

# ಈ ಸಂಚಿಕೆಯಲ್ಲಿ





೦೪ ಸಂಪಾದಕೀಯ

೦೫ ಸಂಪಾದಕೀಯ ತಂಡ

೦೬ ಅಧ್ಯಕ್ಷರ ನುಡಿ

೦೮ ಸೌರಭ ತಂಡ ೨೦೧೯-೨೦

೧೦ ಅಂತರಂಗದ ಅನ್ವೇಷಣೆ
ವಚನ ಸೌರಭ

೧೫ ಲೇಖನ
ಕುವೆಂಪು ನುಡಿ ನಮನ

೧೬ ನಮನ
ತ್ರಿವಿಧ ದಾಸೋಹಿ ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು

೧೮ ಲಲಿತ ಪ್ರಬಂಧ
ನಿದ್ದಿ ಬಂದವರಿಗೆ ಹಾಸಿಗಿ ಹಾಸಿಕೊಟ್ಟಂಗಾತು

೨೨ ಪ್ರವಾಸ ಕಥನ
ಕೈಲಾಸ ಮಾನಸ ಸರೋವರ ಯಾತ್ರೆ - ಒಂದು ಜೀವನಾನುಭವ






೩೦ ನಾ ಕಂಡಂತೆ
ಹರಳುಗಟ್ಟಿದ ರುಚಿಗಳು

೩೨ ಕಥೆ
ಬೇಟೆ

೩೬ ಇ - ಕಾಲದಲ್ಲಿ
ಸಂತಸದ SMULE ಸಂಗೀತ ಸಂಭ್ರಮ

೪೦ ಅತಿಥಿ ಅಂಕಣ
ಕುವೆಂಪು ಮತ್ತು ವೈಚಾರಿಕತೆ











೪೪ **ವನಿತೆಯ ಮನದಾಳ**
ಮನದಾಳಕ್ಕಿಳಿದ 'ವಿವೇಕ ವಾಣಿ'

೫೦ **ರಾಷ್ಟ್ರೀಯ ಯುವ ದಿನ**
ಮಕ್ಕಳ ರೇಖಾ ಚಿತ್ರಗಳು

೫೨ **ಮಕ್ಕಳೋತ್ಸವ**
ವಾರ್ಷಿಕೋತ್ಸವ-೨೦೧೮ ಹಾಗೂ ಮಕ್ಕಳೋತ್ಸವ ಹಿನ್ನೋಟ

೫೬ **ಮೈಸೂರು ಮಲ್ಲಿಗೆ**
ಅಮೆರಿಕದ ನ್ಯೂ ಜೆರ್ಸಿಯಲ್ಲಿ ಮೈಸೂರು ಮಲ್ಲಿಗೆಯ ಕಂಪು.















೬೦ **ಕರ್ನಾಟಕ ವೈಭವ**
ಕರ್ನಾಟಕ ವೈಭವದ ಸುಂದರ ಅನುಭವ

೬೬ **ನಮನ—ಮಕ್ಕಳ ನಾಟಕಗಳು**
'ನಮನ' ದ ಜೊತೆ ನಮ್ಮೆಲ್ಲರ ಪಯಣ

೭೧ **ಚಿಣ್ಣರ ಲೋಕ**
ನನ್ನ ಮಾತು






೭೨ **ಹೆಲ್ತ್ ಮತ್ತು ಫಿಟ್ನೆಸ್**
ಕೀಟೊ ಡಯಟ್ , ಬೊಜ್ಜು ಕರಗಿಸುವ ಹೊಸ ವಿಧಾನವೆ?

# ಹರಿವ ನೀರು

ಸಂಪಾದಕರಿಂದ



ನಮಸ್ಕಾರ ಸ್ನೇಹಿತರೆ, ೨೦೧೯ನೇ ಹೊಸವರ್ಷ, ಸಂಕ್ರಾಂತಿಯ ಹಾಗು ಎಪ್ಪತ್ತನೇ ಗಣರಾಜ್ಯೋತ್ಸವದ ಶುಭಾಶಯಗಳು! ಸೌರಭ ತಂಡದಿಂದ ಬೃಂದಾವನ ವಾಣಿಯ ಮೊದಲ ಸಂಚಿಕೆಯು ಹೊಸ ವಿನ್ಯಾಸದ ಜೊತೆಗೆ ಎಪ್ಪತ್ತಕ್ಕೂ ಹೆಚ್ಚು ಪುಟಗಳನ್ನೊಳಗೊಂಡು ವೈವಿಧ್ಯಮಯ ಅಂಕಣಗಳೊಂದಿಗೆ ಹೊರಬಂದಿದೆ. ಕಥೆ, ಪ್ರಬಂಧ, ವಿಶೇಷ ಲೇಖನಗಳು, ಆಧ್ಯಾತ್ಮ, ಸಿನೆಮಾ, ಹೆಲ್ತ್ ಅಂಡ್ ಫಿಟ್ನೆಸ್, ಚಿಣ್ಣರ ಲೋಕ, ಕನ್ನಡ ಕೂಟದ ಕಾರ್ಯಕ್ರಮದ ಹಿನ್ನೋಟ ಹೀಗೆ ಹಲವಾರು ವಿಷಯಗಳಿಂದ ಕೂಡಿದ್ದು, ಓದುಗರಿಗೆ ಉತ್ತಮ ಓದಿನ ಅನುಭವವನ್ನು ಕೊಡುವ ನಮ್ಮದೊಂದು ಸಣ್ಣ ಪ್ರಯತ್ನ.

ಹೊಸ ವರುಷವೆಂದರೆ ಹೊಸ ಆರಂಭ. ಪ್ರತಿ ಹೊಸ ವರುಷವೂ ಉಜ್ವಲ ಭವಿಷ್ಯಕ್ಕೆ ನಾಂದಿ. ನಾವುಗಳು ಈ ಹೊಸ ಆರಂಭವನ್ನು ಕೇವಲ ಕ್ಯಾಲೆಂಡರ್ ಬದಲಾವಣೆಗಷ್ಟೇ ಸೀಮಿತವಾಗಿಟ್ಟುಕೊಳ್ಳದೆ, ಕಳೆದುಹೋದ ವರ್ಷದಲ್ಲಿನ ನೆರವೇರದ ಸಂಕಲ್ಪಗಳನ್ನು ಈಡೇರಿಸಿಕೊಳ್ಳಲು ಮತ್ತೆ ಹೊಸವರ್ಷದಲ್ಲಿ ಹೊಸ ಸಂಕಲ್ಪಗಳನ್ನು ಮಾಡುತ್ತೇವೆ. ಈ ಸಂಕಲ್ಪಗಳು ಭವಿಷ್ಯವನ್ನು ಆಶಾಪೂರ್ವಕವನ್ನಾಗಿ ಮಾಡುವ ದಾರಿ. ಆ ದಾರಿ ಸುಗಮವಾಗಲು ಗುರಿಯೊಂದು ಮುಖ್ಯ.

***"ನಿಂತ ನೀರಾದರೆ ಸಾರ್ಥಕತೆಯಿಲ್ಲ. ಹರಿವ ನೀರಿನ ಗಾಂಭೀರ್ಯತೆ, ವೈವಿಧ್ಯತೆ ಅಪಾರ. ನಿಂತ ನೀರಿಗಷ್ಟೇ ಪಾಚಿ ಕಟ್ಟುವುದು. ಹರಿವ ನೀರಿಗೆ ಬಂಡೆ ಕೊರೆಯುವಷ್ಟು ಶಕ್ತಿ, ಛಲ. ವರುಷ ವರುಷವೂ ನಮ್ಮ ಮನಸ್ಥಿತಿಯನ್ನು ನಿಂತ ನೀರಾಗಿಸದೆ, ಹರಿವ ನೀರಿನಂತಾಗಿಸೋಣ."***

ಈ ಹೊಸವರ್ಷದ ಆರಂಭದ ಮೊದಲಲ್ಲೇ ಹರಿವ ನೀರಿನ ಅನುಭವ. ಸಾಹಿತ್ಯನಗರಿ ಧಾರವಾಡದಲ್ಲಿ ನಡೆದ ೮೪ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸುಮಾರು ವರ್ಷಗಳಿಂದ ಕಾಣದಿದ್ದ ನಿರೀಕ್ಷೆಗೂ ಮೀರಿದ ಜನಸಾಗರ. ಒಂದು ಅಂದಾಜಿನ ಪ್ರಕಾರ ಸುಮಾರು ೫ ಲಕ್ಷಕ್ಕೂ ಮೀರಿ ಸಾಹಿತ್ಯೋಪಾಸಕರು, ಕಾವ್ಯಾಸಕ್ತ, ಕನ್ನಡ ಭಾಷೆ, ಕಲೆ, ಸಂಸ್ಕೃತಿಯ ಪ್ರೇಮಿಗಳು ಮೂರು ದಿನದ ಕನ್ನಡ ಜಾತ್ರೆಯಲ್ಲಿ ಭಾಗವಹಿಸಿದ್ದು ಜೊತೆಗೆ ಸುಮಾರು ೩ ಕೋಟಿ ರೂಪಾಯಿಯಷ್ಟು ಪುಸ್ತಕಗಳ ಮಾರಾಟವಾಗಿರುವುದು ಈ ಸಲದ ಸಮ್ಮೇಳನದ ವೈಶಿಷ್ಟ್ಯ. ಕನ್ನಡ ಭಾಷೆ, ಸಾಹಿತ್ಯದ ಬೆಳವಣಿಗೆಗೆ ಒಳ್ಳೆಯ ದಿನಗಳು ಶುರುವಾಯಿತೇನೋ ಎನಿಸುತ್ತದೆ. ಎಲ್ಲವೂ ಒಳ್ಳೆಯದಾಗಬೇಕು, ಮೈಮನಗಳು ಒಳ್ಳೆಯ ಅನುಭವ ಪಡೆಯಬೇಕೆಂಬ ಚಿಂತನೆಯು ಬೇಂದ್ರೆಯವರ ಕವನದ ಸಾಲಿನಲ್ಲಿ ಕಂಡದ್ದು ಹೀಗೆ:


**ಲೇಸೆ ಕೇಳಿಸಲಿ ಕಿವಿಗೆ, ನಾಲಗೆಗೆ ಲೇಸೆ ನುಡಿದು ಬರಲಿ.**
**ಲೇಸೆ ಕಾಣಿಸಲಿ ಕಣ್ಗೆ, ಜಗದೊಳಗೆ ಲೇಸೆ ಹಬ್ಬುತಿರಲಿ.**
**ಲೇಸೆ ಕೈಗಳಿಂದಾಗುತಿರಲಿ, ತಾ ಬರಲಿ ಲೇಸೆ ನಡೆದು.**
**ಲೇಸನುಂಡು ಲೇಸುಸಿರಿ, ಇಲ್ಲಿರಲಿ ಲೇಸೆ ಮೈಯ ಪಡೆದು.**

ಹೀಗೆ ಎಲ್ಲದರಲ್ಲೂ ಹಿತವನ್ನು ಕಾಣುತ್ತಾ ಒಳ್ಳೆಯ ಹೆಜ್ಜೆಗಳನ್ನಿಡುತ್ತಾ ಮುಂದೆ ಸಾಗೋಣ. ಈ ಸುಂದರವಾದ ಸಂಚಿಕೆಯು ಹೊರಬರಲು ಕಾರಣರಾದ ಎಲ್ಲರಿಗೂ ಹಾಗೂ ಸಂಪಾದಕ ತಂಡಕ್ಕೂ ನಾನು ಆಭಾರಿ.

ಕಳೆದ ವಾರ ಭೌತಿಕವಾಗಿ ನಮ್ಮನ್ನಗಲಿದ ತ್ರಿವಿಧ ದಾಸೋಹಿ, 'ನಡೆದಾಡುವ ದೇವರು' ಪೂಜ್ಯ ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳಿಗೆ 'ಬೃಂದಾವನ ಕನ್ನಡ ಕೂಟ'ದ ವತಿಯಿಂದ ಭಾವಪೂರ್ಣ ನಮನಗಳನ್ನು ಅರ್ಪಿಸುತ್ತೇವೆ .

ಮುಂದಿನ ಸಂಚಿಕೆಯಲ್ಲಿ ಮತ್ತೆ ಸಿಗುವ.

ಧನ್ಯವಾದಗಳೊಂದಿಗೆ,



**ಅಹೀಶ್ ಭಾರದ್ವಾಜ**

## ಸಂಪಾದಕೀಯ ತಂಡ


**ಅಹೀಶ್ ಭಾರದ್ವಾಜ್**
*ಸಂಪಾದಕರು*




**ದಾಶರಥಿ ಘಟ್ಟು**
*ವಿಷಯ ನಿರ್ವಹಣೆ*



**ಸರಿತಾ ನವಲಿ**
*ವಿಷಯ ನಿರ್ವಹಣೆ*



**ಅಜೇಯ ರಾವ್**
*ವಿಷಯ ನಿರ್ವಹಣೆ*



**ಲಕ್ಷ್ಮಿ ಕೊಲಾಲ**
*ವಿಷಯ ನಿರ್ವಹಣೆ*



**ಬಿಂದು ಮಾಧವಿ ಪಾಲಾಕ್ಷಪ್ಪ**
*ವಿಷಯ ನಿರ್ವಹಣೆ*



**ಶ್ರೀ ವಿದ್ಯಾ ಪ್ರಶಾಂತ್**
*ವಿಷಯ ನಿರ್ವಹಣೆ*



**ರಘುರಾಂ ರಾಯಸಂ**
*ವಿಷಯ ನಿರ್ವಹಣೆ*



***ಪರಿಕಲ್ಪನೆ ಮತ್ತು ಪತ್ರಿಕೆ ವಿನ್ಯಾಸ: ಸರಿತಾ ನವಲಿ, ಅಹೀಶ್ ಭಾರದ್ವಾಜ್***

**ಸಂಚಿಕೆ ನೆರವು:**

ಮುಖಪುಟ ಛಾಯಾಚಿತ್ರ: ಅಂತರ್ಜಾಲ

**ಕುಮಾರ್ ಕವಿ**
*ಮಕ್ಕಳೋತ್ಸವ ಛಾಯಾಚಿತ್ರಗಳು*



**ಗಿರೀಶ್ ಹೊಂಗಲ್**
*ಮಕ್ಕಳೋತ್ಸವ, ಸೌರಭ ತಂಡ ಛಾಯಾಚಿತ್ರಗಳು*



**ವರ್ಷ ರಾಯಸಂ**
*ಮಕ್ಕಳೋತ್ಸವ ಛಾಯಾಚಿತ್ರಗಳು*



**ರಾಮಪ್ಪ ಒಣರೊಟ್ಟಿ**
*ಸ್ವಾಮಿ ವಿವೇಕಾನಂದ ವರ್ಣಚಿತ್ರ*





**ಪ್ರಕಾಶಕರು:** ಬೃಂದಾವನ, Karnataka Cultural Organization Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ.

www.brindavana.org



© 2019 All rights reserved. no part of this book may be reproduced, stored in a retrieval system or transmitted in any form or by any means, electronic, mechanical, photocopying, recording or otherwise without prior permission of the publisher.

ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.

ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.



ಲೇಖನಗಳನ್ನು ಕಳುಹಿಸಲು ಮತ್ತು ಹೆಚ್ಚಿನ ಮಾಹಿತಿಗಳಿಗೆ ಸಂಪರ್ಕಿಸಿ: vani@brindavana.org


### ಸದಸ್ಯತ್ವ ಮಾಹಿತಿ

ಬೃಂದಾವನ, ನ್ಯೂಜೆರ್ಸಿಯಲ್ಲಿ ಕನ್ನಡ ಮತ್ತು ಕನ್ನಡಿಗರ ಪರವಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಚಾರಿಟಿ ಸಂಸ್ಥೆ. ನ್ಯೂಜೆರ್ಸಿ ಹಾಗೂ ಸುತ್ತಮುತ್ತಲಿನ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಕನ್ನಡವನ್ನು ಬೆಳೆಸಿ, ಪೋಷಿಸಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ".

ವಾರ್ಷಿಕ, ದ್ವೈವಾರ್ಷಿಕ, ಅಜೀವ, ವಿದ್ಯಾರ್ಥಿ ಸದಸ್ಯತ್ವಗಳು ಲಭ್ಯ.

ಆನ್ಲೈನ್ ಮೂಲಕ ಸದಸ್ಯತ್ವ ಪಡೆಯಲು www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ.

ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.


ಹೆಚ್ಚಿನ ಮಾಹಿತಿಗಳಿಗೆ ಸಂಪರ್ಕಿಸಿ: president@brindavana.org

# ಅಧ್ಯಕ್ಷರ ನುಡಿ



ನ್ಯೂ ಜೆರ್ಸಿ ಕನ್ನಡ ಬಂಧುಗಳಿಗೆಲ್ಲ ಹೊಸ ವರ್ಷದ ಶುಭಹಾರೈಕೆಗಳು ಮತ್ತು ಗಣರಾಜ್ಯೋತ್ಸವದ ಶುಭಾಶಯಗಳು !

ನಿಮ್ಮೆಲ್ಲರ ಆಶಯದಂತೆ ಬೃಂದಾವನ ಕನ್ನಡ ಸಂಘವನ್ನು ಮುನ್ನಡೆಸಲು ಹೊಸ ಕಾರ್ಯಕಾರಿ ಸಮಿತಿ ಈಗಾಗಲೇ ರಚನೆಯಾಗಿದೆ. ಹೊಸ ಹುರುಪು ಮತ್ತು ಉತ್ಸಾಹದಿಂದ ಕೂಡಿ, ಅನೇಕ ಮಹದಾಲೋಚನೆಗಳನ್ನು ಮುಂದಿಟ್ಟುಕೊಂಡು ಕಾರ್ಯತತ್ಪರವಾಗಿರುವ ಈ ತಂಡಕ್ಕೆ "ಸೌರಭ" ತಂಡ ಎಂದು ಹೆಸರಿಟ್ಟುಕೊಂಡಿದ್ದೇವೆ. ನಮ್ಮ ಸೌರಭ ತಂಡದ ಪರವಾಗಿ ನಿಮಗೆಲ್ಲರಿಗೂ ತುಂಬು ಹೃದಯದ ಕೃತಜ್ಞತೆಗಳು.


ಬೃಂದಾವನ ಕನ್ನಡ ಸಂಘವನ್ನು ಮುನ್ನಡೆಸುವ ನಿಟ್ಟಿನಲ್ಲಿ ನಿಮ್ಮೆಲ್ಲರ ಬೆಂಬಲ, ಸಹಕಾರ ಮತ್ತು ಸಹಯೋಗದೊಂದಿಗೆ ಅನೇಕ ಉನ್ನತ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸೌರಭ ತಂಡ ಸಿದ್ಧವಾಗಿದೆ. ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಗುಣಮಟ್ಟದ ಕಾರ್ಯಕ್ರಮಗಳ ಜೊತೆಗೆ ಬೃಂದಾವನವನ್ನು ಇನ್ನೂ ಹೆಚ್ಚಿನ ಮಟ್ಟಕ್ಕೆ ಕೊಂಡೊಯ್ಯುವುದು ನಮ್ಮ ಮೂಲ ಉದ್ದೇಶ. ಈ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ಕನ್ನಡಿಗರನ್ನು, ಕನ್ನಡ ಸಂಸ್ಕೃತಿ ಹಾಗೂ ಮನೋಧರ್ಮವನ್ನು ಹೊಂದಿರುವ ಎಲ್ಲರನ್ನು ಒಟ್ಟುಗೂಡಿಸಿ ಎಲ್ಲ ಸಮುದಾಯ, ಸಂಸ್ಥೆಗಳು ಒಂದಾಗಿ ಬೆರೆಯುವಂತೆ ಮಾಡುವುದಕ್ಕೋಸ್ಕರ ಶ್ರಮಿಸುವುದಕ್ಕೆ ಟೊಂಕ ಕಟ್ಟಿದ್ದೇವೆ. ನಮ್ಮ ಎಲ್ಲ ಕಾರ್ಯಕ್ರಮಗಳು ಸರಿಯಾದ ಸಮಯಕ್ಕೆ ಆರಂಭವಾಗಿ ಮತ್ತು ಮುಕ್ತಾಯವಾಗುವುದರಲ್ಲಿ ನಿಮ್ಮೆಲ್ಲರ ಸಹಕಾರ ಬಹಳ ಮುಖ್ಯವಾದದ್ದು. ನಮ್ಮ ಒಂದು ವರ್ಷದ ಮುಖ್ಯ ಕಾರ್ಯಕ್ರಮಗಳು ನಡೆಯುವ ಸ್ಥಳ ಮತ್ತು ದಿನಾಂಕವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಸೌರಭ ತಂಡದ ಮೊದಲ ಕಾರ್ಯಕ್ರಮ ಯುಗಾದಿ ಹಬ್ಬ ಆಚರಣೆ, ಏಪ್ರಿಲ್ ೭ ರ ಭಾನುವಾರ ಹೈಸ್ಕೌಟ್ ಶಾಲೆಯ ಸಭಾಂಗಣದಲ್ಲಿ ನಡೆಯಲಿದೆ. ಸೌರಭ ತಂಡದ ಮೊದಲ ಕಾರ್ಯಕ್ರಮಕ್ಕೆ ನೀವು, ನಿಮ್ಮ - ಬಂಧು-ಮಿತ್ರರೊಡನೆ ಬಂದು ನಮ್ಮ ಸಂತೋಷದಲ್ಲಿ ಭಾಗಿಗಳಾಗಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

೨೦೦೪ ರಲ್ಲಿ ಉದಯಿಸಿದ ಬೃಂದಾವನ ಕನ್ನಡ ಕೂಟಕ್ಕೆ ಈಗ ಹದಿನೈದು ವಸಂತಗಳು ತುಂಬಿವೆ. ಎಂದಿನಂತೆ ಹೊಸ ವರ್ಷ ಎಲ್ಲಕಡೆ ಸಡಗರ ಸಂಭ್ರಮಗಳಿಗೆ ಕಾರಣವಾಗುತ್ತಿದ್ದಂತೆ, ನಮ್ಮ ಬೃಂದಾವನದಲ್ಲೂ ಕೂಡ ಈ ನಮ್ಮ "ಸೌರಭ" ತಂಡ, ಅಮಿತವಾದ ಉತ್ಸಾಹದಲ್ಲಿ ಅನೇಕ ಮಹತ್ತರವಾದ ಯೋಜನೆಗಳನ್ನು ಹಮ್ಮಿಕೊಂಡು ಬೃಂದಾವನದ ಕೀರ್ತಿಯನ್ನು ಇನ್ನಷ್ಟು ಹೆಚ್ಚಿಸುವ ಹುಮ್ಮಸ್ಸಿನಲ್ಲಿದೆ. ನಮ್ಮ ಹೊಸ ಯೋಜನೆಗಳಲ್ಲಿ ಬೃಂದಾವನ ಚಾರಿಟಿಯವತಿಯಿಂದ ಒಂದು ಲಕ್ಷ ಡಾಲರ್‌ಗೂ ಹೆಚ್ಚು ಹಣ ಸಂಗ್ರಹಿಸಬೇಕು, ಅದನ್ನು ಸದ್ವಿನಿಯೋಗಗೊಳಿಸಬೇಕು ಎಂಬ ಮಹತ್ವಾಕಾಂಕ್ಷೆಯನ್ನು ಮುಂದಿಟ್ಟುಕೊಂಡಿದ್ದೇವೆ. ಅಲ್ಲದೇ, ಕನ್ನಡ ಬಿಸಿನೆಸ್ ಕಮ್ಯೂನಿಟಿಯನ್ನು ಕಟ್ಟಿ ಬೆಳೆಸಬೇಕು ಎಂಬ ನಿಟ್ಟಿನಲ್ಲಿ ಈಗಾಗಲೇ ಕಾರ್ಯತತ್ಪರರಾಗಿದ್ದೇವೆ.

ಕನ್ನಡ ಶಾಲೆ, ಅಕ್ಷರಭಂಡಾರ, ಸಾಹಿತ್ಯ ಮತ್ತು ಯುವ ಬೃಂದಾವನ ಬೆಳೆಸುವುದರ ಜೊತೆಗೆ, ಯೋಗ ಮತ್ತು ಧ್ಯಾನಗಳಿಗೂ ಅನುಕೂಲವಾಗುವ ನಿಟ್ಟಿನಲ್ಲಿ ಅನೇಕ ಕಿರುಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುವ ಹುರುಪಿನಲ್ಲಿದ್ದೇವೆ. ಈ ದೃಷ್ಟಿಯಿಂದ ನಮ್ಮ ಬೃಂದಾವನದ ಮುಂಬರುವ ಕಾರ್ಯಕ್ರಮಗಳು, ವರ್ಷದುದ್ದಕ್ಕೂ ಸಣ್ಣ-ಪುಟ್ಟ ವೇದಿಕೆಗಳಲ್ಲಿ ನ್ಯೂ ಜೆರ್ಸಿಯ ಉದ್ದಗಲಕ್ಕೂ ಹರಡಿಕೊಳ್ಳುವುದನ್ನು ನೀವು ನಿರೀಕ್ಷಿಸಬಹುದು. ಎಲ್ಲ ಕನ್ನಡ ಕೂಟಗಳಿಗಿರುವಂತೆ ನಮ್ಮ ಸದಸ್ಯರೇ ನಮ್ಮ ಜೀವಾಳ, ಈ ದೃಷ್ಟಿಯಿಂದ ನಾವು ಹೊಸದಾಗಿ ಆರಂಭಿಸುವ ಮೆಂಬರ್‌ಶಿಪ್ ಡ್ರೈವ್‌ನಲ್ಲಿ ನೀವೂ ಪಾಲ್ಗೊಂಡು ನಮ್ಮ ಸಂಸ್ಥೆಯನ್ನು ಕೈ ಹಿಡಿದು ಮುನ್ನಡೆಸಲು ಸಹಾಯ ಮಾಡಿ.

ಈ ವರ್ಷದ ಬೃಂದಾವನ ವಾಣಿಯ ಮೊದಲ ಸಂಚಿಕೆಯನ್ನು ಹೊಸ ವಿನ್ಯಾಸದೊಂದಿಗೆ ನಿಮ್ಮ ಮುಂದಿಡುತ್ತಿದ್ದೇವೆ.

ತಮ್ಮ ವಿಶ್ವಾಸಿ,



**ಸತೀಶ್ ಹೊಸನಗರ**



TAX PROBLEMS?
We Give You More Than A Tax Service
• Professional Tax Return Preparation Individual Partnership, Corporate & Multi State Returns
• Personal Attention, Reasonable Cost
• Any Tax, Any Year
• Tax Planning And Advice
• Small Business Counseling Specialist
• Easy To Use Record Keeping Systems
• Free Electronic Filing W/Paid Prep
• Complete Payroll Services Available
"WE SPEAK TAX"
ENROLLED AGENTS
We are offering 9 Tax planning services absolutely free.
•Free Tax Return Evaluation Services for TY 2015, 2016 & 2017
•Free ITIN Processing guidance (Form W7)
•Free Tax Estimates
•Free FBAR Processing guidance
•Free Tax Representation services (in case of Audits/Notices)
•Free Extension Filing
•Free City Tax Filing
•Free County Tax Filing
•Free Managed Hosting Services.
TaxesOnTime
Tax Consulting Firm
Contact & Wats up No :
703-376-3737
VISA
MasterCard
P.O. Box 248
Vienna, VA 22183
Phone: 703-376-3737
Fax:703-563-7410
www.Taxesontime.com
Kid's Benefit
As for IRS each kid you will get $ 500 Refund
But
If you file with TaxesOnTime you will get $ 2000 Refund

# ಸೌರಭ ತಂಡ ೨೦೧೯-೨೦ ಪರಿಚಯ:



**ಸತೀಶ್ ಹೊಸನಗರ**
*ಅಧ್ಯಕ್ಷರು*



**ಸತ್ಯ ಪ್ರಸಾದ್ ಸುಬ್ಬರಾವ್**
*ಉಪಾಧ್ಯಕ್ಷರು*



**ರೂಪಶ್ರೀ ಮೇಲುಕೋಟೆ**
*ಜಂಟಿ ಕಾರ್ಯದರ್ಶಿ*



**ಅರುಣ್ ಪ್ರಭಾಕರ**
*ಜಂಟಿ ಖಜಾಂಚಿ*



**ಶೇಖರ್ ಜಯರಾಮ್**
*ನಿರ್ದೇಶಕರು, ಮೂಲ ಸೌಕರ್ಯಗಳು*



**ಬಾಬು ರಂಗಯ್ಯ**
*ನಿರ್ದೇಶಕರು, ಯೋಗ, ಹೆಲ್ತ್ ಮತ್ತು ಫಿಟ್ನೆಸ್*



**ರಾಮಚಂದ್ರ ಶಾಸ್ತ್ರಿ**
*ನಿರ್ದೇಶಕರು, ದೇಣಿಗೆ*



**ಸುಬ್ರಮಣ್ಯ ಸೋಮಯಾಜಿ**
*ನಿರ್ದೇಶಕರು, ಊಟೋಪಚಾರ*



**ಸುಹಾಸ್ ಕುಮಾರ್**
*ನಿರ್ದೇಶಕರು, ಯುವ ಬೃಂದಾವನ*



**ಸಂಧ್ಯಾ ಮಲ್ಲಿಕ್**
*ಕಾರ್ಯದರ್ಶಿ*



**ಗಿರೀಶ್ ಹೊಂಗಲ್**
*ಖಜಾಂಚಿ*



**ಅಮೃತ ಲಕ್ಷ್ಮೀಶನ್**
*ನಿರ್ದೇಶಕರು, ಸಾಂಸ್ಕೃತಿಕ*



**ಅಹೀಶ್ ಭಾರದ್ವಾಜ್**
*ನಿರ್ದೇಶಕರು, ಸಾಹಿತ್ಯ*



**ಸರಿತಾ ನವಲಿ**
*ನಿರ್ದೇಶಕರು, ರಂಗಭೂಮಿ*



**ಶ್ರೀಧರ ಸೂರ್ಯನಾರಾಯಣ**
*ನಿರ್ದೇಶಕರು, ಹಣಕಾಸು*



**ಸಂಗೀತಾ ವಿದ್ಯಾಧರ**
*ನಿರ್ದೇಶಕರು,*
*ಕಾರ್ಯಕ್ರಮ ನಿರ್ವಹಣೆ*



**ಸರಯೂ ಸಮೀರ**
*ನಿರ್ದೇಶಕರು, ಹಣಕಾಸು*

ಛಾಯಾಚಿತ್ರ: ಅಂತರ್ಜಾಲ

ಅಂತರಂಗದ ಅನ್ವೇಷಣೆ

# ವಚನ ಸೌರಭ



*ಎಂ.ಜಿ.ಪ್ರಸಾದ್*

"**ಮನುಷ್ಯನಾಗಿ ಹುಟ್ಟಿದೊಡನೆಯೇ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಳ್ಳುವ ಹಕ್ಕು ಜೊತೆಯಲ್ಲಿ ಬರುತ್ತದೆ. ಆ ಹಕ್ಕಿನ ಕಡೆಗೆ ಜನ ಗಮನ ಕೊಡುವುದಿಲ್ಲವಲ್ಲಾ!**"

**ಪರಿಚಯ:**

ವಚನ ಎಂದರೆ ಏನು? ಎಂಬ ಪ್ರಶ್ನೆಗೆ ಸುಲಭವಾದ ಉತ್ತರಗಳೇ ನುಡಿ, ಮಾತು ಅಥವಾ ಹೇಳಿಕೆ ಎಂದಾಗುತ್ತದೆ. ಸಾಹಿತ್ಯಿಕ ದೃಷ್ಟಿಯಲ್ಲಿ ನೋಡಿದಾಗ ವಚನ ಎಂದರೆ ಚಂಪೂ ಕಾವ್ಯಗಳಲ್ಲಿ ಬರುವ ಸಣ್ಣ, ದೊಡ್ಡ ಗದ್ಯ ಭಾಗಗಳು ಎಂದಾಗುತ್ತದೆ. ಇನ್ನೂ ಆಳವಾದ ದೃಷ್ಟಿಯಲ್ಲಿ ನೋಡಿದಾಗ ವಚನ ಎಂದರೆ ಮಾತಿನ ಪ್ರಮಾಣ ಎಂದಾಗುತ್ತದೆ. ಯಾವಾಗ ಒಬ್ಬರ ಮಾತು ಅವರ ಅನುಭವದ ಆಧಾರದ ಮೇಲೆ ನಿಲ್ಲುತ್ತದೆಯೋ ಆಗ ಅದು 'ಪ್ರಮಾಣ ವಚನ' ವಾಗುತ್ತದೆ. ಆದ್ದರಿಂದಲೇ ಯಾರಲ್ಲಿ ಅವರ ನಡೆಯಂತೆ ನುಡಿ ಹೊರಬರುತ್ತದೆಯೋ ಮತ್ತು ಯಾರು ನುಡಿದಂತೆ ನಡೆಯುತ್ತಾರೆಯೋ ಅವರ ಮಾತೇ ವಚನ. ಇನ್ನೊಂದು ದೃಷ್ಟಿಯಲ್ಲಿ ನೋಡಿದಾಗ ಯಾರು ಕಾಯಾ, ವಾಚಾ ಹಾಗೂ ಮನಸಾ ಎಂದರೆ ತಮ್ಮ ಕ್ರಿಯೆಯಿಂದ, ವಚನದಿಂದ (ಮಾತಿನಿಂದ) ಹಾಗೂ ಮನಸ್ಸಿನಿಂದ ಒಂದೇ ವ್ಯಕ್ತಿತ್ವವನ್ನು ಹೊಂದಿರುತ್ತಾರೆಯೋ ಅವರ ವಚನವೇ (ಮಾತೇ) ಸಾಕು ಅವರ ಉನ್ನತವಾದ ವ್ಯಕ್ತಿತ್ವವನ್ನು ತೋರುತ್ತದೆ. ಅದನ್ನೇ ಸಂಸ್ಕೃತ ಭಾಷೆಯಲ್ಲಿ ಹೇಳಿದರೆ,

**""ಕರ್ಮಣ್ಯೈಕಂ ವಚಸ್ಯೈಕಂ ಮನಸ್ಯೈಕಂ ಮಹಾತ್ಮನಾಮ್"**

ಎಂದರೆ ಮಹಾತ್ಮರ ಕರ್ಮ, ವಚನ ಮತ್ತು ಮನಸ್ಸು ಒಂದೇ ಆಗಿರುತ್ತದೆ. ಆದ್ದರಿಂದ ಮಹಾತ್ಮರ ವಚನವು ಅವರ ಮನಸ್ಸು ಮತ್ತು ಕ್ರಿಯೆಯನ್ನು ಪ್ರತಿನಿಧಿಸುತ್ತದೆ. ಅದರ ಜೊತೆಗೆ ಮಹಾತ್ಮರ ವಚನ ಅವರ ಅನುಭವವನ್ನು ದಿಗ್ದರ್ಶಿಸುವುದಲ್ಲದೇ ಇತರ ಸಾಧಕ-ಸಾಧಕಿಯರಿಗೆ ದಾರಿದೀಪವಾಗುತ್ತದೆ.

ಶಿವ ಶರಣ-ಶರಣೆಯರು ಇಂತಹ ಮಹಾತ್ಮರ ಗುಂಪಿಗೆ ಸೇರಿದವರು. ಈ ಸಂಕ್ಷಿಪ್ತ ಲೇಖನದಲ್ಲಿ ವಚನ ಸಾಹಿತ್ಯ ಮತ್ತು ಅದರ ವೈಶಿಷ್ಟ್ಯದ ಬಗ್ಗೆ ವಿಚಾರವನ್ನು ಮಂಡಿಸಲಾಗಿದೆ. ವಚನ ಸಾಹಿತ್ಯದಲ್ಲಿ ಆಳವಾಗಿ ಹೋಗಿ ಅಧ್ಯಯನ ಮಾಡುವ ಸ್ಫೂರ್ತಿಯನ್ನು ಓದುಗರಿಗೆ ನೀಡಲು ಪ್ರಯತ್ನಿಸುವುದೇ ಈ ಲೇಖನದ ಉದ್ದೇಶ.

**ಶಿವ ಶರಣ-ಶರಣೆಯರ ವಚನಗಳ ವೈಶಿಷ್ಟ್ಯ**

ಶಿವ ಶರಣ-ಶರಣೆಯರ ವಚನಗಳ ಸಮೂಹವು ಒಂದು ಆಧ್ಯಾತ್ಮಶಾಸ್ತ್ರ. ಇದನ್ನು ವಚನಶಾಸ್ತ್ರ ಎಂದೂ ಕರೆಯುತ್ತಾರೆ. ಶಾಸ್ತ್ರ ಎಂಬ ಪದದ ವ್ಯುತ್ಪತ್ತಿಯು **"ಶಾಸ್ತಿ ತ್ರಾಯತೇ ಚೇತಿ ಶಾಸ್ತ್ರಂ ಇತಿವಾ"** ಎಂದು, ಅಂದರೆ **"ಯಾವ ಆದೇಶದಿಂದ ನಮ್ಮ ರಕ್ಷಣೆ ಆಗುತ್ತದೆಯೋ ಅದೇ ಶಾಸ್ತ್ರ."** ಈ ವಚನಗಳು ಅನುಭಾವದ ಆಧಾರದಿಂದ ಹೊರಹೊಮ್ಮಿದೆ. ಇಲ್ಲಿ "ಅನುಭಾವ" ಎಂದರೆ ಆಧ್ಯಾತ್ಮಿಕ ಸಾಧನೆಯಿಂದ ಆದ ಸಾಕ್ಷಾತ್ಕಾರ. ಆದ್ದರಿಂದ ವಚನಗಳಲ್ಲಿ ಸಾಧಕ-ಸಾಧಕಿಯರಿಗೆಲ್ಲಾ ಬೇಕಾದ ತತ್ವಗಳು ಅಡಗಿವೆ. ಇದರ ಜೊತೆಗೆ ವಿಶೇಷವಾಗಿ ವಚನಗಳಲ್ಲಿ ವೀರಶೈವ ಧರ್ಮದ ತತ್ವಗಳೂ ಅಡಗಿವೆ. ವೀರಶೈವ ಮತದ ಆಧಾರ ತತ್ವಗಳಾದ ಶಕ್ತಿ ವಿಶಿಷ್ಟಾದ್ವೈತ, ಷಟ್ ಸ್ಥಲ, ಅಷ್ಟಾವರಣ ಹಾಗೂ ಪಂಚಾಚಾರಗಳು ನಿರೂಪಿತವಾಗಿವೆ. ಹಾಗೆಯೇ ವಚನ ವಾಂಙ್ಮಯವನ್ನು ಕನ್ನಡದಲ್ಲಿ ಶೈವಾಗಮಗಳೆಂದು ಹೇಳಲ್ಪಟ್ಟಿದೆ. ಒಟ್ಟಿನಲ್ಲಿ ವಚನಗಳು ಪಂಡಿತ-ಪಾಮರರಿಬ್ಬರಿಗೂ ತತ್ವಗಳನ್ನು ತಿಳಿಗನ್ನಡ ಭಾಷೆಯ ಮೂಲಕ ನೇರವಾಗಿ ನಿರೂಪಿಸಿದೆ. ಅನುಭವ ಮಂಟಪದಲ್ಲಿ ಶರಣ-ಶರಣೆಯರು ತಮ್ಮ ಅನುಭಾವದ ಆಧಾರದ ಮೇಲೆ ಹೊರ ತಂದ ಮಾತುಗಳೇ ವಚನಗಳಾಗಿವೆ.

**(ಮುಂದಿನ ಪುಟಕ್ಕೆ)**

## ವಚನ ಸೌರಭ (ಮುಂದುವರೆದುದು)

### ವಚನಕಾರರು

ಆಧ್ಯಾತ್ಮ ಸಾಧನೆ ಹಾಗೂ ಆತ್ಮಸಾಕ್ಷಾತ್ಕಾರದ ಗುರಿಯನ್ನು ಹೊಂದಿ ಯಾರು ಬೇಕಾದರೂ ಆಧ್ಯಾತ್ಮ ಮಾರ್ಗದಲ್ಲಿ ಹೋಗಬಹುದು. ಕರ್ನಾಟಕದ ಮಹಾ ಯೋಗಿ ಮತ್ತು ಜ್ಞಾನಿಯಾದ ಶ್ರೀರಂಗ ಸದ್ಗುರುವಿನ ಮಾತಿನಲ್ಲಿ ಹೇಳಿದರೆ, **"ಮನುಷ್ಯನಾಗಿ ಹುಟ್ಟಿದೊಡನೆಯೇ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಳ್ಳುವ ಹಕ್ಕೂ ಜೊತೆಯಲ್ಲಿ ಬರುತ್ತದೆ. ಆ ಹಕ್ಕಿನ ಕಡೆಗೆ ಜನ ಗಮನ ಕೊಡುವುದಿಲ್ಲವಲ್ಲಾ!!"** ಸನಾತನ ಧರ್ಮದಲ್ಲಿ ನಾವು ವಿವಿಧ ಹಿನ್ನೆಲೆಯಿಂದ ಬಂದ ಮಹಾತ್ಮರನ್ನೂ, ಸಂತರನ್ನೂ ನೋಡುತ್ತೇವೆ. ಇದಕ್ಕೆ ನಿದರ್ಶನವೇ ಆಳ್ವಾರುಗಳು, ದಾಸರು, ನಾಯನಮಾರುಗಳು, ಶರಣರು ಮುಂತಾದವರುಗಳು. ಇವರುಗಳು ಜೀವನದಲ್ಲಿ ಮಾಡಿದ ಆಧ್ಯಾತ್ಮಿಕ ಸಾಧನೆ ಹಾಗೂ ನೀಡಿದ ಕೃತಿಗಳು ವಿಶ್ವದ ಎಲ್ಲೆಡೆಯಲ್ಲಿರುವ ಸಾಧಕ-ಸಾಧಕಿಯರಿಗೆ ದಾರಿದೀಪಗಳಾಗಿವೆ. ಪ್ರಸ್ತುತ ಶಿವ ಶರಣ-ಶರಣೆಯರನ್ನು ನೋಡಿದರೆ, ಅವರು ವಿವಿಧ ರೀತಿಯ ಹಿನ್ನೆಲೆಗಳಿಂದ ಬಂದಿದ್ದರೂ, ಆಧ್ಯಾತ್ಮಿಕ ತತ್ವಗಳ ಅನುಭಾವದ ಆಧಾರದ ಮೇಲೆ ಅನುಭವ ಮಂಟಪದಲ್ಲಿ ವಚನಗಳನ್ನು ನೀಡಿ ಅಮರ ವಚನಕಾರರಾಗಿದ್ದಾರೆ.

ವಚನಕಾರರಲ್ಲಿ ಮೊದಲಿಗರಾಗಿ ಸಿಕ್ಕುವುದು ಜೇಡರ ದಾಸಿಮಯ್ಯ. ಈತ ಚಾಲುಕ್ಯ ಜಯಸಿಂಹನ (೧೦೧೫-೧೦೪೨) ಕಾಲದಲ್ಲಿ ಇದ್ದವನೆಂದು ತಿಳಿದು ಬರುತ್ತದೆ. ಜೇಡರ ದಾಸಿಮಯ್ಯನ ಸುಮಾರು ೧೫೦ ವಚನಗಳು ದೊರೆತಿವೆ. 'ರಾಮನಾಥ' ಎಂಬುದು ಈತನ ವಚನಗಳ ಅಂಕಿತ. ಈತನ ಪ್ರಭಾವ ಬಸವಣ್ಣನವರ ಮೇಲೆ ಗಾಢವಾಗಿ ಆಗಿತ್ತು. ಸಕಲೇಶ ಮಾದರಸ ಬಸವಣ್ಣನ ಸಮಕಾಲೀನರೇ ಆದರೂ, ಬಸವಣ್ಣನಿಗಿಂತ ವಯಸ್ಸಿನಲ್ಲಿ ಹಿರಿಯರಾದ ವಚನಕಾರರಲ್ಲಿ ಒಬ್ಬರಾಗಿದ್ದರು. ಸುಮಾರು ೮೮ ವಚನಗಳು ಇವರಿಂದ ರಚಿತವೆಂದು ಸಿಕ್ಕಿವೆ. ಈತನ ವಚನಗಳ ಅಂಕಿತ "ಸಕಳೇಶ್ವರ".

ಬಸವಣ್ಣನ ಕಾಲದ ಮತ್ತೊಬ್ಬ ಹಿರಿಯ ವಚನಕಾರನೇ ಪ್ರಭುದೇವ ಅಥವಾ ಅಲ್ಲಮಪ್ರಭು. ಬಸವಣ್ಣನೂ ಈತನೂ ಸೇರಿ ಕಲ್ಯಾಣದಲ್ಲಿ ಶಿವ ಶರಣ-ಶರಣೆಯರನ್ನೆಲ್ಲಾ ಸಂಘಟಿಸಿದರು. ಸಾಧಕ ಸಾಧಕಿಯರಿಗೆ ಮಾರ್ಗದರ್ಶನ ನೀಡುವುದಕ್ಕಾಗಿ ಅನುಭವ ಮಂಟಪದ ಸ್ಥಾಪನೆಯಾಯಿತು. ಪ್ರಭುದೇವನು ಅದರ ಅಧ್ಯಕ್ಷನಾದನು. ಅನುಭವ ಮಂಟಪದಲ್ಲಿ ಶರಣರ ಗೋಷ್ಠಿಗಳು ನಡೆಯುತ್ತಿದ್ದವು. ಅಲ್ಲಮಪ್ರಭುವಿನ ದಿವ್ಯಶಕ್ತಿಯ ಅಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಈ ಗೋಷ್ಠಿಗಳಿಗೆ ಹಾಗೂ ಅನುಭವಕ್ಕೆ ಎಲ್ಲೆಡೆಯಿಂದಲೂ ಶಿವ ಶರಣ-ಶರಣೆಯರು ಬಂದು ಸೇರುತ್ತಿದ್ದರು. ಅದ್ವೈತ ಸಿದ್ಧಿಯನ್ನು ಹೊಂದಿದ್ದ ಅಲ್ಲಮಪ್ರಭುವಿಗೆ ಬಸವಣ್ಣನು ಶೂನ್ಯ ಸಿಂಹಾಸನವನ್ನು ರಚಿಸಿದ್ದನು. ಶೂನ್ಯವೆಂದರೆ ಮುಕ್ತಿ. ಅಲ್ಲಮಪ್ರಭು ಮಹಾಜ್ಞಾನಿ. ತನ್ನ ಶುದ್ಧ ಬುದ್ಧಿ, ಸೂಕ್ಷ್ಮ ದೃಷ್ಟಿ ಹಾಗೂ ಸತ್ಯಪ್ರೇಮದ ಗುಣಗಳಿಂದ ಗೋಷ್ಠಿಗಳಲ್ಲಿ ಮಂಡಿಸಿದ ವಿಚಾರಗಳ ವಿಮರ್ಶೆ ಮಾಡುತ್ತಿದ್ದನು. ಅಲ್ಲಮಪ್ರಭುವಿನ ಅಂಕಿತ 'ಗುಹೇಶ್ವರ'. ಅಲ್ಲಮ ಪ್ರಭುವಿನ ೧೬೪೫ ವಚನಗಳು ದೊರೆತಿವೆ. ಆತನ ವಚನಗಳು ಆಳವಾಗಿದ್ದು ಸುಲಭವಾಗಿ ಅರ್ಥವಾಗುವುದಿಲ್ಲ.

ಪ್ರಭುದೇವನು ಹಿರಿಯ ಜ್ಞಾನಿಯಾದರೆ, ಬಸವಣ್ಣನು ಹಿರಿಯ ಭಕ್ತ. ಭಕ್ತಿ ಭಂಡಾರಿಯಾದ ಬಸವಣ್ಣನು ಅಲ್ಲಿಯ ಅರಸನ ಮಂತ್ರಿಯೂ ಆಗಿದ್ದನು. ಬಸವಣ್ಣನು ಇಹ-ಪರಗಳನ್ನು ಸಾಧಿಸಲು ನಿತ್ಯ ದಾಸೋಹದ ಜೊತೆಗೆ ಅನುಭವ ಮಂಟಪವನ್ನು ಸ್ಥಾಪನೆ ಮಾಡಿದ್ದರಿಂದ ಗೋಷ್ಠಿಗಳು ನಡೆದುವು. ಬಸವಣ್ಣನ ವಚನಗಳಲ್ಲಿ ಭಕ್ತಿಯ ಹಾಗೂ ಸದಾಚಾರದ ಆಚರಣೆಗಳು ಸರಳವಾಗಿ ಹೇಳಲ್ಪಟ್ಟಿವೆ. ಬಸವಣ್ಣನ ಅಂಕಿತ 'ಕೂಡಲ ಸಂಗಮದೇವ'. ಬಸವಣ್ಣನ ೧೪೧೪ ವಚನಗಳು ದೊರೆತಿವೆ.

ವಚನಕಾರರಲ್ಲಿ ಹೇಗೆ ಬಸವಣ್ಣನು ಅಗ್ರಗಣ್ಯನೋ ಹಾಗೆ ಅಕ್ಕಮಹಾದೇವಿ ವಚನಕಾರ್ತಿಯರಲ್ಲಿ ಅಗ್ರಗಣ್ಯೆ.

(ಮುಂದಿನ ಪುಟಕ್ಕೆ)

# ಅಂತರಂಗದ ಅನ್ವೇಷಣೆ

## ವಚನ ಸೌರಭ (ಮುಂದುವರೆದುದು)

ಅಕ್ಕಮಹಾದೇವಿಯನ್ನು ಕನ್ನಡ ಸಾಹಿತ್ಯದ ಮೊದಲ ಕವಿಯಿತ್ರಿ ಎನ್ನಬಹುದು. ಅಕ್ಕಮಹಾದೇವಿಯ ಚರಿತ್ರೆ ಹಾಗೂ ಕೃತಿಗಳಿಂದ ತಿಳಿಯುವ ಅವಳ ಆಧ್ಯಾತ್ಮಿಕ ಸಾಧನೆ ಹಾಗೂ ಸಿದ್ಧಿಯು ಅದ್ಭುತ. ಮಧುರ ಭಾವದ ಭಕ್ತಿಯ ಮೂಲಕ ಶರಣಸತಿ-ಲಿಂಗಪತಿ ಭಾವದಲ್ಲಿ ವಿಶ್ವಕ್ಕೇ ಈಶ್ವರನಾದ ಶ್ರೀ ಚೆನ್ನಮಲ್ಲಿಕಾರ್ಜುನನೇ ತನ್ನ ಪತಿಯೆಂದು ವರಿಸಿದಳು. ಉತ್ತರದೇಶದ ಶ್ರೀ ಮೀರಾಬಾಯಿ ಹಾಗೂ ತಮಿಳುದೇಶದ ಶ್ರೀ ಗೋದಾದೇವಿ (ಅಥವಾ ಆಂಡಾಳ್) ಅವರಂತೆ ಮಧುರ ಭಕ್ತಿಯ ಸಾಧನಾ ಮಾರ್ಗವನ್ನು ವಿಶ್ವಕ್ಕೇ ತೋರಿದವಳು ಮಹಾದೇವಿಯಕ್ಕ. ಇವಳ ಅಂಕಿತ 'ಚೆನ್ನಮಲ್ಲಿಕಾರ್ಜುನ'. ವಚನಗಳ ಜೊತೆಗೆ ಅಕ್ಕಮಹಾದೇವಿಯು ಅರವತ್ತೇಳು ತ್ರಿಪದಿಗಳನ್ನು ಒಳಗೊಂಡ 'ಯೋಗಾಂಗ ತ್ರಿಪದಿ' ಎಂಬ ತಾತ್ವಿಕ ಗ್ರಂಥವನ್ನು ಬರೆದಿದ್ದಾಳೆ. ಅಕ್ಕಮಹಾದೇವಿ ಅನುಭವ ಮಂಟಪದಲ್ಲಿ ಅಲ್ಲಮಪ್ರಭುವಿನೊಡನೆ ನಡೆಸಿದ ಸಂವಾದ ಅದ್ಭುತವಾದುದು. ಅಕ್ಕಮಹಾದೇವಿಯ ಸುಮಾರು ೪೩೪ ವಚನಗಳು ದೊರೆತಿವೆ.

ಶ್ರೀ ಚೆನ್ನಬಸವಣ್ಣನು ಶ್ರೀ ಬಸವಣ್ಣನ ಸೋದರಳಿಯ. ಅನುಭವ ಮಂಟಪದ ವ್ಯವಸ್ಥೆಯಲ್ಲಿ ಶ್ರೀ ಬಸವಣ್ಣನಿಗೆ ಬಹಳ ಸಹಾಯ ನೀಡುತ್ತಾನೆ. ಚೆನ್ನಬಸವಣ್ಣನು ಪ್ರಭುದೇವರಿಂದ 'ಅವಿರಳ ಜ್ಞಾನಿ', 'ಸ್ವಯಂಭೂ ಜ್ಞಾನಿ' ಎಂದು ಕರೆಯಿಸಿಕೊಂಡ ಶರಣ. ಶರಣ ಸಮೂಹದಲ್ಲಿ ವಯಸ್ಸಿನಿಂದ ಅತ್ಯಂತ ಕಿರಿಯನಾಗಿದ್ದರೂ ಜ್ಞಾನದಲ್ಲಿ ಹಿರಿಯನೆನಿಸಿಕೊಂಡ ಶರಣ. ಆಗ ತಾನೇ ರೂಪುಗೊಳ್ಳುತ್ತಿದ್ದ ಶರಣಧರ್ಮಕ್ಕೆ ಒಂದು ನಿಶ್ಚಿತ ಸೈದ್ಧಾಂತಿಕ ರೂಪವನ್ನು ನೀಡಿ ಅದು ಸರ್ವ ವೇದ್ಯ ಹಾಗೂ ಸಾರ್ವಕಾಲಿಕವಾಗುವಂತೆ ನೋಡಿಕೊಂಡ ಕೀರ್ತಿ ಈತನದು. ಹೀಗಾಗಿ ಈತ 'ಷಟ್ ಸ್ಥಲ ಚಕ್ರವರ್ತಿ' ಎಂಬ ಪ್ರಶಂಸೆಗೆ ಪಾತ್ರನಾಗಿದ್ದಾನೆ. ಈತನ ಅಂಕಿತ 'ಕೂಡಲ ಚೆನ್ನಸಂಗಮದೇವ'. ಈತನ ೧೭೬೩ ವಚನಗಳು ದೊರೆತಿವೆ. ಪ್ರಮುಖ ವಚನಕಾರರಲ್ಲಿ ಮತ್ತೊಬ್ಬ ಶರಣ ಸಿದ್ದರಾಮ. ಈತನ ಅಂಕಿತ 'ಕಪಿಲಸಿದ್ಧ ಮಲ್ಲಿಕಾರ್ಜುನ'. ಈತನ ೧೧೬೨ ವಚನಗಳು ದೊರೆತಿವೆ. ಕರ್ಮಯೋಗಿಯಾಗಿದ್ದ ಈತ ಪ್ರಭುದೇವರ ಪ್ರಭಾವದಿಂದ ಜ್ಞಾನಯೋಗಿಯಾದನೆಂದು ತಿಳಿಯುತ್ತದೆ. ಮತ್ತೊಬ್ಬ ವಚನಕಾರ ಆದಯ್ಯ. ಈತನು ಗುಜರಾತಿನಿಂದ ಕನ್ನಡನಾಡಿಗೆ ಬಂದು ಪುಲಿಗೆರೆಯಲ್ಲಿ ಜೈನ ವ್ಯಾಪಾರಿಯೊಬ್ಬನ ಮಗಳಾದ ಪದ್ಮಾವತಿಯನ್ನು ಮದುವೆಯಾದನು. ಈ ದಂಪತಿಗಳು ಶಿವ ದೀಕ್ಷೆಯನ್ನು ಪಡೆದು ಶರಣ ಆದಯ್ಯನು ಸೌರಾಷ್ಟ್ರದಿಂದ ಸೋಮೇಶ್ವರನನ್ನು ಕರೆತಂದು ಪುಲಿಗೆರೆಯ ಜೈನ ಬಸದಿಯಲ್ಲಿ ಸ್ಥಾಪಿಸಿದನೆಂದು ತಿಳಿದು ಬರುತ್ತದೆ. ಈತನ ಅಂಕಿತ 'ಸೌರಾಷ್ಟ್ರ ಸೋಮೇಶ್ವರ'. ಈತನ ೪೦೩ ವಚನಗಳು ದೊರೆತಿವೆ. ಈ ಮೇಲಿನ ಪ್ರಮುಖ ವಚನಕಾರರ ಜೊತೆಗೆ ಹನ್ನೆರಡನೆಯ ಶತಮಾನದಲ್ಲಿ ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯ, ಸೊಡ್ಡಳ ಬಾಚರಸ, ಬಹುರೂಪಿ ಚೌಡಯ್ಯ, ಡೋಹರ ಕಕ್ಕಯ್ಯ, ಮೋಳಿಗೆ ಮಾರಯ್ಯ, ಮೇದಾರ ಕೇತಯ್ಯ, ಕೋಲಶಾಂತಯ್ಯ, ಮುಕ್ತಾಯಕ್ಕ, ಲಕ್ಕಮ್ಮ, ಮಹಾದೇವಿಯಮ್ಮ ಇತ್ಯಾದಿ ಅನೇಕಾನೇಕ ಶರಣ-ಶರಣೆಯರೂ, ವಚನಕಾರರೂ ಹಾಗೂ ವಚನಕಾರ್ತಿಯರೂ ಆಗಿದ್ದರೆಂದು ತಿಳಿಯುತ್ತದೆ. ಒಟ್ಟಿನಲ್ಲಿ ಮುನ್ನೂರಕ್ಕೂ ಮೇಲೆ ವಚನಕಾರರೂ ಹಾಗೂ ವಚನಕಾರ್ತಿಯರೂ ಇದ್ದರು. ವಿವಿಧ ಕಾಯಕವನ್ನು ಮಾಡುತ್ತಿದ್ದ ಈ ಶರಣ-ಶರಣೆಯರು ಸಮಾನತೆಯ ವೇದಿಕೆಯ ಮೇಲೆ ತತ್ವ ವಿವೇಚನೆ ಮಾಡುತ್ತಿದ್ದರು.

### ವಚನ ಸಾಹಿತ್ಯ

ಜಗತ್ತಿನ ಸಾಹಿತ್ಯದಲ್ಲಿ ವಚನ ಸಾಹಿತ್ಯವನ್ನು ಹೋಲುವಂತಹ ಸಾಹಿತ್ಯ ಬಹಳ ಅಪರೂಪ. ಅದರಲ್ಲೂ ಕನ್ನಡ ಸಾಹಿತ್ಯಕ್ಕೆ ವಚನ ಸಾಹಿತ್ಯವು ಅಪೂರ್ವ ಕೊಡುಗೆ. ವಚನಗಳೆಂದರೆ ನಡುಗನ್ನಡ ಶೈಲಿಯ ಅನುಭಾವದ ಆಧಾರದ ಮೇಲೆ ಗದ್ಯದ ರೂಪಿನಲ್ಲಿ ಹೊರಬಂದ ಆಧ್ಯಾತ್ಮಿಕ ಭಾವಗೀತೆಗಳು. **(ಮುಂದಿನ ಪುಟಕ್ಕೆ)**

## ವಚನ ಸೌರಭ (ಮುಂದುವರೆದುದು)

ವಚನಗಳ ವಿಷಯ ಹಾಗೂ ಶೈಲಿಗಳೆಂಬ ಎರಡೂ ದೃಷ್ಟಿಯಿಂದ ನೋಡಿದಾಗ ಈ ಸಾಹಿತ್ಯದ ಲಕ್ಷಣಗಳನ್ನು ಡಾ|| ರಂ. ಶ್ರೀ. ಮುಗಳಿಯವರು ತಮ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ರೀತಿ ಗುರುತಿಸಬಹುದೆಂದು ಹೇಳಿದ್ದಾರೆ.

(೧) ಅನುಭವದ ಗಾಢಸೂಕ್ಷ್ಮತೆಯೊಡನೆ ಉಕ್ತಿಯ ಸಹಜತೆ, (೨) ಲೌಕಿಕ ದೃಷ್ಟಾಂತಗಳ, ಗಾದೆ ಮಾತು ಹಾಗೂ ನಲ್ನುಡಿಗಳ ಮಾಲಿಕೆ, (೩) ಸಹಜ ಸ್ಫೂರ್ತಿಯಿಂದ ಹೊರಬಂದ ಸಾಂಕೇತಿಕತೆ ಹಾಗೂ ತಾತ್ವಿಕ ಶ್ಲೇಷ, (೪) ಇಷ್ಟ ದೇವತೆಯ ಇದಿರಲ್ಲಿ ಭಕ್ತಿನಮ್ರವಾದ, ಪ್ರಾಂಜಲವಾದ ಅಂತರಂಗದಲ್ಲಿನ ನಿರೀಕ್ಷಣೆ, (೫) ಸ್ವಂತದ ಕಾಯಕಗಳಿಗೆ ಅನುಗುಣವಾದ ಹೋಲಿಕೆಗಳಿಂದ ಪರಮಾರ್ಥದ ನಿರೂಪಣೆ (೬) ಸಂಬೋಧನಾ ರೂಪದಲ್ಲಿ ತಂತಮ್ಮ ಅಂಕಿತಗಳಿಂದ ಪ್ರತಿಯೊಂದು ವಚನದ ಮುಕ್ತಾಯ (೭) ಸ್ವಾಭಾವಿಕವಾದ ಲಾಲಿತ್ಯ, ಮಾರ್ದವ ಕ್ವಚಿತ್ತಾದ ಪಾರುಷ್ಯ ಮತ್ತು ಸಾತ್ವಿಕ ಸಂತಾಪ ಹಾಗೂ ಜೊತೆಗೆ ಕಟು ಟೀಕೆ (೮) ಹಳೆಗನ್ನಡವು ಹೊಸಗನ್ನಡವಾಗಿ ರೂಪಾಂತರವಾಗುತ್ತಿರುವ ಸಂಧಿಕಾಲದ ನಡುಗನ್ನಡ ಶೈಲಿ, ಮಾರ್ಗದೇಸಿಗಳ ಸಮನ್ವಯ ಪ್ರಯೋಗ (೯) ಪ್ರಾಯೋಗೀತೆಯ ಮೂಲಕ ಹಳೆಗನ್ನಡ ಮತ್ತು ಹೊಸಗನ್ನಡ ಎರಡರಲ್ಲೂ ಕಾಣದೊರೆಯದ ಹಲಕೆಲವು ನಡುಗನ್ನಡ ಪದಗಳು (ಉದಾಹರಣೆಗೆ ಹುಟ್ಟಿತ್ತೆ, ಐದುಗೆ, ಮಾಬುದು, ಕಬ್ಬುನ). ಈಗ ಉದಾಹರಣೆಗೆ ಕೆಲವು ವಚನಗಳನ್ನು ನೋಡೋಣ. ವಚನಕಾರರಲ್ಲಿ ಮೊದಲಿಗನಾದ ಜೇಡರ ದಾಸಿಮಯ್ಯನ ಕೆಳಗಿನ ವಚನದಲ್ಲಿ ಗುರುಚರಣಗಳ ಶಕ್ತಿಯನ್ನು ಸುಂದರವಾಗಿ ವರ್ಣಿಸಿದೆ.

**ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದಡೆ,**
**ಆ ತೃಣವನು ಆ ಕೆಂಡ ನುಂಗುವಂತೆ, ಗುರುಚರಣದ ಮೇಲೆ**
**ತನು ತೃಣವನಿರಿಸಿದಡೆ ಆ ತನುವೆಲ್ಲ ಲಿಂಗಮಯ ಕಾಣಾ**
**ರಾಮನಾಥಾ**

ಮತ್ತೊಬ್ಬ ಹಿರಿಯ ವಚನಕಾರರಾದ ಸಕಲೇಶ ಮಾದರಸನ ಈ ವಚನದಲ್ಲಿ ಶುದ್ಧ ಭಕ್ತಿ ಸಾಧಿಸುವುದು ಎಷ್ಟು ಕಷ್ಟ ಎಂದು ಹೇಳಿದೆ. ದೇಹ ದೇವರ ಮುಂದೆ ಬಗ್ಗಿದ್ದರೂ ಮನಸ್ಸು ಮಾತ್ರ ಅಶುದ್ಧತೆಯಿಂದ ಕೂಡಿ ಪ್ರಾಪಂಚಿಕ ಓಡಾಟದಲ್ಲಿದೆ.

**ಎನ್ನ ಮನದಲ್ಲಿ ದಿಟವಿಲ್ಲ, ಪೂಜಿಸಿ ಏವೆನು?**
**ಹೃದಯದಲ್ಲೊಂದು, ವಚನದಲ್ಲೊಂದು ಎನಗೆ ನೋಡಾ.**
**ಏನ ಕಾಯ ಭಕ್ತ, ಮನ ಭಾವಿ ಸಕಳೇಶ್ವರ ದೇವಾ.**

ಅನುಭವ ಮಂಟಪದ ಅಧ್ಯಕ್ಷ ಸ್ಥಾನದಲ್ಲಿದ್ದು ಶೂನ್ಯ ಸಿಂಹಾಸನದಲ್ಲಿ ಕುಳಿತ ಮಹಾಜ್ಞಾನಿ ಅಲ್ಲಮಪ್ರಭುವಿನ ಈ ವಚನದಲ್ಲಿ ಜ್ಞಾನಿಗಳ ಲಕ್ಷಣವನ್ನು ಸುಂದರವಾಗಿ ಹೇಳಿದೆ. ಅರಿತವರು ಅರಿಯದವರಂತಿರುತ್ತಾರೆ.

**ಅರಿದೆವರಿದೆವೆಂಬಿರಿ ಅರಿದ ಪರಿಯೆಂತು ಹೇಳಿರೆ?**
**ಅರಿದವರು ಅರಿದೆವೆಂಬರೆ?**
**ಅರಿಯಬಾರದ ಘನವರಿದವರು**
**ಅರಿಯದಂತಿಪ್ಪರು ಗುಹೇಶ್ವರಾ.**

ಭಕ್ತಿಭಂಡಾರಿ ಬಸವಣ್ಣ ಅನುಭವ ಮಂಟಪವನ್ನು ಸ್ಥಾಪಿಸಿದ್ದರಿಂದ, ಅನೇಕ ಶಿವ ಶರಣ-ಶರಣೆಯರು ಸಂಘಟಿಸಿ ತತ್ವವಿಚಾರ ಗೋಷ್ಠಿ ನಡೆಸಲನುವಾಯಿತು. ವಚನ ಸಾಹಿತ್ಯ ರೂಪುಗೊಂಡಿತು. ಬಸವಣ್ಣನ ವಚನಗಳು ಸರಳ ಮತ್ತು ಸುಂದರ. ಈ ಕೆಳಗಿನ ವಚನದಲ್ಲಿ ಅಲ್ಪವಾದ ಪ್ರಾಪಂಚಿಕ ಆಸೆಗಳನ್ನು ಅರಸುತ್ತಾ ಹೋಗುವ ಕೋತಿಯಂತಿರುವ ಮನಸ್ಸಿಗೆ ಪರಮಾತ್ಮನೆಂಬ ಕಲ್ಪವೃಕ್ಷವನ್ನೇರು ಎಂದು ಚೆನ್ನಾಗಿ ಹೇಳಿದೆ.

**ಎನ್ನ ಮನವೆಂಬ ಮರ್ಕಟನು**
**ತನುವಿಕಾರವೆಂಬ ಅಲ್ಪಸುಖದಾಸೆಗಾಡಿ**
**ವೃಥಾ ಭ್ರಮೆಗೊಂಡು, ನಾನಾ ದೆಸೆಗೆ ಲಂಘಿಸಿ,**
**ಅಳಲಿಸಿ ಬಳಲಿಸುತ್ತಿದೆ ನೋಡಾ !**
**ಕೂಡಲಸಂಗಮ ದೇವರೆಂಬ ಕಲ್ಪವೃಕ್ಷಕ್ಕೆ ಲಂಘಿಸಿ,**
**ಅಪರಿಮಿತ ಸುಖವನ್ನೈದದು ನೋಡಾ.**

ಅಕ್ಕಮಹಾದೇವಿ ಮೊದಲ ವಚನಕಾರ್ತಿ. ಅಕ್ಕಮಹಾದೇವಿಯ ಈ ವಚನದಲ್ಲಿ ಜೀವನವನ್ನು ಶೃಂಗಾರಮಯವಾಗಿ (ಸಂತೋಷದಿಂದ) ಎಲ್ಲರೂ ಹೇಗೆ ನಡೆಸಬಹುದೆಂದು ಸರಳಸುಂದರವಾಗಿ ಹೇಳಿದೆ.

**ಕಣ್ಗೆ ಶೃಂಗಾರ ಗುರುಹಿರಿಯರ ನೋಡುವುದು**
**ಕರ್ಣಕ್ಕೆ ಶೃಂಗಾರ ಪುರಾತನರ ಸಂಗೀತಗಳಂ ಕೇಳುವುದು**
**ವಚನಕ್ಕೆ ಶೃಂಗಾರ ಸತ್ಯವ ನುಡಿವುದು**
**ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ**

(ಮುಂದಿನ ಪುಟಕ್ಕೆ)

# ಅಂತರಂಗದ ಅನ್ವೇಷಣೆ

## ವಚನ ಸೌರಭ (ಮುಂದುವರೆದುದು)

**ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು**
**ಜೀವಿಸುವ ಜೀವನಕ್ಕೆ ಶೃಂಗಾರ ಗಣಮೇಳಾಪ**
**ಇವಿಲ್ಲದೆ ಜೀವಿಯ ಬಾಳುವೆ ಏತಕ್ಕೆ ಬಾತೆಯಯ್ಯಾ**
**ಚೆನ್ನಮಲ್ಲಿಕಾರ್ಜುನಾ?**

ಮೇಲಿನ ವಚನದಲ್ಲಿ ಶೃಂಗಾರವೆಂದರೆ ಅಲಂಕಾರ ಮಾಡಿಕೊಂಡು ಸಂತೋಷಪಡುವುದು. ಗಣಮೇಳಾಪ ಎಂದರೆ ಶರಣ ಗೋಷ್ಠಿ.

ಚೆನ್ನಬಸವಣ್ಣನು ಪ್ರಮುಖವಾದ ವಚನಕಾರರಲ್ಲೊಬ್ಬನು. ಎಲ್ಲೆಡೆಯೂ ಇದ್ದು, ಎಲ್ಲೆಡೆಯೂ ಚರಿಸುತ್ತಾ ಜಗತ್ಕಾರಣ-ವಾದುದೇ ಈ ಪರಮಾತ್ಮ ವಸ್ತು ಎಂದು ಸುಂದರವಾಗಿ ಕೆಳಗಿನ ವಚನದಲ್ಲಿ ಹೇಳಿದೆ.

**ಊರಲ್ಲಿರುವ ವಸ್ತು ಅದೆ ನೋಡಯ್ಯಾ**
**ಮನದಲ್ಲಿರುವ ವಸ್ತು ಅದೆ ನೋಡಯ್ಯಾ**
**ಚರಿಸಿ ಚರಿಸಿ ಜಗವನುದ್ಧರಿಸುವ ವಸ್ತು ಅದೆ ನೋಡಯ್ಯಾ**
**ಮೂಲೋಕದೆರೆಯ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ**
**ಪರವಸ್ತು ಅದೆ ನೋಡಯ್ಯಾ.**

ಪ್ರಮುಖ ವಚನಕಾರರಲ್ಲೊಬ್ಬನಾದ ಶರಣ ಆದಯ್ಯನ ಕೆಳಗಿನ ವಚನದಲ್ಲಿ ಪರಮಾತ್ಮವಸ್ತು ಹೇಗೆ ನಮ್ಮಲ್ಲಿ ಹಾಸುಹೊಕ್ಕಿದೆ-ಯೆಂದು ಸುಂದರ ಉದಾಹರಣೆಗಳ ಮೂಲಕ ಹೇಳಿದೆ. ಕಂಚಿನ ವಿಗ್ರಹದಲ್ಲಿನ ಕಂಚಿನಂತೆ, ಮಗ್ಗದಲ್ಲಿ ಹಾಸುಹೊಕ್ಕಿರುವ ದಾರದಂತೆ, ಚಿನ್ನದಲ್ಲಿನ ಬಣ್ಣದಂತೆ ಹಾಗೂ ಬಟ್ಟೆಯಲ್ಲಿರುವ ನೂಲಿನಂತೆ ನಮ್ಮಲ್ಲಿರುವನು ಪರಮಾತ್ಮ.

**ಕಟ್ಟಣೆಯೊಳಗಿನ ಕಾಂಸ್ಯಕದಂತೆ,**
**ಅಣಿಯೊಳಗಣ ಕೇಣದಂತೆ,**
**ಚಿನ್ನದೊಳಗಣ ಬಣ್ಣದಂತೆ,**
**ಪಟದೊಳಗಣ ತಂತುವಿನಂತೆ**
**ಎನ್ನಲ್ಲಿ ಭಿನ್ನವಿಲ್ಲದಿದ್ದೆಯಲ್ಲಾ ಸೌರಾಷ್ಟ್ರ ಸೋಮೇಶ್ವರಾ**

ಈ ರೀತಿ ಅನೇಕಾನೇಕ ಶಿವಶರಣ-ಶರಣೆಯರ ಅಸಂಖ್ಯಾತ ವಚನಗಳು ಕೂಡಿ ವಚನಸಾಹಿತ್ಯವಿಂದು ಕನ್ನಡ ಸಾಹಿತ್ಯ ಶಿಖರಗಳಲ್ಲೊಂದಾಗಿದೆ.

**ಸಾರಾಂಶ**

ವಚನಗಳು ಶಿವ ಶರಣ-ಶರಣೆಯರ ಅನುಭಾವದಿಂದ ಹೊರಬಂದು ವಿಶ್ವದ ಎಲ್ಲೆಡೆಯ ಸಾಧಕ ಸಾಧಕಿಯರಿಗೆ ಪ್ರಗತಿ ಹೊಂದಲು ದಾರಿದೀಪಗಳಾಗಿವೆ. ಸದಾಚಾರ, ಸಾಮಾಜಿಕ ಪ್ರಗತಿ, ಆಧ್ಯಾತ್ಮಿಕ ಸಾಧನೆ ಮುಂತಾದ ವಿಷಯಗಳಲ್ಲಿ ವಚನಸಾಹಿತ್ಯ ಮಾರ್ಗದರ್ಶನ ನೀಡುತ್ತದೆ. ಇಂತಹ ವಚನಸಾಹಿತ್ಯವನ್ನು ಅಧ್ಯಯನ ಮಾಡಿ ಜೀವನದಲ್ಲಿ ಅಳವಡಿಸಿಕೊಂಡು ಶಿವ ಶರಣ-ಶರಣೆಯರಿಗೆ ಕೃತಜ್ಞತಾಪೂರ್ವಕ ನಮನಗಳನ್ನು ಸಲ್ಲಿಸಬೇಕು.

**ಗ್ರಂಥಸೂಚಿ:**


೧) ಕನ್ನಡ ಸಾಹಿತ್ಯ ಚರಿತ್ರೆ, ರಂ ಶ್ರೀ ಮುಗಳಿ, ಉಷಾ ಸಾಹಿತ್ಯಮಾಲೆ, ಮೈಸೂರು ೧೯೬೧.

೨) ಕನ್ನಡ ಸಾಹಿತ್ಯ ಚರಿತ್ರೆ, ತ ಸು ಶಾಮರಾಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೭

೩) ವಚನ ಧರ್ಮ ಸಾರ, ಎಂ ಆರ್ ಶ್ರೀನಿವಾಸಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೩

೪) ವಚನ ಶಾಸ್ತ್ರ ರಹಸ್ಯವು, ರಂಗನಾಥ ರಾಮಚಂದ್ರ ದಿವಾಕರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೩

೫) ಬಸವೇಶ್ವರರ ಸಮಕಾಲೀನರು, ಬಸವ ಸಮಿತಿ, ಬೆಂಗಳೂರು, ೧೯೮೯

೬) ವಚನ, ಸಂಪಾದಕ: ಎಂ ಎಂ ಕಲಬುರ್ಗಿ, ಬಸವ ಸಮಿತಿ, ಬೆಂಗಳೂರು, ೨೦೧೭ ■


ಲೇಖನ

# ರಸಋಷಿ ಶ್ರೀ ಕುವೆಂಪುರವರಿಗೆ ನುಡಿ ನಮನ



ಬಿಂದುಮಾಧವಿ ಪಾಲಾಕ್ಷಪ್ಪ

ಕುವೆಂಪು ಎನ್ನುವ ಹೆಸರನ್ನು ಕೇಳಿದರೆ ಸಾಕು ಕನ್ನಡಿಗರ ಮನ ಹೂಬನವಾಗುವುದು. ಮಲೆನಾಡ ಕನಸುಗಳು, ಮನಸುಗಳು, ಕಥೆಗಳು, ಗಿರಿ, ಗಗನ, ನದಿ-ಸರೋವರಗಳು, ಗಿಳಿ-ಗೊರವಂಕಗಳು, ಸಕಲವೂ ಕಣ್ಮುಂದೆ ಹಾಯ್ದು ಮುದ ನೀಡುವುವು. ಶಿಲ್ಪಿಯ ಕೈಚಳಕದಿಂದ ಮೂರ್ತ ರೂಪ ಪಡೆದಾಗ ಶಿಲೆ ದೇವರೆನಿಸಿಕೊಳ್ಳುತ್ತದೆ. ಹಾಗೆಯೇ ಕುಪ್ಪಳ್ಳಿಯ ಸಾಧಾರಣ ಬಂಡೆಯೊಂದು "ಕವಿಶೈಲ" ವೆನಿಸಿಕೊಂಡದ್ದು ನಮ್ಮ ಕವಿ ಕುವೆಂಪುರವರು ಅದರ ಮೇಲೆ ಕುಳಿತು ಕಾವ್ಯರಚನೆ ಮಾಡಿದುದರಿಂದ. ಅವರ ವಿಚಾರ ಲಹರಿಯೋ ಅದರ ಆಯಾಮವೇ ವಿಭಿನ್ನ. ಯಾವ ಕಥೆಯೇ ಆಗಲಿ ಅಲ್ಲಿ ಯಾರನ್ನೂ ದೂಷಿಸರು. ಅವರವರ ಗುಣಾವಗುಣಗಳಿಗೆ ಒಂದು ಕಾರಣವನ್ನು ಹುಡುಕಿ ಅವರನ್ನು ಸಮರ್ಥಿಸಿ ಆ ಪಾತ್ರಗಳನ್ನು ಸತ್ಪಥದತ್ತ ಕೊಂಡೊಯ್ಯುವುದೇ ಈ ಮಹಾನ್ ಚೇತನದ ಸದಾಶಯ. ತನ್ನ ಮನೆ, ತನ್ನೂರು, ತನ್ನ ಭಾಷೆ, ತನ್ನ ನಾಡು ಮತ್ತು ತನ್ನ ದೇಶಗಳನ್ನು ಪ್ರೀತಿಸಿದರು.




ಇನ್ನು ಇವರ ಕೃತಿಗಳಲ್ಲಿ ಬರುವ ಪಾತ್ರಗಳ ವಿಷಯಕ್ಕೆ ಬಂದರೆ ನೈಜ ಕಥೆಗಳಲ್ಲಿ ಇರುವ ಪಾತ್ರಗಳು ಅವರವರ ಗುಣಾವಗುಣ-ಗಳನ್ನು ಮೈಗೂಡಿಸಿ ಕೊಂಡಂತೆಯೇ ಇವೆ. ಮಹಾಛಂದಸ್ಸಿನ "ಶ್ರೀ ರಾಮಾಯಣದರ್ಶನಂ" ಮೇರುಕೃತಿಯನ್ನು ಓದುವವರೆಗೆ ನಾವೆಲ್ಲಾ ಮಂಥರೆಯನ್ನು ದ್ವೇಷಿಸಿದವರೇ. ಕುವೆಂಪು ಅವರ ಬರವಣಿಗೆಯಿಂದ ನಮ್ಮ ದೃಷ್ಟಿಕೋನಗಳು ಬದಲಾದವು. ರಾವಣನ ಪಾತ್ರವೂ ಕೊನೆಯಲ್ಲಿ ಒಳ್ಳೆಯ ವಿಚಾರಧಾರೆಯಿಂದ ವಿಜೃಂಭಿಸಿತು. ದುಷ್ಟರಿಗೂ ಸಚ್ಚಾರಿತ್ರ್ಯದ ಮೆರುಗು ನೀಡುವುದು ಕುವೆಂಪುರವರ ಮನೋಧರ್ಮ. 'ಶ್ರೀರಾಮಾಯಣದರ್ಶನಂ' ಮಹಾಕಾವ್ಯವಂತೂ ವರ್ಣನಾತೀತ. "ರಾಮಾಯಣಂ ಅದು ವಿರಾಮಾಯಣಂ ಕಣಾ" ಎಂಬ ವಾಣಿ ಅದು ಅವರ ಗುರುಗಳಾದ ಶ್ರೀ ವೆಂಕಣ್ಣಯ್ಯನವರದು. ಈ ವಾಣಿಯಿಂದಲೇ ಕುವೆಂಪುರವರು ನಮಗೆ ಇಂತಹ ಮಹಾನ್ ಕೃತಿಯ ದರ್ಶನವನ್ನು ಮಾಡಿಸಿದರು.

ಈ ಬರವಣಿಗೆ ಏಕಮುಖವಾಗದೆ ಮಲೆನಾಡಿನತ್ತ ಹೋದರೆ, ಆಹಾ ಆ ಕಥೆಗಳು ನಿತ್ಯನೂತನ ಸತ್ಯಾನ್ವೇಷಣೆಯಂತಿವೆ. ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಇವುಗಳು ಅಂದಿನ ಮಲೆನಾಡ ಜೀವನದ ಕೈಗನ್ನಡಿಗಳು.

ಕುವೆಂಪುರವರ ಕವಿತೆಗಳು, ಒಂದೊಂದೂ ಅಣಿಮುತ್ತುಗಳು. "ಕನ್ನಡಕ್ಕಾಗಿ ಕೈ ಎತ್ತು ಆಗ ಅದು ಕಲ್ಪವೃಕ್ಷವಾಗುತ್ತದೆ ! ಕನ್ನಡಕ್ಕಾಗಿ ಕೊರಳೆತ್ತು. ಆಗ ಅಲ್ಲಿ ಪಾಂಚಜನ್ಯ ಮೊಳಗುತ್ತದೆ !" ಎಂದು ಕನ್ನಡಿಗರನ್ನು ಎಚ್ಚರಿಸಿದರು ನಮ್ಮ ಕುವೆಂಪು.

ಕುವೆಂಪು ಅವರು ಇಡೀ ವಿಶ್ವವನ್ನೇ ಪ್ರೀತಿಸಿದವರು. ವಿಶ್ವಮಾನವ ಸಂದೇಶವನ್ನು ಸಾರಿದವರು. "ವಸುಧಾ ಏವ ಕುಟುಂಬಕಂ" ಎಂಬ ವೇದವಾಕ್ಯ ಕುವೆಂಪುರವರ ಉಸಿರಾಗಿತ್ತು.

**ನಿಚ್ಚವೂ ನೆನೆಯಿರೊಮ್ಮೆ ಕುವೆಂಪುವ ಸಿರಿಯಕ್ಕೆ ! ಸೊಗಮಕ್ಕೆ ! ಬಾಳು ಬಂಗಾರಮಕ್ಕೆ !** ■

ನಮನ

# ತ್ರಿವಿಧ ದಾಸೋಹಿ ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು



ಎಂ.ಜಿ.ಪ್ರಸಾದ್

"*ದೇಹಕ್ಕೆ ಹಸಿವಾದರೆ ಪ್ರಸಾದದ ಅಗತ್ಯವುಂಟು. ಹಾಗೆಯೇ ಮನಸ್ಸಿನ ಹಸಿವಿಗೆ ಪ್ರಾರ್ಥನೆಯ ಅಗತ್ಯವುಂಟು. ಪ್ರಸಾದ ಸೇವನೆಯಲ್ಲೂ, ಪ್ರಾರ್ಥನೆಯಲ್ಲು ಏಕಾಗ್ರತೆ ಅತ್ಯವಶ್ಯಕ.*"

ಕಾಯಕ ಯೋಗಿಯಾಗಿ ಅನ್ನ, ಅಕ್ಷರ, ಅರಿವು ಎಂಬ ತ್ರಿವಿಧ ದಾಸೋಹವನ್ನು ಆಚರಿಸುತ್ತಾ ಜಗದ ಸಂತರೆಂದೂ, ನಡೆದಾಡುವ ದೇವರೆಂದೂ ಅಸಂಖ್ಯಾತ ಭಕ್ತರಿಂದ ಮನ್ನಣೆ ಪಡೆದ ಶ್ರೀ ಡಾ|| ಶಿವಕುಮಾರ ಸ್ವಾಮೀಜಿಯವರು ಇದೇ ಜನವರಿ ೨೧, ೨೦೧೯ರಂದು ತಮ್ಮ ಇಹಯಾತ್ರೆಯನ್ನು ಮುಗಿಸಿ ಲಿಂಗೈಕ್ಯರಾದರು. ಮಾಗಡಿ ತಾಲೂಕಿನ ವೀರಾಪುರ ಗ್ರಾಮದಲ್ಲಿ ಶ್ರೀಮತಿ ಗಂಗಮ್ಮ ಮತ್ತು ಶ್ರೀ ಪಟೇಲ್ ಹೊನ್ನೇಗೌಡ ದಂಪತಿಗಳ ೧೩ ಮಕ್ಕಳಲ್ಲಿ ಕೊನೆಯವರಾಗಿ ಶಿವಣ್ಣ ಎಂಬ ನಾಮಾಂಕಿತದೊಡನೆ ಏಪ್ರಿಲ್ ೧, ೧೯೦೭ರಂದು ಜನಿಸಿದ ಇವರು ಹುಟ್ಟಿದೂರಿನ ಸಮೀಪದ ಪಾಲನಹಳ್ಳಿ ಹಾಗೂ ತುಮಕೂರು ತಾಲೂಕಿನ ನಾಗವಲ್ಲಿಯಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಪಡೆದರು. ತುಮಕೂರಿನಲ್ಲಿಯೇ ಪದವಿಪೂರ್ವ ಶಿಕ್ಷಣ ಪಡೆದು ಬೆಂಗಳೂರಿನಲ್ಲಿ ಬಿ ಎ ಪದವಿ ಪಡೆದರು. ಆ ವೇಳೆಗೆ ಶಿವಣ್ಣನವರಿಗೆ ೨೩ ವರ್ಷಗಳು. ಇದರ ಜೊತೆಗೆ ಶಿವಣ್ಣನವರಿಗೆ ಸಿದ್ದಗಂಗಾ ಮಠಾಧಿಪತಿಗಳಾಗಿದ್ದ ಶ್ರೀ ಶ್ರೀ ಉದ್ದಾನ ಶಿವಯೋಗಿಗಳ ಪರಿಚಯವಲ್ಲದೇ ಒಡನಾಟವೂ ಆಗಿದ್ದಿತು.

೧೯೩೦ರಲ್ಲಿ ನಡೆದ ಅನಿರೀಕ್ಷಿತ ಘಟನೆಯೊಂದರಿಂದ ಶ್ರೀ ಶಿವಣ್ಣನವರು ಸನ್ಯಾಸಾಶ್ರಮವನ್ನು ಸ್ವೀಕರಿಸಿದರು. ಅದೇನೆಂದರೆ ಸಿದ್ದಗಂಗಾ ಮಠದ ಶ್ರೀ ಶ್ರೀ ಉದ್ದಾನ ಶಿವಯೋಗಿಗಳ ಶಿಷ್ಯರೂ ಹಾಗೂ ಶ್ರೀಮಠದ ಉತ್ತರಾಧಿಕಾರಿಯೂ ಆಗಿದ್ದ ಶ್ರೀ ಮರುಳಾರಾಧ್ಯರು ಆಕಸ್ಮಿಕವಾಗಿ ಶಿವೈಕ್ಯರಾಗುತ್ತಾರೆ. ಇವರ ಕ್ರಿಯಾ ಸಮಾಧಿ ಕಾರ್ಯಕ್ಕೆ ಬಂದಿದ್ದ ಶ್ರೀ ಶಿವಣ್ಣನವರ ಹಿನ್ನೆಲೆ ಮತ್ತು ಮನೋಧರ್ಮವನ್ನು ಅರಿತುಕೊಂಡಿದ್ದ ಶ್ರೀ ಶ್ರೀ ಉದ್ದಾನ ಶಿವಯೋಗಿಗಳು ಎಲ್ಲರ ಸಮ್ಮುಖದಲ್ಲಿ ಅವರನ್ನು ಸಿದ್ದಗಂಗಾ ಮಠದ ಉತ್ತರಾಧಿಕಾರಿಯೆಂದು ಘೋಷಿಸಿ ಶ್ರೀ ಶಿವಕುಮಾರ ಸ್ವಾಮೀಜಿಯೆಂದು ನಾಮಾಂಕಿತ ಮಾಡುತ್ತಾರೆ. ಹೀಗೆ ಸಾಮಾನ್ಯ ಉಡುಗೆ ಧರಿಸಿ ಕ್ರಿಯಾ ಸಮಾಧಿ ಕಾರ್ಯಕ್ಕೆ ಬಂದಿದ್ದ ಶ್ರೀ ಶಿವಣ್ಣನವರು ಕಾವಿವಸ್ತ್ರ ಹಾಗೂ ರುದ್ರಾಕ್ಷಿ ಮಾಲೆ ಧರಿಸಿ ಶ್ರೀ ಶಿವಕುಮಾರ ಸ್ವಾಮಿಗಳಾಗಿ ಕಾಯಕ ಯೋಗಕ್ಕೆ ಸಿದ್ಧರಾದರು. ೧೯೪೧ – ರಲ್ಲಿ ಶ್ರೀ ಶ್ರೀ ಉದ್ದಾನ ಶಿವಯೋಗಿಗಳು ಲಿಂಗೈಕ್ಯರಾದ ಬಳಿಕ ಶ್ರೀ ಶಿವಕುಮಾರ ಸ್ವಾಮೀಜಿಯವರು ಮಠದ ಅಧ್ಯಕ್ಷರಾದರು.

ಇದಾದ ಮೇಲೆ ಮಠದ ಆಡಳಿತದ ಜೊತೆಗೆ ಮಠದ ವಿದ್ಯಾರ್ಥಿಗಳ ಹಾಗೂ ಶಿಕ್ಷಣ ಸಂಸ್ಥೆಗಳ ಯೋಗಕ್ಷೇಮದ ಜವಾಬ್ದಾರಿಯೂ ಶ್ರೀ ಶಿವಕುಮಾರ ಸ್ವಾಮೀಜಿಗಳ ಪಾಲಿಗೆ ಬರುತ್ತದೆ. ಆಗಿನ ಕಾಲದಲ್ಲಿ ಬಂದ ವಿವಿಧ ಕಷ್ಟಗಳನ್ನು ಹಾಗೂ ಸಮಸ್ಯೆಗಳನ್ನು ಎದಿರಿಸುತ್ತಾ ಶ್ರೀ ಸ್ವಾಮೀಜಿಯವರು ತಮ್ಮ ಗುರುಗಳ ಆಶಯದಂತೆ ಮಠದ ಶಿಕ್ಷಣ ಸಂಸ್ಥೆಗಳನ್ನು, ವಿದ್ಯಾರ್ಥಿ ನಿಲಯಗಳನ್ನು, ಪ್ರಸಾದ ನಿಲಯಗಳನ್ನು ಸಮರ್ಥವಾಗಿ ಮುನ್ನಡೆಸುತ್ತಾರೆ. ೧೯೪೦ರಲ್ಲಿ ಮಠದಲ್ಲಿದ್ದ ೪೦ ವಿದ್ಯಾರ್ಥಿಗಳ ಸಂಖ್ಯೆ ೧೯೭೯ಕ್ಕೆ ೩೮೦೦ಕ್ಕೂ ಹೆಚ್ಚಾಗಿತ್ತು. ಆಗ ಅಲ್ಲಿಗೆ ಭೇಟಿ ನೀಡಿದ ಆಗಿನ ಪ್ರಧಾನಿ ಮೊರಾರ್ಜಿ ದೇಸಾಯಿಯವರು "ಒಂದೇ ಮಠದ ಆಶ್ರಯದಲ್ಲಿ ಉಚಿತ ಊಟ, ವಸತಿ ಪಡೆದು ಇಷ್ಟೊಂದು ಮಕ್ಕಳು ಓದುತ್ತಿರುವುದನ್ನು ನಾನು ಇಲ್ಲೇ ಮೊದಲು ಕಂಡಿದ್ದು" ಎಂದು ಉದ್ಗರಿಸಿದರು. ಹೀಗೆಯೇ ಭಾರತದ ಅಧ್ಯಕ್ಷರಾಗಿದ್ದ ಡಾ|| ಅಬ್ದುಲ್ ಕಲಾಂ ಮತ್ತು ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಶ್ರೀ ಮಠಕ್ಕೆ ಭೇಟಿ ನೀಡಿ ಅಲ್ಲಿನ ಅಸಾಧಾರಣ ತ್ರಿವಿಧ ದಾಸೋಹವನ್ನು ನೋಡಿ, ಶ್ರೀ ಸ್ವಾಮೀಜಿಯವರ ಸಂದರ್ಶನ ಮತ್ತು ಆಶೀರ್ವಾದಗಳನ್ನು ಪಡೆದಿದ್ದಾರೆ. ಶ್ರೀ ಸ್ವಾಮೀಜಿಯವರೇ ಸ್ವತಃ ಕಾರ್ಯಕ್ಷೇತ್ರದ ವಿಭಾಗಗಳಿಗೆ(ಎಂದರೆ ಅಡುಗೆ ಮನೆ, ಪ್ರಸಾದ ನಿಲಯ ಮತ್ತು ವಿದ್ಯಾರ್ಥಿ ನಿಲಯಗಳಿಗೆ) ಆಗಾಗ ಭೇಟಿ ನೀಡಿಕಾರ್ಯಕರ್ತರಿಗೆ ಸ್ಫೂರ್ತಿ ಹಾಗೂ ಉತ್ತೇಜನ ನೀಡುತ್ತಿದ್ದರೆಂದು ಆಗ ವಿದ್ಯಾರ್ಥಿಗಳಾಗಿದ್ದು ಈಗ ಉತ್ತಮ ಜೀವನ ನಡೆಸುತ್ತಿರುವ ಅನೇಕ ವ್ಯಕ್ತಿಗಳು ತಮ್ಮ ಕೃತಜ್ಞತೆ ಸಲ್ಲಿಸಿದ್ದಾರೆ. ಸುಮಾರು ೬೦ ವಿದ್ಯಾರ್ಥಿಗಳಿಂದ ಆರಂಭಿಸಿ ೧೦೦೦೦ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಅನ್ನ, ವಸತಿ ಹಾಗೂ ವಿದ್ಯೆಗಳನ್ನು ಉಚಿತವಾಗಿ ನೀಡುವಂತೆ ಸಂಸ್ಥೆಯನ್ನು ಬೆಳೆಸಿದ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳ ಕಾಯಕ ಹಾಗೂ ವ್ಯಕ್ತಿತ್ವ ಅಸಾಧಾರಣವಾದುದು. ಪರರಿಂದ ಪ್ರಶಂಸೆ, ಬಿರುದು ಹಾಗೂ ಮನ್ನಣೆಗಳ ಬಗ್ಗೆ ಗಮನವಿಲ್ಲದ ಸ್ವಾಮೀಜಿಯವರಿಗೆ ತಾನಾಗಿಯೇ ಗೌರವ ಡಾಕ್ಟರೇಟ್, ಕರ್ನಾಟಕ ರತ್ನ ಹಾಗೂ ಪದ್ಮಭೂಷಣ ಪ್ರಶಸ್ತಿಗಳು ಬಂದವು.

ಧ್ಯಾನ, ಪೂಜೆ ಹಾಗು ಕಾಯಕಬದ್ದವಾದ ಶಿಸ್ತಿನ ದಿನಚರಿಯನ್ನು ಪಾಲಿಸುತ್ತಿದ್ದ ಪೂಜ್ಯ ಶ್ರೀ ಡಾ|| ಶಿವಕುಮಾರ ಸ್ವಾಮಿಯವರ ಜೀವನದಲ್ಲಿ ಶರಣರ ಹಾಗು ಸಂತರ ತತ್ವಗಳ ಆಚರಣೆ ಕಾಣುತ್ತಿತ್ತು. ಸ್ವಾಮಿ ವಿವೇಕಾನಂದರ ಸಾಧನೆಗಳಿಂದಲು ಸಹ ಶ್ರೀ ಸ್ವಾಮೀಜಿಯವರು ಪ್ರಭಾವಿತರಾಗಿದ್ದರು. ಸನಾತನ ಧರ್ಮದ ಮೂಲಭೂತ ತತ್ವವೇ "ಎಲ್ಲ ಮನುಷ್ಯರಲ್ಲಿಯೂ ಸಮಾನವಾದ ಆತ್ಮಶಕ್ತಿಯಿದೆ. ಅದನ್ನು ಉದ್ದೀಪನಗೊಳಿಸುವುದೇ ವಿದ್ಯೆ." ಎಂದು ನಂಬಿ, ಈ ಮಹಾನ್ ತತ್ವವನ್ನು ಕಾರ್ಯರೂಪಕ್ಕೆ ತಂದ ಶಕ್ತಿರೂಪದ ಮಹಾವ್ಯಕ್ತಿಯಾದ ಪೂಜ್ಯಶ್ರೀ ಡಾ|| ಶಿವಕುಮಾರ ಸ್ವಾಮಿಗಳ ಕೆಳಗಿನ ನುಡಿಮುತ್ತುಗಳು ಸದಾ ಸ್ಫೂರ್ತಿದಾಯಕ.

**(ಮುಂದಿನ ಪುಟಕ್ಕೆ)**

## ನಮನ

### ಪೂಜ್ಯ ಡಾ|| ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು



**ಮುಂದುವರೆದುದು....**

*"ದೇಹಕ್ಕೆ ಹಸಿವಾದರೆ ಪ್ರಸಾದದ ಅಗತ್ಯವುಂಟು. ಹಾಗೆಯೇ ಮನಸ್ಸಿನ ಹಸಿವಿಗೆ ಪ್ರಾರ್ಥನೆಯ ಅಗತ್ಯವುಂಟು. ಪ್ರಸಾದ ಸೇವನೆಯಲ್ಲೂ, ಪ್ರಾರ್ಥನೆಯಲ್ಲು ಏಕಾಗ್ರತೆ ಅತ್ಯವಶ್ಯಕ."*
*"ಜೀವನದಲ್ಲಿ ಒಳ್ಳೆಯ ಭವಿಷ್ಯ ಉಂಟಾಗಬೇಕಾದರೆ, ಗೌರವವಾದ ಬಾಳ್ವಿಕೆ ಉಂಟಾಗಬೇಕಾದರೆ, ಕಾಲವನ್ನು ವ್ಯರ್ಥಮಾಡದೆ ಜ್ಞಾನ ಸಂಪಾದನೆ ಮಾಡಬೇಕು."*
*"ಜಗತ್ತಿನ ಜೀವನದಲ್ಲಿ ಮನುಷ್ಯಧರ್ಮದ ಅವಶ್ಯಕತೆ ಮಿಗಿಲಾಗಿರುವುದು. ಧರ್ಮ ಆಚರಣೆಯಾದಾಗ ಜಗತ್ತು, ಶಾಂತಿಯ ಸಾಮ್ರಾಜ್ಯವಾಗುತ್ತದೆ. ಧರ್ಮದ ಉಲ್ಲಂಘನೆಯಾದರೆ, ಜಗತ್ತಿನಲ್ಲಿ ಗೊಂದಲದ ವಾತಾವರಣ ಉಂಟಾಗುತ್ತದೆ."*

ಲಿಂಗೈಕ್ಯರಾದ ಶ್ರೀ ಶಿವಕುಮಾರ ಸ್ವಾಮೀಜಿಯವರಿಗೆ ನಮ್ಮ ನಮನವನ್ನು ಸಲ್ಲಿಸುವ ಈ ಸಂದರ್ಭದಲ್ಲಿ ಶರಣ ಆದಯ್ಯನ ಈ ಕೆಳಗಿನ ವಚನವು ನೆನಪಿಗೆ ಬರುತ್ತದೆ.

"ಅರುವಿನ ಕ್ರಿಯೆಯಲ್ಲಿ ತೊಳತೊಳಗಿ ಬೆಳಗುವ
ಲಿಂಗೈಕ್ಯನು ಎಂತಿರ್ಪನೆಂದಡೆ:
ಬಾವನ್ನದೊಳಗಿಪ್ಪ ಸುಗಂಧದಂತೆ,
ಮಾಣಿಕ್ಯದೊಳಗಿಪ್ಪ ಸುರಂಗಿನಂತೆ,
ಚಿನ್ನದೊಳಗಿಪ್ಪ ಬಣ್ಣದಂತೆ ಭೇದವಿಲ್ಲದಚಲನಯ್ಯಾ.
ಸಂಪಗೆಯ ಕಂಪುಂಡ ಭ್ರಮರನಂತೆ
ಸೌರಾಷ್ಟ್ರ ಸೋಮೇಶ್ವರಲಿಂಗದ ಪರಮಸುಖದೊಳಗೆ
ಪರವಶನಾದ ಲಿಂಗೈಕ್ಯನು"

ಎಂದರೆ "ತನ್ನ ಅರಿವನ್ನು ಕಾಯಕದ ಮೂಲಕ ಕ್ರಿಯಾರೂಪಕ್ಕೆ ತಂದು ಪ್ರಕಾಶಮಾನವಾಗಿ ಬೆಳಗುತ್ತಿರುವ ಶರಣನು ಲಿಂಗೈಕ್ಯನಾದನೆಂದರೆ ಶ್ರೀಗಂಧದ ಮರದಲ್ಲಿ ಅಡಗಿಹ ಸುಗಂಧದಂತೆ, ಮಾಣಿಕ್ಯದೊಳಗಿನ ಬಣ್ಣದಂತೆ, ಸುವರ್ಣದಲ್ಲಿನ ವರ್ಣದಂತೆ ಹಾಗೂ ಸಂಪಿಗೆಯ ಕಂಪನ್ನುಂಡ ಭ್ರಮರದಂತೆ ಎಲ್ಲವನ್ನೂ ಒಳಗೊಂಡ ಶರಣರ ಆತ್ಮವು, ಸುಖ ಶಾಂತಿಯ ಬೀಡಾದ ಲಿಂಗದಲ್ಲಿ(ಪರಮಾತ್ಮನಲ್ಲಿ) ಲೀನವಾಯಿತು"

ಅರಿವು, ಭಕ್ತಿ ಹಾಗೂ ಕಾಯಕದ ಮೂಲಕ ಎಲ್ಲಾ ಸಾಧಕ ಸಾಧಕಿಯರಿಗೆ ಸದಾ ಸ್ಫೂರ್ತಿಯನ್ನು ನೀಡುವ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳಿಗೆ ನ್ಯೂ ಜೆರ್ಸಿ ಬೃಂದಾವನ ಸಾಂಸ್ಕೃತಿಕ ಸಂಸ್ಥೆಯು ಈ ವಾಣಿಯ ಮೂಲಕ ಭಾವಪೂರ್ಣ ನಮನವನ್ನು ಸಲ್ಲಿಸುತ್ತದೆ. ■

ಲಲಿತ ಪ್ರಬಂಧ

# “ನಿದ್ದಿ ಬಂದವರಿಗೆ ಹಾಸಿಗಿ ಹಾಸಿಕೊಟ್ಟಂಗಾತು”



*ಸರಿತಾ ನವಲಿ*

“ಸಂಕ್ರಮಣ ಹತ್ರ ಬರ್ಲಿಕ್ಕೆ ಹತ್ಯದಲ್ಲ...ಎಳ್ಳಿನ ಸಾಮಾನು ತರಿಸಿಕೊಟ್ರ, ಬೀರಲಿಕ್ಕೆ ಕುಸುರೆಳ್ಳು ಮತ್ತ ಅದರ ಜೋಡಿ ಸೇಂಗಾ-ಪುಠಾಣಿ, ಬೆಲ್ಲ, ಒಣಕೊಬ್ಬರಿ ಹಾಕಿ ತಿನ್ನಲಿಕ್ಕೂ ಎಳ್ಳು-ಬೆಲ್ಲ ಮಾಡಿ ಇಡತೀನಿ”, ಹೀಂಗ ನಮ್ಮವ್ವ (ಅಜ್ಜಿ) ಪ್ರತಿಸಲ ಸಂಕ್ರಾಂತಿ ಹಬ್ಬ ಇನ್ನೊಂದೆರಡು ವಾರ ಇರೋ ಮುಂದ ನಮ್ಮಮ್ಮಗ ಹೇಳಿ-ಹೇಳಿ, ಕಿರಾಣಿ ಸಾಮಾನು ತರಿಸಿಕೊಂಡು ಎಳ್ಳುಬೆಲ್ಲ-ಕುಸುರೆಳ್ಳು ಮಾಡಿ ಇಡ್ತಿದ್ದಳು. ಇನ್ನೇನು ಭೋಗಿ ಹಬ್ಬದ ಮರದಬಾಗಿಣಕ್ಕ ಸಾಮಾನು ಹಾಕಿ-ಕೊಳ್ಳೋದ್ರಾಗ ಎಳ್ಳು-ಬೆಲ್ಲ ತುಂಬಿದ ಎರಡು ಡಬ್ಬಿಗೊಳು ತಯಾರಾಗಿರ್ತಿದ್ದವು. ನಾನು ಮತ್ತ ನಮ್ಮಕ್ಕಂದಿರು ಅದೆಷ್ಟೋ ಮನಿಗಳಿಗೆ ಎಳ್ಳು ಬೀರಿದ ಮ್ಯಾಲೂ ಒಂದು ವಾರದ ತನಕ ಅನ್ರಿ, ಇಲ್ಲ ರಥಸಪ್ತಮಿ ತನಕನಾದರೂ ಮನ್ಯಾಗ ಎಲ್ಲರಿಗೂ ತಿನ್ನಲಿಕ್ಕೆ ಆಗೋವಷ್ಟು ಎಳ್ಳು-ಬೆಲ್ಲನ ಅವ್ವ ಮಾಡಿರ್ತಿದ್ದಳು. ಅತ್ತಿ ಏನರ ಹೇಳ್ತಾಳಂದ್ರ ಅದಕ್ಕ ಸೊಸಿ, ಅದ ನಮ್ಮಮ್ಮ ಇಲ್ಲ ಅನ್ನಲಾರದೇ ಸಾಥ್ ಕೊಡ್ತಿದ್ದಳು. ಕೊಬ್ಬರಿ ಗಿಟಕದ ಸಿಪ್ಪಿ ತೆಗೆದು, ಸಣ್ಣ-ಸಣ್ಣ ಹೋಳು ಹೆಚ್ಚಿ, ಸ್ಟೀಲ್ ತಟ್ಟ್ಯಾಗಿಟ್ಟು ಅಂಗಳದಾಗೋ, ಮಾಳಗಿ ಮ್ಯಾಲೋ ಇಲ್ಲಾ ಕಾಂಪೌಂಡಿನ ಮ್ಯಾಲೋ, ಒಟ್ಟಿನ್ಯಾಗ ಎಲ್ಲಿ ಬಿಸಿಲು ಇರ್ತಿತ್ತು ಅಲ್ಲಿ ಕೊಬ್ಬರಿ ಒಣಗಿಸಲಿಕ್ಕೆ ಇಡತಿದ್ದರು. ಇನ್ನು ಬೆಲ್ಲಾನೂ ಅಷ್ಟೇ. ಅಚ್ಚು ಬೆಲ್ಲಾನ ಸಣ್ಣ-ಸಣ್ಣ ಹೋಳುಮಾಡಿ, ಗರಿ-ಗರಿಯಾಗಿ ಒಣಗಿಸುತ್ತಿತ್ತು. ಹೊತ್ತು ಏರೂ ಮುಂದ ಒಂದು ಕಡೆ ಇಟ್ಟಿರುತ್ತಿದ್ದ ತಟ್ಟಿಗಳು, ಹೊತ್ತು ಇಳದು ಮೂರಾಸಂಜಿ ಆಗೋದ್ರೊಳಗ ಇನ್ನೊಂದು ಕಡೆ ಇರ್ತಿದ್ದವು. ಅಂದ್ರ ಸೂರ್ಯ ಯಾವ ಕಡೆ ಇದ್ದಾನೋ, ಅದ್ರ ಪ್ರಕಾರ ತಟ್ಟಿಗಳ ಲೊಕೇಷನ್ ಬದಲಾಗುತ್ತಿತ್ತು.

“ಮೊದ್ಲೇ 'ನಾಗಪ್ಪ' ಸ್ಟ್ರಾಂಗು! ಮಡಿ-ಮೈಲಿಗಿ ಕಲಬರಕಿ ಆಯ್ತು ಅಂದ್ರ ರಾಂಗ್ ಆಗಿ 'ಬುಸ್' ಅಂದಬಿಟ್ರ ಅನ್ನೊ ಅಂಜಕಿನೇ ಇದಕ್ಕ ಕಾರಣ ಇರಬೇಕಲ್ಲ?”

ಒಂದ್ಸಲ ಕೊಬ್ಬರಿ-ಬೆಲ್ಲ ಒಣಗಿದವು ಅಂದ್ರ, ಸೇಂಗಾ ಹುರಿದು, ಸಿಪ್ಪಿ ಕೇರಿ, ಪುಠಾಣಿ ಆರಿಸಿ, ಎಳ್ಳು ಹುರಿದಿಟ್ಟುಕೊಂಡು, ಎಲ್ಲಾ ಸಾಮಗ್ರಿಗಳನ್ನ ಒಂದ ಅಳತಿಯಿಂದ ಸೇರಿಸಿ, ಡಬ್ಬಿ ತುಂಬಿ ಇಟ್ಟರಂದ್ರ, ಸಂಕ್ರಾಂತಿ ಎಳ್ಳು-ಬೆಲ್ಲ ರೆಡಿ!

ಎಳ್ಳು-ಬೆಲ್ಲದ ತಯಾರಿ ಬಗ್ಗೆ ಇಷ್ಟು ವಿಸ್ತಾರವಾಗಿ ಬರಿಯೋದ್ರ ಹಿಂದ ಒಂದು ಕಾರಣನೂ ಅದ. ಈಗಿನ ಕಾಲದ ಮಕ್ಕಳಿಗೆ (ಮಿಲೆನಿಯಲ್ಸ್) ಇಂಥಾದೇನಾರ ಸುದ್ದಿ ಹೇಳಬೇಕಂದ್ರ, ಅದನ್ನ “ಯೆ ಉನ್ ದಿನೋ ಕಿ ಬಾತ್ ಹೈ” ಅಂತ, ಅಂದಿನ(ಹಿಂದಿನ) ದಿನಗಳಲ್ಲಿನ ಬದುಕಿನ ಸಹಜ ಚಟುವಟಿಕೆಗಳನ್ನ ಕಥಿ ಹೇಳದಂಗ ಹೇಳೋ ಪರಿಸ್ಥಿತೀನ ನಾವೇ ಸೃಷ್ಟಿ ಮಾಡಿಕೊಂಡೀವಲ್ಲ? ಯಾಕಂದ್ರ, ಇತ್ತಿತ್ತಲ್ಯಾಗಿನ ವರ್ಷಗಳೊಳಗ ಅದೆಷ್ಟೋ ಮನಿಗಳೊಳಗ ಹಬ್ಬದ ಸಾಮಾನುಗಳನ್ನು, ಹಬ್ಬದ ದಿನ ಮಾಡೋ ವಿಶೇಷ ಅಡಗಿಗಳನ್ನ, ಅಜ್ಜಿ-ಮುತ್ತಜ್ಜೇರ ಕಾಲದಿಂದಲೂ ಮಾಡಿಕೊಂಡು ಬಂದ ಅಡಗಿಮನಿ ಪದಾರ್ಥಗಳನ್ನ, ಸ್ವಲ್ಪ ವರ್ಷಗಳಿಂದ ಕಾಂಡಿಮೆಂಟ್ಸ್ ಅಂಗಡಿಯವರು, ಅಡಗಿ ಕೇಟರಿಂಗ್-ಕಾಂಟ್ರ್ಯಾಕ್ಟನವರು ಮತ್ತು ಈಗೀಗ ಕೆಲವು ಹೊಟೇಲಿನವರು ಪಾಲಿಸಲಿಕ್ಕೆ ಹತ್ಯಾರ ಅನ್ನೋದನ್ನ ನೋಡ್ತೇವಿ. ಇದನ್ನ ವ್ಯಾಪಾರದ ಚಾಕಚಕ್ಯತೆ ಅನ್ನಬಕೋ ಅಥವಾ ನಾವುಗಳು ಈ ಸಾಂಪ್ರದಾಯಿಕ ಅವಶ್ಯಕತೆಗಳನ್ನು ಪೂರೈಸಿ-ಕೊಳ್ಳಲಿಕ್ಕೆ ಅವರನ್ನೆಲ್ಲ ಅವಲಂಬಿಸಿದ್ದೇವೋ, ಅದು ನಮಗ-ನಿಮಗ ಬಿಟ್ಟದ್ದು.

ನಾವು ರೂಢಿಸಿಕೊಂಡು, ಪಾಲಿಸಿಕೊಂಡು ಬರ್ತಾ ಇರೋ ಸಾಂಪ್ರದಾಯಿಕ ಬದುಕಿನ್ಯಾಗ, ಯುಗಾದಿ ಹಬ್ಬವನ್ನು ಹೊಸ ಸಂವತ್ಸರದಿಂದ ನಮ್ಮ ಹೊಸ ವರ್ಷ ಅಂತ ಸುರು ಮಾಡಿದ್ರ,-

**(ಮುಂದಿನ ಪುಟಕ್ಕೆ)**

## "ನಿದ್ದಿ ಬಂದವರಿಗೆ ಹಾಸಿಗಿ ಹಾಸಿಕೊಟ್ಟಂಗಾತು"

**(ಮುಂದುವರೆದುದು)**

ಮುಂದಿನ ಸಂವತ್ಸರದ ತನಕ ಒಂದು ವರ್ಷದಾಗ ಬರೋ ಎಲ್ಲಾ ಹಬ್ಬಗಳ ಜೊತಿಗೆ ಒಂದಲ್ಲ ಒಂದು ವಿಶೇಷತೆ ಅದ. ಅದು ಹಬ್ಬದ ಆಚರಣೆ ಆಗಿರಬಹುದು, ಪೂಜಾಪದ್ಧತಿಗಳಿರಬಹುದು, ನೈವೇದ್ಯಕ್ಕೆ ಮಾಡೋ ಪ್ರಸಾದ ಇರಬಹುದು, ಇಲ್ಲ ಆ ಹಬ್ಬದ ದಿನ ಮನ್ಯಾಗ ಮಾಡೋ ಅಡಗಿ ಆಗಿರಬಹುದು, ಎಲ್ಲ ಭಾರೀ ವೈವಿಧ್ಯಮಯ! ಆದ್ರ ಪ್ರತಿಯೊಂದು ಹಬ್ಬದ ದಿನಕ್ಕಂತ ಸೀಮಿತ ಆಗಿದ್ದ ಅಡಗಿ ಭಕ್ಷ-ಪದಾರ್ಥಗಳು ಈಗ ಎಲ್ಲಾ ಕಾಲದೊಳಗೂ ಕೇಟರಿಂಗನ್ಯಾಗ, ಕಾಂಡಿಮೆಂಟ್ಸ್ ಅಂಗಡಿನ್ಯಾಗ, ಸಾಂಪ್ರದಾಯಿಕ ಊಟದ ಹೊಟೇಲನ್ಯಾಗ ಸುಲಭವಾಗಿ ಸಿಗೋ ಹಂಗಾಗಿರೋದು ಆಯಾ ಹಬ್ಬಗಳ ವಿಶೇಷತೆನ ಕಡಿಮೆ ಮಾಡ್ಯಾವ ಅನ್ನೋದೂ ಖರೇ ಅದ.

ಯುಗಾದಿ ಹಬ್ಬ ಬಂತು ಅಂದ್ರ, "ಯುಗ ಯುಗಾದಿ ಕಳೆದರು, ಯುಗಾದಿ ಮರಳಿ ಬರುತಿದೆ..."ಅಂತ ಹಾಡಿಕೋತ ಓಡಾಡುವ ನಮಗೆಲ್ಲಾ ಅದೇನೋ ಸಂಭ್ರಮ, ಉತ್ಸಾಹ. ಆದ್ರ ನಮ್ಮವ್ವ ಮಾಡಿದಂಗ ಹಬ್ಬದ ದಿನ ಒಂದು ಸೇರು (ನಾಲ್ಕು ಪಾವು/ಲೋಟ) ಬ್ಯಾಳಿ ಕುದಿಸಿ(ಮೊದಲಿಗೆ ಹಿತ್ತಾಳಿ ಪಾತ್ರಿಯೊಳಗ ಕಟ್ಟಿಗಿ ಒಲಿಮ್ಯಾಲೆ, ಆಮ್ಯಾಲೆ ಕುಕ್ಕರಿನ್ಯಾಗ ಗ್ಯಾಸಿನ ಮ್ಯಾಲೆ), ರುಬ್ಬುವ ಕಲ್ಲು/ಮಿಕ್ಸಿನ್ಯಾಗ ಹೂರಣ ರುಬ್ಬಿ, ಬಿಸಿ-ಬಿಸಿ ಹೋಳಗಿ ಮಾಡ್ತಿದ್ದ ಪದ್ಧತಿಯೀಗ ಹೊಸ ರೂಪ ಪಡಕೊಂಡದ. ಅದೆಷ್ಟೋ ಮನಿಗಳೊಳಗ ಹಬ್ಬದ ಹಿಂದಿನ ದಿನ ಹೋಳಿಗಿ ಮಾರೋ ಅಂಗಡಿ ಮುಂದು ಸಾಲುಗಟ್ಟಿ ನಿಂತು, ಸರದಿಯೊಳಗ ನಾಲ್ಕೋ-ಎಂಟೋ ಹೋಳಿಗೆ ತಂದು ಫ್ರಿಡ್ಜನ್ಯಾಗಿಟ್ಟು, ಮರದಿವ್ಸ ಊಟಕ್ಕ ಕೂಡೋ ಮೊದಲು ಮೈಕ್ರೋವೇವ್ ನ್ಯಾಗ ಬಿಸಿಮಾಡಿ ತಿಂದು ಹಬ್ಬದ ಊಟ ಅಂತ ಮಾಡ್ತಾರ. ಮನ್ಯಾಗೇ ಹೋಳಿಗೆ ಮಾಡಿ, ಅಷ್ಟಿಷ್ಟು ಸಂಪ್ರದಾಯ ಪಾಲಿಸೋರ ಮುಂದ ಈ ಮಾತ ಬಂದ್ರ ಅದಕ್ಕೊಂದು ಉತ್ತರನೂ ತಯಾರಾಗಿರ್ತದ.

"ಈಗೀಗ ಮೊದಲಿನಂಗ ಮಾಡ್ಲಿಕ್ಕೆ ಕೈಲಾಗಂಗಿಲ್ಲ" ಅಂತ ನಮ್ಮ ಅಮ್ಮನ ವಾರಿಗಿಯೋರು ಹೇಳಿದ್ರ, "ನಮ್ಮನ್ಯಾಗ ಹೋಳಿಗಿ ಯಾರೂ ಹೆಚ್ಚು ತಿನ್ನಂಗಿಲ್ಲ, ಮಕ್ಕಳಿಗಂತೂ ಟ್ರೆಡಿಷಿನಲ್ ಸ್ವೀಟ್ಸ್ ಸೇರಂಗಿಲ್ಲ" ಅಂತ ಹೇಳಿ ಸೋಗು ಮಾಡೋರನ್ನೂ ನೋಡ್ತೀವಿ. ಪಾಪ, ಹಿರೇರಿಗೆ ಕೈಲಾಗಲಿಕ್ಕಿಲ್ಲ. ಆದ್ರ ಸಣ್ಣೋರಾದ್ರೂ ಹಬ್ಬದ ಮಹತ್ವ ತಿಳಿದು, ಯುಗಾದಿಯ 'ಬೇವು-ಬೆಲ್ಲ', ಜೀವನದಾಗಿನ ಕಷ್ಟ-ಸುಖಗಳನ್ನ ಸಮನಾಗಿ ತೊಗೋಬಕು ಅನ್ನೋದನ್ನ ಹೇಳ್ತದ ಅಂತ ತಮ್ಮ ಮಕ್ಕಳಿಗೆ ಹೇಳಿಕೊಡಬೇಕು ಅಂತಾದ್ರೂ ಸಂಪ್ರದಾಯ ಪಾಲಿಸಿಬೇಕಲ್ಲ! ಈಗೀಗ ಬಾಳೆ ಎಲಿ ಹಾಕಿ, ಸಾಂಪ್ರದಾಯಿಕ ಊಟ ಬಡಿಸೋ ಹೊಟೇಲುಗಳು ಅಲ್ಲಲ್ಲಿ ಹುಟ್ಟಿಕೊಂಡಿರೋದು ಬ್ಯಾಚುಲರ್ ಮಂದಿಗೆ ಮನಸ್ಸಿಗೆ ಸಮಾಧಾನ ಕೊಡ್ತಾವ ಅಂದ್ರೂನೂ, ಹಬ್ಬದ ದಿನ ಮನಿಮಂದಿಯೆಲ್ಲ ಅಲ್ಲಿಗೇ ಹೋಗಿ ಊಟ ಮಾಡಿಕೊಂಡು ಬಂದು ಅದು ತಮ್ಮ ಆಧುನಿಕತೆಯ ಲಕ್ಷಣ ಅನ್ನಕೊಳ್ಳೋ ಕೆಲವು ಕುಟುಂಬಗಳನ್ನೂ ನೋಡ್ತೀವಿ. ಹೀಂಗ ಒಂದ್ಸಲ, ಮೊದಲಿನಿಂದಲೂ ಎಲ್ಲಾ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬಂದಿದ್ದ ನಮ್ಮ ದೊಡ್ಡಮ್ಮನ ಮಗ-ಸೊಸೀಗೆ ಹಬ್ಬದ ವಿಶೇಷ ಏನು ಅಂತ ನಾನು ಕೇಳಿದೆ. "ಹೆಂಗಿದ್ರೂ ಆಫೀಸಿಗೆ-ಸಾಲಿಗೆ ಸೂಟಿ ಇರ್ತದಲ್ಲ...ತಡಾ ಆಗಿ ಎಳ್ತೀವಿ, ಆಮ್ಯಾಲೆ ತಯಾರಾಗಿ ಬಾಳೆ ಎಲಿ ಹಾಕಿ ಊಟಕ್ಕ ಬಡಿಸೋ ಹೊಟೇಲಿಗೆ ಹೋಗಿ ಉಂಡು ಬರೋದೆ ಹಬ್ಬದ ವಿಶೇಷ" ಅನ್ನೋ ಉತ್ತರ ಸಿಕ್ಕಿತ್ತು. ಈ ಮಾತನ್ನ ಕೇಳಿದ ನನಗ ಅದು ಅವರ ಮೈಗಳ್ಳತನದ ಪರಮಾವಧಿ ಅನ್ನಿಸಿದ್ದಲ್ದೇ, "ನಿದ್ದಿ ಬಂದವರಿಗೆ ಹಾಸಿಗಿ ಹಾಸಿಕೊಟ್ಟಂಗಾತು" ಅನ್ನೋ ಮಾತು ನೆನಪಾಗಿತ್ತು.

ಈ ಅವಲಂಬನೆ ಬರೀ ಹಬ್ಬದ ಊಟಕ್ಕೆ ಸೀಮಿತ ಆಗಿರದೇ, ನಮ್ಮಮ್ಮ-ಅಜ್ಜಿಯವರು ಯಾವಾಗ್ಲೂ ಮಾಡ್ತಿದ್ದ ಮೆಂತೆಹಿಟ್ಟು, ಚಟ್ನಿಪುಡಿ, ಸಾಂಬಾರುಪುಡಿಗಳು, ಅಳ್ಳಿಟ್ಟು, ಬ್ಯಾಸಿಗ್ಯಾಗ ಮಾಡ್ತಿದ್ದ ಹಪ್ಪಳ-ಸಂಡಿಗಿ, ಮಜ್ಜಿಗಿ ಮೆಣಸಿನಕಾಯಿ, ಶ್ಯಾವಿಗಿ, ಹುರಿಗಾಳು...ಒಂದಲ್ಲ, ಎರಡಲ್ಲ ಅದೆಷ್ಟೋ ಸಾಮಾನುಗಳನ್ನ 'ಸುಬ್ಬಮ್ಮನ ಅಂಗಡಿ' ಇಲ್ಲ 'ಕಮಲಮ್ಮನ ಅಂಗಡಿ'-ಯಿಂದಲೋ ತರ್ತೀವಲ್ಲ, ಅಂಥಾ ಮಂದ್ಯಾಗ ನಾನೂ ಒಬ್ಬಾಕಿ ಇದ್ದೀನಿ.

(ಮುಂದಿನ ಪುಟಕ್ಕೆ)

## ಲಲಿತ ಪ್ರಬಂಧ

### "ನಿದ್ದಿ ಬಂದವರಿಗೆ ಹಾಸಿಗಿ ಹಾಸಿಕೊಟ್ಟಂಗಾತು"
**(ಮುಂದುವರೆದುದು)**

ಮದಿವಿಯಾಗಿ ಇಷ್ಟೋರ್ಷ ಆಗಿದ್ರೂ  ಇವನ್ನೆಲ್ಲ ಮಾಡ್ಲಿಕ್ಕೆ ಕಲ್ತಿಲ್ಲ ಅಂತಲ್ಲ, ಅದೆಷ್ಟೋ ವರ್ಷಗಳಿಂದ ಅಮೆರಿಕಾದಾಗ ನೆಲೆಸಿದ್ದು, ಪ್ರತಿಸಲ ಭಾರತಕ್ಕ ಹೋಗಿ ಬರೂಮುಂದ ಒಂದು ಸೂಟಿಕೇಸಿನಷ್ಟು ಸಾಮಾನು ಸುಬ್ಬಮ್ಮ/ಕಮಲಮ್ಮನ ಅಂಗಡಿಯಿಂದಲೇ ತಂದಿರ್ತೀನಿ. ಇಲ್ಲಿರೋ ನಾವು ಭಾಳಷ್ಟು ಮಂದಿ ಹೀಂಗೇ ಮಾಡ್ತೀವಿ. ಇದನ್ನ ನಮ್ಮ ಮೈಗಳ್ಳತನ ಅನ್ನೋದ್ರ ಬದಲು, "ಈ ಪರದೇಶದಾಗ ಮನಿಯ ಎಲ್ಲಾ ಕೆಲಸಗಳನ್ನೂ ನಾವೇ ಮಾಡಿಕೋಬೇಕು.ಈ ಹೆಚ್ಚಿನ ಕೆಲಸ ಮಾಡಿಕೊಳ್ಳಲಿಕ್ಕೆ ಆಗೂ ದಿಲ್ಲ, ಜೊತಿಗೆ ಇಲ್ಲಿನ ವಾತಾವರಣನೂ ಸಹಕರಿಸೋದಿಲ್ಲ" ಅಂತ ನಮಗ ನಾವೇ ಸಮಾಧಾನ ಮಾಡ್ಕೋತೀವಿ. ಅಲ್ಲದೇ ಇಲ್ಲೇ ಹುಟ್ಟಿ-ಬೆಳಿತಿರೋ ನಮ್ಮ ಮಕ್ಕಳೂ ಮೆಂತೆಹಿಟ್ಟು-ತುಪ್ಪ, ಅರಳಸಂಡಿಗಿತಿಂದು ಬೆಳೀಲಿ ಮತ್ತ ನಮ್ಮೆಲ್ಲ ಸಂಪ್ರದಾಯ ಗಳನ್ನ ಆದಷ್ಟು ಪಾಲಿಸಲಿ ಅನ್ನೋ ಕಾಳಜಿ ಇಲ್ಲಿರೋ ಅಮ್ಮಂದಿರಲ್ಲಿ ನೋಡ್ಲಿಕ್ಕೆ ಸಿಗ್ತದ.

ಬ್ಯಾಸಿಗಿ ಕಳದು ಮಳಿಗಾಲ ಬಂತಂದ್ರ ಸಾಲು-ಸಾಲು ಹಬ್ಬಗಳ ಜೊತಿಗೆ ಸಂಪ್ರದಾಯದ ವಿಶೇಷ ಆಚರಣೆಗಳೊಂದಿಗೆ ಹಿಂದಿನಿಂದಲೂ ಮಾಡಿಕೊಂಡು ಬಂದ ತಿಂಡಿ-ತಿನಿಸುಗಳು, ನೈವೇದ್ಯದ ಪದಾರ್ಥಗಳೂ ಬರ್ತಾವ. ನಮ್ಮನ್ಯಾಗ ನಮ್ಮವ್ವನ ಕಾಲದಿಂದಲೂ ಮಾಡಿಕೊಂಡು ಬಂದ ಮಣ್ಣೆತ್ತಿನ ಅಮಾಸಿ, ಕಾರಹುಣ್ಣಿವಿ, ದಿವಶೀಅಮಾಸಿ ಆದ ಮ್ಯಾಲೆ ಶ್ರಾವಣಮಾಸ ಸುರು ಆಗಿ, ನಾಗರಚೌತಿ-ನಾಗರಪಂಚಮಿಗೆ ಚಿಗಳಿ-ತಂಬಿಟ್ಟು ಮಾಡಲಿಕ್ಕೆ ತಯಾರಿ ಮಾಡ್ಕೋತೀವಿ. ನಾನು ನೋಡಿರೋ ಪ್ರಕಾರ ನಾಗಪ್ಪಗ ನೈವೇದ್ಯ ಮಾಡೋ ಚಿಗಳಿ-ತಂಬಿಟ್ಟುಗಳನ್ನ ಮಾತ್ರ ಎಲ್ಲಾರೂ ತಮ್ಮ-ತಮ್ಮ ಮನ್ಯಾಗೇ ಮಾಡ್ತಾರ. ಇವನ್ನು ಯಾವ ಕಾಂಡಿಮೆಂಟ್ಸ್, ಕೇಟರಿಂಗ್ ನವರಿಗೆ ಹೇಳಿ ಮಾಡಿಸಂಗಿಲ್ಲ. ಮೊದ್ಲೇ 'ನಾಗಪ್ಪ' ಸ್ವಾಂಗು! ಮಡಿ-ಮೈಲಿಗಿ ಕಲಬರಕಿ ಆಯ್ತು ಅಂದ್ರ ರಾಂಗ್ ಆಗಿ 'ಬುಸ್' ಅಂದಬಿಟ್ರ ಅನ್ನೊ ಅಂಜಕಿನೇ ಇದಕ್ಕ ಕಾರಣ ಇರಬೇಕಲ್ಲ?

ಆದ್ರ, ಗಣಪ್ಪನ ಕಡುಬು, ಮೋದಕನ ಕೇಟರಿಂಗ್ ನವರಿಗೆ ಆರ್ಡರ್ ಮಾಡಿ ತರಬಹುದು. ಈಗ್ಗೆ ಒಂದು ಹದಿನೈದು ವರ್ಷಗಳ ಹಿಂದ ಗಣೇಶ ಚೌತಿ ಟೈಂನ್ಯಾಗ ಮುಂಬೈಗೆ ಹೋಗಿದ್ದಾಗ, ಅಲ್ಲಿನ ಮಂದಿ ತಮ್ಮ ಮನ್ಯಾಗಿರೋ ಮೂರು ಮಂದಿಗೆ ತಲಿಗೊಂದರ ಹಂಗ ಮತ್ತ ಗಣಪ್ಪನ ನೈವೇದ್ಯಕ್ಕ ಎರಡು... ಹೀಂಗ ಐದು ಮೋದಕಗಳನ್ನೂ ಕೇಟರಿಂಗ್ ನವರಿಗೆ ಆರ್ಡರ್ ಕೊಟ್ಟು ತರ್ತಾರ ಅಂತ ನನ್ನ ಗೆಳತಿ ಹೇಳಿದಾಗ ನಾನು ಗಣಪ್ಪನ ನೆನೆಸಿಕೊಂಡು ಹೊಟ್ಟೆ ಬಿರಿಯ ನಕ್ಕಿದ್ದೆ. ಆದ್ರ ಈಗ ಅದು ಬಹುತೇಕ ಎಲ್ಲಾ ನಗರಗಳೊಳಗೂ ನಡದದ ಅನ್ನೋದು ನೋಡಿ, ನಗರಗಳಲ್ಲಿನ ಒತ್ತಡದ ಜೀವನ ಶೈಲಿನೇ ಇದಕ್ಕ ಮೂಲ ಕಾರಣ ಅಂತ ಅನಸ್ತದ.

ಇನ್ನು ನವರಾತ್ರಿ ಸುರುವಾಗಿ, ಅಖಂಡ ದೀಪ-ಘಟಸ್ಥಾಪನ, ಸರಸ್ವತಿ ಪೂಜಾ-ಆಯುಧ ಪೂಜಾ, ವೆಂಕಟೇಶ ಕಲ್ಯಾಣ, ಗೊಂಬಿ ಕೂಡಿಸೋ ಪದ್ಧತಿಗೊಳ ಜೋಡಿ ಒಂಬತ್ತು ದಿನ ವಿಶೇಷ ಅಡಗಿ ಎಲ್ಲ ನಡೀತದ. ಈ ಎಲ್ಲ ದಿನದಾಗ ನಾವು ಎಷ್ಟರ ಮಟ್ಟಿಗೆ ಕಾಂಡಿಮೆಂಟ್ಸ್ ಅಂಗಡಿ, ಕೇಟರಿಂಗ್ ನವರನ್ನು ಅವಲಂಬಿಸಿರ್ತೀವಿ ಅನ್ನೋದಕ್ಕಿಂತ, ವಿಜಯದಶಮಿ ದಿವಸ "ಬನ್ನಿ ಕೊಟ್ಟು-ತೊಗೊಂಡು, ಬಂಗಾರದ ಹಂಗ ಇರೋಣು" ಅನ್ನುವ ಮಾತು ಹೆಚ್ಚಿನ ಮಹತ್ವ ಪಡಕೋತದ. ದಸರಾ ಹೀಂಗ ಕಳೀತು ಅನ್ನೋ ಹೊತ್ತಿಗೆ ದೀಪಾವಳಿ ಹಬ್ಬ ಬರ್ತದ. ನಮ್ಮನ್ಯಾಗ ಯಾವಾಗಲೂ 'ದೀಪಾವಳಿ ಫರಾಳ' (ತಿಂಡಿ-ತಿನಿಸು)ಗಳದ್ದೆ ಸಂಭ್ರಮ. ನೀರುತುಂಬೋ ಹಬ್ಬದ ದಿನ ರಾತ್ರಿ ಹಂಡೆ ಪೂಜೆ ಸುರು ಮಾಡೋತನಕ ನಾನಾ ಬಗೆಯ ತಿಂಡಿ-ತಿನಿಸುಗಳನ್ನ ನಮ್ಮವ್ವ, ನಮ್ಮಮ್ಮ ಮಾಡ್ತಿದ್ರು. ನಾವೆಲ್ಲರೂ ನರಕ ಚತುರ್ದಶಿ ದಿವಸ ಮುಂಜಾನೆದ್ದು, ಎಣ್ಣಿ ಹಚ್ಚಿಸಿಕೊಂಡು -ಆರತಿ ಮಾಡಿಸ್ಕೊಂಡು, ಎರಕೊಂಡು ನಮ್ಮನಿ ಉಂಡಿ-ಚಕ್ಕಲಿಗಳನ್ನ ತಿಂದು, ಆಜೂ-ಬಾಜೂ ಮನಿಯವರೊಂದಿಗೆ ಹಬ್ಬದ ತಿಂಡಿ-ತಿನಿಸುಗಳನ್ನ ವಿನಿಮಯ ಮಾಡಿಕೊಳ್ಳತಿದ್ವಿ. ನಾಲ್ಕೈದು ದಿನಗಳ ಹಬ್ಬದ ಸಂಭ್ರಮದಾಗ ಒಬ್ಬರ ಮನಿಗೊಬ್ಬರು ಊಟಕ್ಕ ಹೋಗೋದು, ಫಲಹಾರಕ್ಕ ಹೋಗೋದು ನಡದೇ ಇರ್ತಿತ್ತು. **(ಮುಂದಿನ ಪುಟಕ್ಕೆ)**

## ಲಲಿತ ಪ್ರಬಂಧ

### “ನಿದ್ದಿ ಬಂದವರಿಗೆ ಹಾಸಿಗಿ ಹಾಸಿಕೊಟ್ಟಂಗಾತು” (ಮುಂದುವರೆದುದು)

ಆದ್ರ ನಗರದ ಜೀವನದಾಗ ಒಬ್ಬರ ಮನಿಗೊಬ್ಬರು ಹೋಗಿ ಬರೋದು ಕಡಿಮೆ ಆಗಿ ಹೋಗ್ಯದ. ಯಾರಿಗೂ ಯಾವದಕ್ಕೂ ಪುರಸೊತ್ತಿಲ್ಲ. ಫೇಸ್ ಬುಕ್, ವಾಟ್ಸ್ಯಾಪ್ ಮೆಸೇಜ್ ಗಳ ಸಂಭ್ರಮದಾಗೇ ಹಬ್ಬ ಮುಗಿದು ಹೋಗ್ತದ. ಮತ್ತ ಮುಂದ  ಸ್ವಲ್ಪ ದಿವ್ಸಕ್ಕ ಸಂಕ್ರಾಂತಿ ಬಂದೇ ಬಿಡ್ತದ.

ಈ ಸಂಕ್ರಾಂತಿ ಹಬ್ಬದಾಗಾದ್ರೂ ಕೈಲಾಗಂಗಿಲ್ಲ-ಪುರುಸೊತ್ತಿಲ್ಲ ಅಂತಾನೋ ಅಥವಾ ಮೈಗಳ್ಳತನದ ಕಾರಣ ಕೊಟ್ಟೋ, ಬೀರಲಿಕ್ಕೆ-ತಿನ್ನಲಿಕ್ಕೆ ಕುಸುರೆಳ್ಳು, ಎಳ್ಳು-ಬೆಲ್ಲ, ಸಕ್ಕರಿಅಚ್ಚುಗಳನ್ನ ಅಂಗಡಿಯಿಂದ ತರ್ತೀವೋ? ಇಲ್ಲ ಒಂದು ಕೈ ನೋಡೇ ಬಿಡೋಣು ಅಂತ ಅನ್ಕೊಂಡು ಮನ್ಯಾಗ ಮಾಡ್ತಿವೋ? ಅದು ಏನೇ ಇರಲಿ, ಸಣ್ಣ ಮಕ್ಕಳಿದ್ದ ಮನ್ಯಾಗ ದೃಷ್ಟಿ ಪರಿಹಾರಂತ ಹಣ್ಣು ಎರಿಯೋ ಪದ್ಧತೀನ, ಹೆಣ್ಣು ಮಕ್ಕಳಿದ್ದ ಮನ್ಯಾಗ ಎಳ್ಳು ಬೀರೋ ಪದ್ಧತೀನ ಮುಂದುವರಸಿಕೊಂಡು ಹೋಗುದೇ ಒಂದು ಛಂದ. ಮತ್ತ ಒಬ್ಬರಿಗೊಬ್ಬರು ಎಳ್ಳು-ಬೆಲ್ಲ ಕೊಟ್ಟು-ತೊಗೊಂಡು, “ಒಳ್ಳೆ ಮಾತಾಡೋಣ” ಅಂತ ಹೇಳೋ ಸಂಪ್ರದಾಯನ ಮುಂದುವರೆಸಿಕೊಂಡು ಹೋಗುದ್ರಾಗ ಮಾತ್ರ ಮೈಗಳ್ಳತನ ಮಾಡೋದು ಬ್ಯಾಡ, ಏನಂತೀರಿ? ■

---





**ಪ್ರವಾಸ ಕಥನ**

# ಕೈಲಾಸ ಮಾನಸ ಸರೋವರ ಯಾತ್ರೆ - ಒಂದು ಜೀವನಾನುಭವ



***ಅಜೇಯ ರಾವ್***

ಹಿ**ನ್ನೆಲೆ:** ಎಲ್ಲಾ ದೇವರ ಪ್ರೀತಿಸುವ ನನಗೆ ಶಿವ ಮೊದಲಿನಿಂದಲೂ ಇಷ್ಟ. ಆದರೆ ಇನ್ನಷ್ಟು ಹತ್ತಿರವಾದದ್ದು ನಮ್ಮ ಕಷ್ಟ ಕಾಲದಲ್ಲಿ.. ೨೦೧೫ ರ ನವೆಂಬರ್.. ಆಗಿನ್ನೂ ನಮ್ಮ ಇಲ್ಲಿಯ ಹೊಸಮನೆಗೆ ಗೃಹಪ್ರವೇಶ ಮಾಡಿಸಿ ಬೆಂಗಳೂರಿಗೆ ವಾಪಾಸ್ ಹೋದ ಅಮ್ಮನ ಎಂಡೊಸ್ಕೊಪಿ ತಂದಿದ್ದು ದೊಡ್ಡ ಸಿಡಿಲು. “ನಾಲ್ಕನೆ ಹಂತದ ಜಠರದ ಕ್ಯಾನ್ಸರ್, ಮೂರು ಕಡೆ ಹರಡಿದೆ” ಎಂಬ ಸುದ್ದಿ.. ಅಷ್ಟು, ಇನ್ನಷ್ಟು-ಮತ್ತಷ್ಟು ವೈದ್ಯಕೀಯ ಪರೀಕ್ಷೆಗಳು, ಭಯ/ದುಗುಡ ಹೆಚ್ಚಿಸುವ ನೆಂಟರಿಷ್ಟರ ಕೆಲವು ಮಾತುಗಳು ನಮ್ಮೆಲ್ಲರ ಧೈರ್ಯವನ್ನು ಕುಂದಿಸುತ್ತಿದ್ದವು. ಆಗ ನನ್ನ ಮಾವ ಹೇಳಿದ ಅಭಿಪ್ರಾಯ.. “ಪ್ರತಿದಿನ ಮೃತ್ಯುಂಜಯ ಜಪ - ಮಾಡಿ ಎಲ್ಲಾ ಒಳ್ಳೆಯದಾಗುತ್ತದೆ” ಎಂದು.

ದಿನವೂ ಮೃತ್ಯುಂಜಯ ಜಪ ಮಾಡಲು ಶುರುಮಾಡಿದ ನನಗೆ, ದಿನ ದಿನಕ್ಕೂ ಅದೇನೊ ಧೈರ್ಯ.. ಅದೇನೊ ನಿರ್ದೇಶನಾ ಶಕ್ತಿ ಬರಲಾರಂಭಿಸಿತು. ಶಿವ ನನಗೆ ಹೆಚ್ಚು ಹೆಚ್ಚು ಹತ್ತಿರವಾಗುತ್ತಲೇ ಹೋದ. ಒಳ್ಳೆಯ ವೈದ್ಯರು, ಒಳ್ಳೆಯ ಚಿಕಿತ್ಸಾ ವಿಧಾನ ತಾನೆ ತಾನಾಗಿ ಒದಗತೊಡಗಿತು. ದಿನವೂ ಮನೆಯಲ್ಲಿ ಮೊಳಗುತ್ತಿದ್ದ ಮಂತ್ರಗಳು ಮತ್ತು ನಗುವಿನ ಮಾತುಗಳು ಅಮ್ಮನ ಧೈರ್ಯವನ್ನೂ ಹೆಚ್ಚಿಸಿತ್ತು. ಆಗಲೇ ನಾನು “ಹೇ ಈಶ್ವರಾ! ಹೀಗೆಯೆ ಎಲ್ಲಾ ಒಳ್ಳೆಯದಾಗುತ್ತಾ ಹೋಗಲಿ, ಅಮ್ಮ ಹುಶಾರಾದ ಮೇಲೆ ನಿನ್ನನ್ನು ಕೈಲಾಸಕ್ಕೇ ಬಂದು ಕಾಣುವೆ ಎಂದು ಹರಕೆ ಹೊತ್ತಿದ್ದೆ. **(ಮುಂದಿನ ಪುಟಕ್ಕೆ)**



**(ಮುಂದುವರೆದುದು)**

ಕಷ್ಟಗಳು ಮುಗಿದಿರಲಿಲ್ಲ, ಆಗಲೊ ಈಗಲೊ ಎನ್ನುವ ಘಳಿಗೆಗಳು ನೂರೆಂಟು ಬಂದವು. ಆದರೂ ಹೇಗೊ ಪಾರಾಗುತ್ತಾ ಹೋದೆವು. ಅಮ್ಮ ಒಂದು ವರುಷದಲ್ಲಿ ಗುಣವಾದರು. ಈ ಒಂದು ವರ್ಷದಲ್ಲಿ ಶಿವನಲ್ಲಿಗೆ ಹೊರಡುವ, ನನ್ನ ಕೃತಜ್ಞತೆಗಳ, ವಂದನೆಗಳ, ಪ್ರೀತಿಯ ವ್ಯಕ್ತಪಡಿಸುವ ಇಚ್ಛೆ ಹೆಚ್ಚುತ್ತಲೇ ಬಂತು. ೨೦೧೮ರ ಶುಭ ಯುಗಾದಿಯಂದು ನಿರ್ಧಾರ ಧೃಡವಾಯಿತು.

**ಪ್ರಯಾಣ/ವೀಸಾಃ** ಕೈಲಾಸ ಮಾನಸರೊವರ ಇರುವುದು ಚೀನಾದ ಟಿಬೆಟ್ ಪ್ರಾಂತ್ಯದಲ್ಲಿ. ಈ ಹಿಂದೆ ಭಾರತೀಯರಿಗೆ ಕೇವಲ ವಿದೇಶೀ ಮಂತ್ರಾಲಯ/ಭಾರತೀಯ ಸೇನೆಯ ಮುಖಾಂತರ ಮಾತ್ರ ಕೈಲಾಸ ಮಾನಸರೊವರಕ್ಕೆ ಹೋಗಲು ಅವಕಾಶವಿತ್ತು. ಇತ್ತೀಚಿನ ವರುಷಗಳಲ್ಲಿ ಹಲವಾರು ಏಜೆನ್ಸಿಗಳಿಗೆ ನೇಪಾಳದ ಮೂಲಕ ಕೈಲಾಸ ಯಾತ್ರೆ ಮಾಡಿಸಲು ಚೀನಾ ಅನುವು ಮಾಡಿಕೊಟ್ಟಿದೆಯಾದರೂ, ಭಾರತೀಯರಿಗೆ ವೀಸಾ ವಿಷಯಗಳಲ್ಲಿ ಸಾಕಷ್ಟು ನಿರ್ಬಂಧಗಳನ್ನಿಟ್ಟಿದೆ. ಭಾರತೀಯರು ನವದೆಹಲಿಯ ಚೀನಾ ರಾಯಭಾರ ಕಚೇರಿಯಲ್ಲಿ ಮೂಲಪಾಸ್‌ಪೋರ್ಟ್‌ನೊಂದಿಗೆ ಮಾತ್ರ ಟಿಬೆಟ್ ವೀಸಾ ಮಾಡಿಸಿಕೊಳ್ಳಲು ಸಾಧ್ಯ..ಇದಕ್ಕೆ, ಯಾತ್ರೆಯ ೨ ವಾರ ಮುನ್ನ ದೆಹಲಿಯ ಕಚೇರಿಗೆ - ಪಾಸ್‌ಪೋರ್ಟ್ ತಲುಪಿರಬೇಕು. ಹೊರದೇಶದಲ್ಲಿರುವ ಭಾರತೀಯರಿಗೆ ಇಕ್ಕಿಂತ ಹೆಚ್ಚು ವಾರ ರಜ ಸಿಗದಿರುವುದರಿಂದ ಈ ವೀಸಾ ಪ್ರಕ್ರಿಯೆ ಸ್ವಲ್ಪ ಕ್ಲಿಷ್ಟ. ಹಲವಾರು ಪ್ರವಾಸೀ ಸಂಸ್ಥೆಗಳು ಇಲ್ಲ ಎಂದಾದ ಮೇಲೆ, ಕೊನೆಗೆ ನನ್ನ ಯಾತ್ರೆಗೆ ಅನುವು ಮಾಡಿಕೊಟ್ಟದು ಕೈಲಾಸ್ ಜರ್ನೀಸ್ ಎಂಬ ಸಂಸ್ಥೆ. ಅಷ್ಟಾಗಿಯೂ,ಸಮಯ ಹೊಂದಾಣಿಸಲು ನಾನು ಭಾರತದಲ್ಲಿಳಿದ ದಿನವೇ ಸ್ವತಃ ದಿಲ್ಲಿಗೆ ಹೋಗಿ ಪಾಸ್‌ಪೋರ್ಟ್ ಹಸ್ತಾಂತರಿಸಿ ಬರಬೇಕಾಯಿತು. (ಅಮೆರಿಕನ್ ಅಥವಾ ಬೇರೆ ಪೌರತ್ವ ಇದ್ದಲ್ಲಿ ಈ ತೊಂದರೆ ಇಲ್ಲ, ನೇರವಾಗಿ ನೇಪಾಳದ ಖಟ್ಮಂಡುವಿನಲ್ಲಿ ಹೊರಡುವ ೨ ದಿನ ಮುನ್ನ ವೀಸ ಮಾಡಿಸಿಕೊಳ್ಳಬಹುದು).

ಕೈಲಾಸ ಮಾನಸರೊವರ ತಲುಪಲು ಹಲವಾರು ಮಾರ್ಗಗಳಿವೆ. ನಾನು ಹೊರಟಿದ್ದು ಸಿಮಿಕೋಟ್ ಹಿಲ್ಸಾ ದಾರಿಯ ೯-೧೦ ದಿನದ ಯಾತ್ರೆ. ಜುಲೈ ೧ ರಂದು ಬೆಂಗಳೂರಿನಿಂದ ಲಖ್ನೊ ತಲುಪಿದ ನನಗೆ ನೇಪಾಳಗಂಜ್‌ಗೆ ಕಾರು ಕಾಯುತ್ತಿತ್ತು. ನೇಪಾಳಗಂಜ್ ಭಾರತದ ಗಡಿಯಲ್ಲಿರುವ ಒಂದು ಸುಂದರ ಊರು..ನೇಪಾಳದ ಹಿಮಾಲಯದ ಗಿರಿಕಂದರಗಳ ಕೆಲ ಊರುಗಳಿಗೆ ವಿಮಾನದಲ್ಲಿ ಮಾತ್ರ ಹೋಗಲು ಸಾಧ್ಯ. ಅಲ್ಲಿಗೆಲ್ಲಾ ಹೆಚ್ಚು ವಿಮಾನಗಳು ಇಲ್ಲಿಂದಲೇ ಹೊರಡುತ್ತವೆ. ಊರು ತಲುಪಿದ ನನಗೆ ಸುಸಜ್ಜಿತ ಹೋಟೆಲ್ ಕಾಯುತ್ತಿದ್ದಾದರೂ, ನಮ್ಮ ಮುಂದಿನ ಸ್ಟಾಪ್ ಆದ

**(ಮುಂದಿನ ಪುಟಕ್ಕೆ)**

**ಮುಂದುವರೆದುದು....**

ಸಿಮಿಕೋಟ್‌ಗೆ ಹವಾಮಾನ ವೈಪರೀತ್ಯಗಳ ಕಾರಣ ವಿಮಾನಗಳು ಹಾರುತ್ತಿಲ್ಲ ಎಂದು ಗೊತ್ತಾಯಿತು. ಎಲ್ಲಾ ಹೋಟೆಲ್ಗಳು ತುಂಬಿದ್ದವು. ಎಲ್ಲರಲ್ಲೂ ಆತಂಕದ ಸ್ಥಿತಿ ಮನೆಮಾಡಿತ್ತು. ನೇಪಾಳ್ಗಂಜ್ ನ ಮೂರು ಸ್ಟಾರ್ ಹೋಟೆಲ್ನಲ್ಲಿ ನಮ್ಮ ಪರಿಸ್ಥಿತಿಯಾದರೆ, ಸಿಮಿಕೋಟ್ , ಹಿಲ್ಸಾದಲ್ಲಿ ಸಿಕ್ಕಿ ಹಾಕಿಕೊಂಡವರ ಪರಿಸ್ಥಿತಿ ಬಹಳ ದಯನೀಯ. ಸಿಮಿಕೋಟ್ ೯೫೫೦ ಅಡಿ ಎತ್ತರದಲ್ಲಿ ಹಿಮಾಲಯ ಪರ್ವತಗಳ ಮಧ್ಯೆ ಇರುವ ಒಂದು ಅತಿ ಚಿಕ್ಕ ವಿಮಾನ ನಿಲ್ದಾಣ. ಅಲ್ಲಿ ಡಾಂಬರ್ ಹಾಕಿರುವ ಏಕೈಕ ರಸ್ತೆಯೇ ಆ ಊರಿನ ರನ್ವೇ. ಅಲ್ಲಿಗೆ ಎಲ್ಲಾ ವಸ್ತುಗಳೂ ವಿಮಾನದಲ್ಲೇ ಬರಬೇಕು. ಮಳೆಗಾಲದಲ್ಲಿ ಮೋಡ/ಮಂಜು ಕವಿದಾಗ ಹಿಮಾಲಯದ ಕಂದರುಗಳು ನೋಡಲೇನೋ ಬಲು ಚೆಂದ, ಆದರೆ ಆ ಪರಿಸ್ಥಿತಿಯಲ್ಲಿ ಅಲ್ಲಿನ ೧೦-೧೫ ಸಾವಿರ ಅಡಿ ಎತ್ತರದ ಶಿಖರಗಳ ಮಧ್ಯೆ ನುಸುಳಿ ಅಲ್ಲಿನ ಚಿಕ್ಕ ನೋಟಾವಲಂಬಿತ(line of sight dependent) ವಿಮಾನಗಳು ಹಾರಲಾರವು ವಿಮಾನಗಳಿರದೆ ಊಟವಿರದ ತರಕಾರಿಗಳಿರದ ಪರಿಸ್ಥಿತಿಗೆ ಆ ಊರಿನ ಕೆಲ ಹೋಟೆಲ್ಗಳು ತಲುಪಿದ್ದವು. ಹಲವರು ವಯೊವೃದ್ಧರ ಆರೋಗ್ಯವೂ ಹದಗೆಟ್ಟಿತ್ತು. (ಭಾರತೀಯ ಸೇನೆ ನೇಪಾಳದೊಳಗೆ ಬಂದು ತೊಂದರೆಗೀಡಾದ ಹಲವರನ್ನು ಕಾಪಾಡಿದರಾದರೂ ಒಂದಿಬ್ಬರು ಯಾತ್ರಿಗಳು ಸಿಮಿಕೋಟ್ನಲ್ಲಿ ವಿಧಿವಶರಾದರು).



ನೇಪಾಳ್ಗಂಜ್ನಲ್ಲಿ ೨ ದಿನ ಸಿಕ್ಕಿಹಾಕಿಕೊಂಡಾಗ ನನಗಿಂತ ೨ ದಿನ ಮುಂಚೆ ಹೊರಟ ಮಾವ,ಚಿಕ್ಕಮ್ಮ,ಅಕ್ಕ ಭೇಟಿಯಾದರು. ಹೀಗೇ ಒಂದು ದಿನ ಗೂಗಲ್ ನೋಡಿ, ನಾವು ಅಲ್ಲಿನ ಬಾಗೇಶ್ವರಿ ದೇವಸ್ಥಾನ ನೋಡ ಹೊರಟೆವು. ಜಿಟಿ ಜಿಟಿ ಮಳೆಯ ನಡುವೆಯೇ ತಲುಪಿದ ನಮಗೆ ಕಂಡಿದ್ದು ಒಂದು ಸುಂದರ ದೇವಸ್ಥಾನ. ಪಕ್ಕದಲ್ಲಿಯೇ ಅತಿಸುಂದರವಾದೊಂದು ಕೊಳ. ಮಧ್ಯೆ ಶಿವ ನೆಲೆಸಿದ್ದಾನೆ.. ನಾವು "ಶಿವನೇ ದಾರಿ ತೋರಪ್ಪ" ಎಂದು ಬೇಡಿದೆವು. ಅಂದು ರಾತ್ರಿಬೆಳಗು ಧೋ! ಎನ್ನುವ ಮಳೆ ಸುರಿಯಿತು. ಬಲವಾಗಿ ಸುರಿದ ಮಳೆಯಿಂದ ಮರುದಿನ ಮಧ್ಯಾಹ್ನ ಸ್ವಲ್ಪ ಮೋಡ ಸರಿದಾಗ ಒಬ್ಬ ಪೈಲಟ್ ವಿಮಾನ ಹಾರಿಸುವ ಧೈರ್ಯ ಮಾಡಿದರು. ಅದೇ ವಿಮಾನಕ್ಕೆ ನಮ್ಮ ಗುಂಪಿನಿಂದ ಯಾರಾದರೂ ಇಬ್ಬರು ಬನ್ನಿ ಎಂದಾಗ ನಾ ಹೊರಟಿದ್ದು ಆವಶ್ಯಕ ಸಾಮಗ್ರಿ ಪೆಟ್ರೋಲ್‌ಗಳನ್ನೊಳಗೊಂಡ ವಿಮಾನದಲ್ಲಿ. ಹಾರಿದ್ದೇನೋ ಸರಿ, ಆದರೆ ಬರಬರುತ್ತಾ ವಾತಾವರಣ ಸಂಪೂರ್ಣ ಹದಗೆಡುತ್ತಾ ಹೋಯಿತು. ಏನೂ ಕಾಣದ ಪರಿಸ್ಥಿತಿಯಲ್ಲಿ, ಮುಖ್ಯ ಪೈಲಟ್ ಎಮರ್ಜೆನ್ಸಿ ಹಾಕಿಕೊಂಡು,ಕೇವಲ ಚಿಕ್ಕ ಜೀಪೀಎಸ್ ಅಂಕಿಗಳ ನೆರವಿನಿಂದ ವಿಮಾನವ ತಿರುಗಿಸುತ್ತಿದ್ದರೆ, ಎರಡನೇ ಪೈಲಟ್ ತೆಳುಕಾಗದದಲ್ಲಿ (tissue paper) ವಿಮಾನದ ಗಾಜನ್ನು ಒರೆಸುತ್ತಿದ್ದ ದೃಶ್ಯ ಇನ್ನೂ ಮರೆಯಲಾಗದು. ಹೇಗೊ ಅತ್ಯಂತ ಚಾಣಾಕ್ಷತನದಿಂದ ವಿಮಾನವನ್ನು ತಂದು ನಿಲ್ಲಿಸಿದಾಗ ಜೀವ ಮರಳಿ ಬಂತು. ಆದಾಗ ಯೂಟ್ಯೂಬ್ನಲ್ಲಿ ಸಿಮಿಕೋಟ್ ತಲುಪುವ ವಿಹಂಗಮ ದಾರಿಯನ್ನು, ವಿಮಾನಕ್ಕಿಂತ ಎತ್ತರಕ್ಕೇರುವ ಹಿಮಾಲಯದ ಶಿಖರಗಳನ್ನೂ, ಕಿರಿದಾದ ಕಣಿವೆಗಳನ್ನೂ, ಜಗತ್ತಿನ ಅತಿಚಿಕ್ಕ

(ಮುಂದಿನ ಪುಟಕ್ಕೆ)

**ಮುಂದುವರೆದುದು....**

ರನ್‌ವೇಗಳಲ್ಲೊಂದಾದ ಸಿಮಿಕೋಟ್‌ನ ರನ್‌ವೇಯನ್ನು ನೋಡಿ. ಆಗಸ್ಟ್-ಸೆಪ್ಟೆಂಬರ್ ತಿಂಗಳಲ್ಲಾದರೆ ತಿಳಿ ಆಗಸವಿದ್ದಲ್ಲಿ ಅನ್ನಪೂರ್ಣಾ, ಎವರೆಸ್ಟ್ ಶಿಖರಗಳನ್ನೂ ಕೂಡ ದಾರಿಯಲ್ಲಿ ಕಾಣಬಹುದೆಂದು ಹೇಳುತ್ತಾರೆ.

ಸಿಮಿಕೋಟ್ ಒಂದು ಸ್ವರ್ಗವೇ. ಮೋಡಗಳ ಮೇಲೆ ತೇಲುತ್ತಿರುವ ಒಂದು ಹಳ್ಳಿ.. ಕಡುಬಡತನವಿರುವ ಈ ಊರಿಗೆ ಯಾತ್ರಿಗಳೇ ಜೀವಾಳ. ಅಲ್ಲಿನ ಚಿಕ್ಕ ಮನೆ ತರದ ಹೋಟೆಲ್.. ಮಣ್ಣಿನ ಗೋಡೆಗಳಿಂದ, ಮರದಿಂದ ಮಾಡಿದ ಈ ಹೋಟೆಲ್ ಚಿಕ್ಕದಾಗಿದ್ದರೂ ಬಹಳ ಚೊಕ್ಕವಾಗಿತ್ತು. ಸೀಮೆಯೆಣ್ಣೆಯ ಗ್ಯಾಸ್ ಸ್ಟೋವ್‌ನಲ್ಲಿ ಕೇಳಿದಾಗ ಚಹಾ ತಯಾರಾಗುತ್ತಿತ್ತು. ಊಟಕ್ಕೆ ಬಿಸಿಬಿಸಿ ಪೂರಿಗಳು,ಫುಲ್ಕಾಗಳು, ರುಚಿಯಾದ ಪಲ್ಯಗಳು, ಮ್ಯಾಗಿ ಮಳೆಯ ಹೊತ್ತಿಗೆ ಸರಿಯಾಗಿ ಹೊಂದುತಿದ್ದವು. ಅಲ್ಲಿ ಕನ್ನಡದ ಯುವಗುಂಪೊಂದು ಪರಿಚಯವಾಯಿತು.. ಅವರು ೩-೪ ದಿನ ಸಿಕ್ಕಿಹಾಕಿಕೊಂಡದ್ದರಿಂದ ಆಲ್ಲಿನ ಅಡುಗೆಮನೆಯನ್ನು ತಮ್ಮದಾಗಿಸಿಕೊಂಡು ಪೂರಿ, ಉಪ್ಪಿಟ್ಟು, ಬಿಸಿಬೇಳೇ ಬಾತ್ ಗಳನ್ನು ಮಾಡಿಬಡಿಸಿ ಉಳಿದೆಲ್ಲ ಯಾತ್ರಿಗಳ ಪ್ರೀತಿಪಾತ್ರರಾಗಿದ್ದರು.

ನಮ್ಮ ಗುಂಪಿನ ಉಳಿದೆಲ್ಲರೂ ಬರುವವರೆಗೂ ನಾವು ಸಿಮಿಕೋಟ್‌ನಲ್ಲೇ ನೆಲೆಸಿದ್ದೆವು. ನಮ್ಮ ಯಾತ್ರೆಯಲ್ಲಿದ್ದದ್ದು ೧೭ ಜನರ ಚಿಕ್ಕ ಗುಂಪು. ಚಿಕ್ಕ ಗುಂಪಾಗಿದ್ದರಿಂದ ನಮ್ಮ ಪ್ರವಾಸ ಬೇರೆಲ್ಲಾ ಗುಂಪುಗಳಿಗಿಂತ ಸುಲಭವಾಗಿತ್ತು. ಕೈಲಾಸ್ ಜರ್ನಿಸ್‌ಗೆ ವಿಮಾನಗಳ ಮೇಲೆ ಹಿಡಿತ ಜಾಸ್ತಿ ಇದ್ದರಿಂದ, ಹಾಗೂ ಗುಂಪು ಚಿಕ್ಕದಾದ್ದರಿಂದ, ಗುಂಪಿನ ಉಳಿದವರೂ ಮರುದಿನ ಸಂಜೆಗೆ ಸಿಮಿಕೋಟ್ ತಲುಪಿದರು.

ಸಿಮಿಕೋಟ್ ನಿಂದ ನಮ್ಮ ಪ್ರಯಾಣ ಹಿಮಾಲಯದ ಗಿರಿಗಳ ಇನ್ನೊಂದು ಹಂತವ ದಾಟಿ ಹಿಲ್ಸಾ ಎಂಬ ಚೀನಾ ಗಡಿಯಲ್ಲಿರುವ ನೇಪಾಳೀ ಊರಿಗೆ. ದಾರಿಯಲ್ಲಿ ಹೆಲಿಕಾಪ್ಟರ್‌ನಿಂದ ನಾವು ನೋಡಿದ ಹಿಮಾಚ್ಛಾದಿತ ಶಿಖರಗಳ, ಮಂಜು ಮುಸುಕಿದ ಹರಿದ್ವರ್ಣ ತಪ್ಪಲುಗಳ ದೃಶ್ಯಗಳು..ಆಹಾ.. ಬೇರೆಲ್ಲೂ ಕಾಣಸಿಗೋಲ್ಲ. ಹಿಲ್ಸಾದಿಂದ ಟಿಬೆಟ್‌ನ ಪ್ರಸ್ಥಭೂಮಿ ಶುರು. ಹಿಮಾಲಯದ ಈ ಹಂತವ ಮಾನ್ಸೂನ್ ದಾಟದ ಕಾರಣಕ್ಕೊ, ಹಿಲ್ಸಾದ ೧೬ಸಾವಿರ ಅಡಿಯೆತ್ತರಕ್ಕೊ ಏನೋ,ಇಲ್ಲಿ ಏನೂ ಬೆಳೆಯುವುದಿಲ್ಲ. ಇಲ್ಲಿ ನಾವು ನೇಪಾಳದಿಂದ ಸೇತುವೆ ದಾಟಿ ನಡೆದು ಚೀನಾ ಪ್ರವೇಶಿಸುತ್ತೇವೆ. ೩-೪ ಗಂಟೆ ಗಡಿಪ್ರಯಾಸಗಳ ಮುಗಿಸಿದ ನಂತರ ಕೊನೆಗೂ ನಾವು ೧೩ಸಾವಿರ ಅಡಿ ಎತ್ತರದಲ್ಲಿರುವ ಚೀನಾದ ತಕ್ಲಾಕೋಟ್(ಬುರಾಂಗ್) ತಲುಪಿದೆವು. ಸಮುದ್ರ ಮಟ್ಟದಿಂದ ಮೇಲೇರುತ್ತಾ ಹೋದಂತೆ ಗಾಳಿಯ ಒತ್ತಡ, ಆಮ್ಲಜನಾದ ಪ್ರಮಾಣ ಕಮ್ಮಿಯಾಗುತ್ತಾ ಹೋಗುತ್ತದೆ.. ಹಾಗಾಗಿ ಗಿರಿಯಾತ್ರಿಗಳು ಪ್ರತಿ ೧೦೦೦೦ಮೀ ಎತ್ತರಕ್ಕೊಮ್ಮೆ ವಿಶ್ರಮಿಸಿ ದೇಹವನ್ನು ಆ ಹವಾಮಾನಕ್ಕೆ ಒಗ್ಗಿಸಿಕೊಂಡೇ (ಅಕ್ಲಮಟೈಸ್) ಮುಂದೆ ಹೊರಡಬೇಕು. ಹಾಗಾಗಿ ಬುರಾಂಗ್‌ನಲ್ಲಿ ಒಂದು ದಿನ ಉಳಿದೆವು. **(ಮುಂದಿನ ಪುಟಕ್ಕೆ)**



**ಮುಂದುವರೆದುದು....**

ಹಾಗೂ ಆ ಪಟ್ಟಣ ತಿರುಗಿ ಬೇಕಾದ ಕೊನೆಕ್ಷಣದ ವ್ಯಾಪಾರಗಳ (ಮಳೆಯಂಗಿ,ಆಮ್ಲಜನಕದ ಸಿಲಿಂಡರ್, ಇತ್ಯಾದಿ) ಮುಗಿಸಿದೆವು. ಎಲ್ಲರಿಗಿಂತ ನಾನು ಆ ಎತ್ತರದ ಹವಾಮಾನಕ್ಕೆ ಒಗ್ಗಿದ್ದೆನಾದರೂ, ಅಲ್ಲಿನ ಅಶುದ್ಧ ನೀರಿನ ಕಾರಣವೋ ಏನೋ, ಹೊಟ್ಟೆಯ ಸೋಂಕೊಂದು ಅಂದು ನನಗಂಟಿಕೊಂಡಿತು. ದೇಹದಲ್ಲಿ ಏನೂ ನಿಲ್ಲುತ್ತಿರಲಿಲ್ಲವಲ್ಲದೇ ಜ್ವರವೂ ಶುರುವಾಗಿತ್ತು.



**ರಾಕ್ಷಸತಲ:** ಮರುದಿನ ಬೆಳಿಗ್ಗೆ ಎದ್ದು ಬಸ್ಸಿನಲ್ಲಿ ಹೊರಟ ನಾವು ಮೊದಲು ತಲುಪಿದ್ದು ರಾಕ್ಷಸತಲಕ್ಕೆ. ಇಲ್ಲಿಂದ ಕೈಲಾಸದ ಮೊದಲ ದರ್ಶನ-ರೋಮಾಂಚನ. ರಾವಣನೇ ಸೃಷ್ಟಿ ಮಾಡಿದ ಈ ಸರೋವರದಲ್ಲಿ ಶಿವನ ಆತ್ಮಲಿಂಗವ ಕದ್ದು ಓಡುತ್ತಿದ್ದಾಗ ತಾನೇ ಸಿಕ್ಕಿ ಹಾಕಿಕೊಂಡಿದ್ದ ಎಂಬ ಪ್ರತೀತಿ ಇದೆ. ಗೂಗಲ್ ಅರ್ಥ್‌ನಲ್ಲಿ ಕೂಡ ಈ ಸರೋವರ ಬೃಹದ್ ಹೆಜ್ಜೆಯಾಕಾರದಲ್ಲಿದೆ. ವಿಶೇಷ ಎಂದರೆ ಇಲ್ಲಿಂದ ೨೫ ಕಿಮೀ ದೂರವಿರುವ ಮಾನಸ ಸರೋವರದಲ್ಲಿ ಜೀವ ಸಂಕುಲ ಹೇರಳವಾಗಿದ್ದರೂ, ರಾಕ್ಷಸತಲದಲ್ಲಿ ಯಾವುದೇ ಜೀವ ಸಂಕುಲ(ಗಿಡ,ಮೀನು,ಪಕ್ಷಿಗಳು) ಕಾಣಸಿಗುವುದಿಲ್ಲ. ಭೌತಿಕವಾದ ಈಜಾಗದಿಂದ ಯಾತ್ರೆಯ ಶುರುಮಾಡಿ ಶಿವನ ಮೊದಲ ದರ್ಶನ ಮಾಡುವುದು ಒಳ್ಳೆಯದೆಂದು ಪ್ರತೀತಿ. ಇಲ್ಲಿಂದಲೇ ಹಿಮಾಚ್ಛಾದಿತ ಬ್ರಹ್ಮಪರ್ವತವೂ ಕಾಣಸಿಗುತ್ತದೆ.

**ಮಾನಸರೋವರ:** ಅಲ್ಲಿಂದ ಮಾನಸರೋವರ ತಲುಪಲು ೨೫ ಕಿಮೀ ಪ್ರಯಾಣ. ದಾರಿಯಲ್ಲಿ ಹಲವು ಬೌದ್ಧ ಮಠಗಳನ್ನು ಭಿಕ್ಷುಗಳು ಕಟ್ಟಿದ ಹರಕೆ ಬಾವುಟಗಳನ್ನೂ ನೋಡುತ್ತಾ ನಾವು ಮಾನಸರೋವರಕ್ಕೆ ತಲುಪಿದೆವು. ಮಾನಸರೋವರ ತಲುಪಿದಾಕ್ಷಣದ ಅನುಭವ ವರ್ಣನಾತೀತ. ಕೈಲಾಸ ಪರ್ವತಕ್ಷೇತ್ರದಲ್ಲಿ ವಿಹರಿಸುತ್ತಿದ್ದ ಬ್ರಹ್ಮದೇವನ ಮನಸ್ಸಿನಲ್ಲಿ "ಆಹಾ.. ಈ ಪವಿತ್ರ ಕ್ಷೇತ್ರದಲ್ಲಿ ಅಷ್ಟೇ ಪವಿತ್ರವಾದ ಒಂದು ಸರೋವರವಿದ್ದರೆಷ್ಟು ಚೆನ್ನ" ಎಂಬ ಭಾವ ಮೂಡಿತು. ತತ್ ಕ್ಷಣವೇ ಅಲ್ಲಿ ಮೂಡಿದ್ದು ಈ ಸರೋವರ. ಜಗತ್ತಿನಲ್ಲೇ ಅತಿಪವಿತ್ರವಾದ ಈ ಸರೋವರದ ನೀರಲ್ಲಿ ಜನುಮ-ಜನುಮಾಂತರದ ಪಾಪಗಳು ಕಳೆಯುತ್ತವಂತೆ-ಹಾಗಾಗಿಯೇ ದೇವ ದೇವತೆಯರಿಗೆ ಇಲ್ಲಿ ಸ್ನಾನ ಮಾಡುವುದು ಬಲು ಇಷ್ಟವಂತೆ. ಈ ಸರೋವರವು ಒಂದು ಶಕ್ತಿಪೀಠವೂ ಸಹ. ಸತೀದೇವಿಯ ಬಲಗೈ ಬಿದ್ದ ಈ ಜಾಗದಲ್ಲಿರುವ ಶಕ್ತಿಗೆ ಶ್ರೀ ದಾಕ್ಷಾಯಿಣೀ ಎಂದು ಹೆಸರು.

ಮಧ್ಯಾಹ್ನದ ಹೊತ್ತಿಗೆ ಅಲ್ಲಿ ತಲುಪಿದ ನಾವು ಹವಾಮಾನ ಚೆನ್ನಾಗಿದ್ದರಿಂದ(೩-೪ ಡಿಗ್ರಿ ಸೆಲ್ಸಿಯಸ್) ತಕ್ಷಣವೇ ನಾವು ಮಾನಸರೋವರದ ಚಳಿನೀರಲ್ಲಿ ಮೀಯಹೊರಟೆವು. ಈ ಹಿಂದಿನ ವರ್ಷಗಳಲ್ಲಿ ಬಂದ ಯಾತ್ರಿಕರು ಸರೋವರಕ್ಕೆ ಹೂವು, ಪ್ಲಾಸ್ಟಿಕ್, ಊದಿನಕಡ್ಡಿ , ಫೋಟೊಗಳನ್ನು ಹಾಕಿ ನೀರನ್ನು ಕಲುಷಿತಗೊಳಿಸುತ್ತಿದ್ದರಿಂದ ಈ ಬಾರಿ ಇಲ್ಲಿ ಚೀನೀ ಕಾವಲಿತ್ತು,ಹಲವು ನಿರ್ಬಂಧಗಳಿದ್ದವು. ಸರೋವರದಿ ಮುಳುಗುಹಾಕಿ, ನಂತರ ಸರೋವರದಿಂದ ನೀರ ತುಂಬಿಸಿ

**(ಮುಂದಿನ ಪುಟಕ್ಕೆ)**




**ಮುಂದುವರೆದುದು....**

-ತಂದು ದಡದಲ್ಲಿ ಸ್ನಾನಮಾಡಿದೆವು. ದಡದಲ್ಲೇ ಸ್ನಾನದ ಟೆಂಟ್ಗಳಲ್ಲಿ ಬಟ್ಟೆ ಬದಲಾಯಿಸುವ ಅವಕಾಶವನ್ನು ಸಹ ಶೇರ್ಪಾಗಳು ಮಾಡಿದ್ದರು. ಈ ಪವಿತ್ರ ಜಾಗಕ್ಕೆ ತಲುಪಲು ಕಾರಣವಾದ ಎಲ್ಲ ಗ್ರಹಗತಿಗಳ,ಸಹಕಾರಗಳ ನೆನೆಯುತ್ತಾ. ಶಿವ -ಪಾರ್ವತಿಯರನ್ನು ಮನಸಾ ಪ್ರಾರ್ಥಿಸುತ್ತಾ ಪವಿತ್ರನೀರನ್ನು ಸುರಿದುಕೊಳ್ಳುತ್ತಿದ್ದರೆ ಕೊರೆಯುವ ಚಳಿಯೂ ಗೊತ್ತಾಗಲಿಲ್ಲ. ಅಂದು ಸಿಕ್ಕ ಶಾಂತಿ, ಸಮಾಧಾನವನ್ನು ಬಣ್ಣಿಸುವುದು ಕಷ್ಟ.

ಈ ಸಮಯದಲ್ಲಿ ವಿಶೇಷವೊಂದನ್ನು ಹೇಳಲೇಬೇಕು. ನಮ್ಮ ಗುಂಪಿನಲ್ಲಿ ಹೃಷೀಕೇಶದ ಸ್ವಾಮಿ ಶಿವಾನಂದಾಶ್ರಮದ ಶ್ರೀ ಚಿತ್ತಸ್ವರೂಪಾನಂದ ಸ್ವಾಮಿಗಳಿದ್ದರು. ಸಾಮಾನ್ಯವಾಗಿ ಕಾವಿ/ ಗುರುಗಳಿಂದ ದೂರವಿರುವ ನನಗೆ ಅವರ ಜೊತೆಯಿರುವ ಅವಕಾಶ ಲಭ್ಯವಾಯಿತು. ಅದೇನೋ ಅವರಿಗೆ ನನ್ನ ಮೇಲೆ ಹೆಚ್ಚಿನ ಆಸ್ಥೆ ಇತ್ತು, ಅವರ ಉದ್ದೇಶಗಳ ಚಿಂತನೆಗಳ ಹತ್ತಿರದಿಂದ ನೋಡಿದೆ. ನಿಜಕ್ಕೂ ನಿಃಸ್ವಾರ್ಥಿಯಾಗಿ, ಸರ್ವಸಂಗ ಪರಿತ್ಯಾಗಿಯಾಗಿ, ಸನ್ಯಾಸಿಯಾಗಿ ದೇವರ, ಮಠದ, ಸಮಾಜದ ಸೇವೆ ಸಲ್ಲಿಸುವ ಅವರ ನೋಡಿ ಖುಷಿಯಾಯಿತು, ಅವರ ಜತೆಯಲ್ಲಿ ಉಳಿದು, ವಾದ ವಿವಾದಗಳ ನಡೆಸುವ ಅವಕಾಶವೂ ಸಿಕ್ಕಿತು. ವಿಶೇಷವೆಂದರೆ ಎಲ್ಲೋ ಹೃಶೀಕೇಶದಲ್ಲಿರುವ ಆಶ್ರಮದ ಈಗಿನ ಹಾಗೂ ಹಿಂದಿನ ಮುಖ್ಯ ಗುರುಗಳಿಬ್ಬರೂ ಕರ್ನಾಟಕದವರೇ. ಯಾತ್ರೆಗೆ ಒಬ್ಬನೇ ಹೊರಟ ನನಗೆ ಅವರು ಹಾಗೂ ಅವರ ಜೊತೆಯಿದ್ದ ಡಾ| ರಾಕೇಶ್ ದಂಪತಿಗಳು(ಆಸ್ಟ್ರೇಲಿಯ ನಿವಾಸಿ) ದೇವರೇ ಕಳಿಸಿದ ಆಸರೆಯಾದರು.. ಎಲ್ಲರೂ ಹೊರಟ ಕೈಲಾಸ ಪರಿಕ್ರಮದಲ್ಲಿ, ಕೊನೆವರೆಗೂ ನನ್ನ ಜತೆಯಾದವರು -

**(ಮುಂದಿನ ಪುಟಕ್ಕೆ)**



**ಮುಂದುವರೆದುದು....**

ಶ್ರೀ ಚಿತ್ತಸ್ವರೂಪಾನಂದ ಸ್ವಾಮಿಗಳು ಮಾತ್ರ. ಇದರ ಬಗ್ಗೆ ಮುಂದೆ ಹೇಳುವೆ.

ಸರೋವರದ ದಡದಲ್ಲಿಯೇ ನಮಗೆ ಅಂದಿನ ಉಳಿಯುವ ವ್ಯವಸ್ಥೆ. ಮಣ್ಣಿನ ಮನೆಯಲ್ಲಿ ಬೆಚ್ಚನೆ ಹಾಸಿಗೆ-ಕಂಬಳಿಗಳನ್ನು ಎಲ್ಲರಿಗೂ ಕೊಡಲಾಗಿತ್ತು. ಸವಿಯಾದ ಭಾರತೀಯ ಊಟವನ್ನು ಮಾಡಿ ನಾವು ಬಸ್‌ನಲ್ಲಿ ಮಾನಸರೋವರದ ಪರಿಕ್ರಮಕ್ಕೆ ಹೊರಟೆವು. ೧೦೦ಕಿಮೀ ಸುತ್ತಳತೆಯಿರುವ ಈ ಸರೋವರದ ಪ್ರದಕ್ಷಿಣೆಯು ಮುಕ್ತಿದಾಯಕ ಮಂತ್ರಪಠನೆ ಮಾಡುತ್ತಾ ಹೊರಟ ನಾವು ಅಲ್ಲಿನ ದೃಶ್ಯಗಳ ಕಣ್ಣಲ್ಲಿ ತುಂಬಿಕೊಳ್ಳುತ್ತಾ ಹೋದೆವು. ಅಲ್ಲಲ್ಲಿ ಕೆಲ ಪೊದೆಗಳು ಬಿಟ್ಟರೆ ಈ ಎತ್ತರದಲ್ಲಿ ಏನೂ ಬೆಳೆಯುವುದಿಲ್ಲ. ಮೈಗೆ ಚುಚ್ಚುವ ಬಲವಾದ ಗಾಳಿಯಿದ್ದರೂ ಆಮ್ಲಜನಕದ ಸಾಂದ್ರತೆ ಕಮ್ಮಿ. . ಕೈಲಾಸ ಚೆನ್ನಾಗಿ ಕಾಣುವ, ನೀರು ತಿಳಿಯಾಗಿರುವ ಒಂದೊಳ್ಳೆಯ ಜಾಗದಲ್ಲಿ ಬಸ್ ನಿಲ್ಲಿಸಿ ಶಿವ ಪಾರ್ವತಿಯರಿಗೆ ಸಾಷ್ಟಾಂಗ ನಮಸ್ಕರಿಸಿ, ಸರೋವರದ ನೀರಲ್ಲಿ ಮನೆಯ ಹಿರಿಯರಿಗೆ ತರ್ಪಣ ಬಿಟ್ಟೆವು. ಅಮ್ಮನಿಗಾಗಿ, ನನ್ನೆಲ್ಲ ಬಂಧು-ಬಳಗಕ್ಕಾಗಿ ತೀರ್ಥವನ್ನೂ ಬಾಟಲಿಗಳಲ್ಲಿ ತುಂಬಿಕೊಂಡೆವು. ಮಾನಸ ಸರೋವರದಲ್ಲಿ ಕೈಹಾಕಿ ಎತ್ತಿಕೊಂಡಾಗ ಸಿಗುವ ಕಲ್ಲುಗಳೆಲ್ಲವೂ ಶಿವನೇ ಅಂತೆ. ಅಂತೆಯೇ ದೇವರ ಆಶೀರ್ವಾದವ ಬೇಡಿ ನಾವು ಶಿವಲಿಂಗಗಳನ್ನು ಸರೋವರದ ನೀರಿನಾಳದಿಂದ ಆರಿಸಿಕೊಂಡೆವು. ಪ್ರದಕ್ಷಿಣೆ ಮುಗಿಸಿ ನಾವುಳಿವ ಜಾಗಕ್ಕೆ ಬರುವಾಗ ಸಂಜೆಯಾಗಿತ್ತು.

ಸಂಜೆಯಾದಂತೆ ಚಳಿ ಹೆಚ್ಚುತ್ತಾ ಹೋದರೂ(೨೦F) ಅಲ್ಲಿ ದೇವರ ಪೂಜೆ, ಭಜನೆ, ಹೋಮಗಳು ನಡೆಯುತ್ತಿತ್ತು. ಮನಸಾರೆ ಭಜಿಸಿ ಮಲಗಿದ ನಾವು ಎದ್ದಿದ್ದು ರಾತ್ರಿ ಬ್ರಾಹ್ಮೀ ಮುಹೂರ್ತದಲ್ಲಿ. ಸ್ವತಃ ಶಿವ ಪಾರ್ವತಿಯರೇ ಆ ಸಮಯದಲ್ಲಿ ಸರೋವರದರಲ್ಲಿ ದೇವ ದೇವತೆಯರೊಂದಿಗೆ ಮಾನಸರೋವರದಲ್ಲಿ ಮೀಯುತ್ತಾರೆ ಎಂಬ ಪ್ರತೀತಿಯ ನಂಬದಿದ್ದರೂ ಅಂದು ಎದ್ದಾಗ ನಾವು ನೋಡಿದ್ದು ದೇವಲೋಕವೇ.

**(ಮುಂದಿನ ಪುಟಕ್ಕೆ)**



**ಮುಂದುವರೆದುದು....**

ಸ್ವಚ್ಛ ಸುಂದರ ಆಕಾಶದಲ್ಲಿ ನಾವೆಂದೂ ಕಂಡಿರದಷ್ಟು ನಕ್ಷತ್ರ ಪುಂಜಗಳು,ಬಿರುಸಿನಿಂದ ಚಲಿಸುವ ತಾರೆಗಳು(ಉಲ್ಕೆಗಳೋ?), ಮಾನಸ ಸರೋವರದಲ್ಲಿ ಮಿಂದಿಳಿಯುವಂತಿರುವ ತಾರೆಗಳ ಅನುಭವ ಭೌಮಿಕ ವಿವರಣೆಗೆ ನಿಲುಕದ್ದು. ಅಂದು ನಾನೂ ಹಾಗೂ ಅಲ್ಲಿದ್ದ ಎಲ್ಲರೂ ಮೂಕ-ಮುಗ್ಧರಾಗಿದ್ದಂತೂ ನಿಜ. ಹುಣ್ಣಿಮೆಯಂದು ಈ ಅನುಭವ ಇನ್ನೂ ರಮ್ಯ ರೋಮಾಂಚಕ ಎಂದು ಹೇಳುತ್ತಾರೆ.

ಬೆಳಿಗ್ಗೆ ಮಾನಸರೋವರದಿ ಮತ್ತೆ ಪ್ರೋಕ್ಷಣಾಸ್ನಾನವ ಮಾಡಿ ಭಾರತದಿಂದ ತಂದ ಹೋಮ ಹವನ ಸಾಮಗ್ರಿ, ಬಿಲ್ವಪತ್ರೆಗಳೊಂದಿಗೆ ನಮ್ಮಗುಂಪಿನವರೆಲ್ಲರೂ ಕುಳಿತು ಮೃತ್ಯುಂಜಯ ಹೋಮಃವನ್ನು ನಡೆಸಿದೆವು. ಮಂತ್ರ ಘೋಷ ಮೋಳಗುತ್ತಿದ್ದಂತೆ ಉಳಿದ ಗುಂಪಿನವರೂ ಬಂದು ಸೇರಿ ನಮ್ಮ ಹೋಮವು ಸಾಂಗವಾಗಿ ನೆರವೇರಿತು. ಚೀನಾದ ನೆಲದಲ್ಲಿ ಮಂತ್ರಘೋಷಗಳ ಮೊಳಗಿಸಿದ ಖುಷಿಯೂ ಇತ್ತು. ತಂದ ಬಾದಾಮಿ ಖರ್ಜೂರ ನೈವೇದ್ಯಗಳ ಹಂಚಿ ಶಿವನಲ್ಲಿ ಕೈಲಾಸ ಪರಿಕ್ರಮವನ್ನು ಸುಗಮವಾಗಿ ನಡೆಸಿಕೊಡಲೆಂದು ಪ್ರಾರ್ಥಿಸಿದೆವು. ಅಂದು ನಾವು ಕೈಲಾಸ ಪರಿಕ್ರಮಕ್ಕೆ ಹೊರಡಬೇಕಿತ್ತು. ೫೦ ಕಿಮೀ ಕಾಲ್ನಡಿಗೆಯ ಈ ದುರ್ಗಮ ಚಾರಣಕ್ಕೆ ಎಲ್ಲರ ಆಕ್ಸಿಜನ್ ಲೆವೆಲ್ ಪರಿಶೀಲಿಸುತ್ತಿದ್ದರು. ನನ್ನ ಆರೋಗ್ಯ ಇನ್ನಷ್ಟು ಹದಗೆಡುತ್ತಿತ್ತು. ಏನೂ ತಿನ್ನದಿದ್ದರೂ, ಹಾಳಾದ ಹೊಟ್ಟೆಯು ಎರಡೂ ಕಡೆಯಿಂದ ಎಲ್ಲವನ್ನೂ ಹೊರಹಾಕಿ ನನ್ನನ್ನು ನಿಃಶ್ಯಕ್ತನಾಗಿ ಮಾಡಿತ್ತು. ಜ್ವರವೂ ಶುರುವಾಗಿತ್ತು. ಪ್ರವಾಸೀ ಸಂಸ್ಥೆ ಮಾಡುವ ಆರೋಗ್ಯ ತಪಾಸಣೆ ನಪಾಸಾದರೆ ಎಂಬ ಭಯವೂ ಕಾಡುತ್ತಿತ್ತು. ಮೋಡಗಳು ಸಹ ಆಕಾಶದಲ್ಲಿ ಮೂಡಿದ್ದವು. ಮುಂದಿನ ಹಂತ ಸುಗಮವಾಗಲು ಶಿವನೇ ಆಶೀರ್ವದಿಸಬೇಕಿತ್ತು. ■

**(ಮುಂದಿನ ಸಂಚಿಕೆಯಲ್ಲಿ- ಕೈಲಾಸ ಪರಿಕ್ರಮ..) ಲೇಖನದ ಛಾಯಾಚಿತ್ರ ಕೃಪೆ: ಅಜೇಯ ರಾವ್**

ನಾ ಕಂಡಂತೆ

# ಹರಳುಗಟ್ಟಿದ ರುಚಿಗಳು



*ದಾಶರಥಿ ಘಟ್ಟು*

> “ಆಹಾ ಸಕ್ಕರೆ ಬನ್ನೇ! ಇಷ್ಟು ದಿನ ನೀನು ನನ್ನ ಕಾಯಿಸಿದ್ದೇಕೆ? ಎಂತಹ ಮಧುರ ರುಚಿ ನಿನ್ನದು”

ಪಿ.ಸೀತಾರಾಮಯ್ಯನವರ 'ಸೀಕರಣೆ' ಎಂಬ ಲಲಿತ ಪ್ರಬಂಧಗಳ ಸಂಕಲನದಲ್ಲಿ, ಅವರು ಸವಿದು, ಸಂತೋಷಪಟ್ಟ ಹಣ್ಣು-ಕಾಯಿ ಮತ್ತು ತಿಂಡಿ-ತೀರ್ಥಗಳ ಬಗ್ಗೆ ಬರೆಯುತ್ತಾರೆ. ಅವರ ಕಾಲದ ಊಟ-ಉಪಚಾರಗಳ ಪರಿಶವಣೆ; ಆಗಿನ ಕಾಲದ ಜನರ ಅಡಿಗೆಗಳ ವೈಭವ; ಅಡಿಗೆ ಅಟ್ಟಿ, ಬಂದವರಿಗೆ ಬಡಿಸಿ, ತಾವೂ ತಿಂದು ಸಂತೋಷಿಸುತ್ತಿದ್ದ ರೀತಿ; ಅವರ ನೆನಪಿನಲ್ಲಿ ಉಳಿದ, ಅವರ ನಾಲಿಗೆಯ ರಸಗ್ರಂಥಿಗಳನ್ನು ತಣಿಸಿದ ರಸಪಾಕಗಳು; ಅವನ್ನು ತಯಾರಿಸುತ್ತಿದ್ದ ಅವರ ಅಜ್ಜಿ, ಅಮ್ಮ, ನೆಂಟರು ಮತ್ತು ಅವರ ಕಾಲದ ನಳ, ಭೀಮರು- ಹೀಗೆ ಜಿಹ್ವಾ ಚಾಪಲ್ಯದ ಹಸಿವನ್ನು ತಣಿಸಿದ ಅನೇಕ ಪ್ರಸಂಗಗಳು ಇಲ್ಲಿವೆ.

ಆ ಲೇಖನಗಳನ್ನು ಓದುತ್ತಿದ್ದಂತೆ, ನನ್ನ ನೆನಪುಗಳೂ ನನ್ನ ನಾಲಿಗೆಯಲ್ಲಿ ಶಾಶ್ವತವಾಗಿ ಅಚ್ಚೊತ್ತಿರುವ ತಿಂಡಿ-ತೀರ್ಥಗಳ ಕಡೆ ಓಡಿತು. ಯಾವ ರುಚಿಗಳು ನನ್ನ ರಸಗ್ರಂಥಿಗಳಲ್ಲಿ ಹರಳುಗಟ್ಟಿ ಉಳಿದಿವೆ. ಅವೇ ಏಕೆ ನನ್ನ ನೆನಪಿನಲ್ಲುಳಿದು ಒಂದು ಅನೂಹ್ಯ ಮಧುರತೆ ಸಂಚಲಿಸುತ್ತದೆ ಎಂದು ಕೆಲವು ಸಲ ಯೋಚಿಸುತ್ತಿರುತ್ತೇನೆ. ಇಂತಹ ಹರಳುಗಟ್ಟಿದ ರುಚಿಗಳಲ್ಲಿ ತೀವ್ರವಾಗಿ ನನ್ನ ಮನಸ್ಸಿನಲ್ಲಿ ಉಳಿದುಬಿಟ್ಟಿರುವ ಒಂದು ಪ್ರಸಂಗ ಹೀಗಿದೆ. ನಾನು ತೀರಾ ಚಿಕ್ಕ ಹುಡುಗ. ಆರೇಳು ವರ್ಷ ಇರಬಹುದು. ನಮ್ಮೂರಿನ ಸ್ಕೂಲಿನಲ್ಲೇ ಒಂದನೇ ಕ್ಲಾಸಿನಲ್ಲೋ ಎರಡರಲ್ಲೋ ಓದುತ್ತಿದ್ದೆ. ಅಜ್ಜಿಯ ಜೊತೆ ಮುಳಬಾಗಿಲಿನ ಯಜ್ಞವಲ್ಕ್ಯ ಆಶ್ರಮದಲ್ಲಿ ನಡೆಯುವ ಜಯಂತಿಗೆ ಹೋಗಿದ್ದಾಗಿನ ಪ್ರಸಂಗ. ಅಜ್ಜಿ, ನಾನು ಮತ್ತು ನಮ್ಮ ಜೊತೆಗೆ, ಅಜ್ಜಿಯ ತಂಗಿಯ ಮಗ ಸೀನಣ್ಣ ಮುಳಬಾಗಿಲಿಗೆ ಹೊರಟಿದ್ದೆವು. ನಮ್ಮ ತಂದೆಯವರಿಗಿಂತ ದೊಡ್ಡವರಾದ ಸೀನಣ್ಣನನ್ನು ನಾವು 'ದೊಡ್ಡಪ್ಪ' - ಎಂದು ಕರೆಯುತ್ತಿದ್ದೆವು. ದೊಡ್ಡಪ್ಪ ನಮ್ಮನ್ನು ಕರೆದುಕೊಂಡು ಮುಳಬಾಗಿಲಿಗೆ ಹೊರಟರು.

ನಲ್ವತ್ತೈದು-ಐವತ್ತು ವರ್ಷ ಹಿಂದಿನ ದಿನಗಳು. ಊರಿನೊಳಕ್ಕೆ ಬಸ್ಸುಗಳು ಬರುತ್ತಿರಲಿಲ್ಲ. ಬಸ್ಸು ಹಿಡಿಯಲು ನಾವು ಊರಿನಿಂದ ಒಂದು ಮೈಲಿ ದೂರದಲ್ಲಿ ಹಾದು ಹೋಗುತ್ತಿದ್ದ ಕೋಲಾರ-ಕಡಪ ರಸ್ತೆಗೆ ಹೋಗುತ್ತಿದ್ದೆವು. ಆಗ ನಮ್ಮೂರಿನ ಕಡೆ ಸರ್ಕಾರಿ ಬಸ್ಸುಗಳು ಯಾವುವೂ ಇರಲಿಲ್ಲ. ಆ ರೂಟಿನಲ್ಲಿ ಓಡಾಡುತ್ತಿದ್ದುದೇ ಎರಡೋ ಮೂರೋ ಖಾಸಗಿ ಬಸ್ಸುಗಳು. ಊರಿನಿಂದ ಮುಳಬಾಗಿಲು ಇಪ್ಪತ್ತೈದೇ ಮೈಲಿ ಆದರೂ, ಪ್ರಯಾಣ ಒಂದು ದಿನವೆಲ್ಲಾ ತೆಗೆದುಕೊಳ್ಳುತಿತ್ತು. ಮೊದಲನೆಯದಾಗಿ ಮುಳಬಾಗಿಲಿಗೆ ನೇರ ಬಸ್ ಸೌಕರ್ಯ ಇರಲಿಲ್ಲ. ಅಡ್ಡ ರಸ್ತೆಯಲ್ಲಿ ಹಾದುಹೋಗುವ ಬಸ್ಸುಗಳು ಶ್ರೀನಿವಾಸಪುರಕ್ಕೆ ಹೋಗುತ್ತಿದ್ದವು. ನಾವು ಸಾಮಾನ್ಯವಾಗಿ ಶ್ರೀನಿವಾಸಪುರಕ್ಕೆ ಹೋಗಿ, ಅಲ್ಲಿಂದ ಮುಳಬಾಗಿಲು ಬಸ್ಸು ಹತ್ತುತ್ತಿದ್ದೆವು. ಅಜ್ಜಿ ಹೊರಟರೆಂದರೆ, ಬಸ್ ಸ್ಟ್ಯಾಂಡ್ ಗೆ ಹೋಗಿ ಗೊತ್ತು ಗುರಿಯಿಲ್ಲದ ಯಾವುದೋ ಬಸ್ಸಿಗೆ ಕಾಯುವುದು, ಸಿಕ್ಕ ಬಸ್ಸಿನಲ್ಲಿ ತೂರಿಕೊಳ್ಳುವುದು ಇಂತಹುಗಳು ಸಾಧ್ಯವಿರಲಿಲ್ಲ. ಅವರು ಎಲ್ಲವನ್ನೂ ಯೋಜಿಸಿ, ಅದರಂತೆಯೇ ಕಾರ್ಯ ನಿರ್ವಹಿಸು-ತ್ತಿದ್ದವರು. ಹೀಗಾಗಿ, ಬೆಳಗ್ಗೆ ಊಟ ಮುಗಿಸಿಕೊಂಡು, ಇಂತಹ ಬಸ್ಸಿಗೆ ಹೊರಡುವುದೆಂದು ನಿರ್ಧರಿತವಾಗಿತ್ತು. ನಾವು ಬೆಳಿಗ್ಗೆಯೆದ್ದು ಸ್ನಾನಾದಿಗಳು ಮುಗಿದ ಮೇಲೆ ಊಟ ಮಾಡಿಕೊಂಡು, ಬಸ್ಸು ಬರುವುದಕ್ಕೆ ಅರ್ಧ ಗಂಟೆ ಮುಂಚೆಯೇ ಒಂದು ಮೈಲಿ ದೂರದ ಅಡ್ಡ ರಸ್ತೆಗೆ ಹೋಗಿ ಕೂತೆವು. ಅಜ್ಜಿಯ ಮಡಿ ಪೆಟ್ಟಿಗೆಯಲ್ಲಿ ಅವರ ಒಂದೋ, ಎರಡೋ ಸೀರೆ, ಮಗುಟ, ನೀರು ಕುಡಿಯುವ ಚಂಬು ಮತ್ತು ಒಂದು ಲೋಟ, ಗೋಪೀ ಚಂದನದ ತುಂಡುಗಳು ಮತ್ತು ಚಿಲ್ಲರೆ -

(ಮುಂದಿನ ಪುಟಕ್ಕೆ)

## ಹರಳುಗಟ್ಟಿದ ರುಚಿಗಳು (ಮುಂದುವರೆದುದು)

ಕಾಸಿನ ಒಂದು ಸಣ್ಣ ಡಬ್ಬಿ - ಇಷ್ಟು ಅವರ ಆಸ್ತಿಯಾದರೆ, ದೊಡ್ಡಪ್ಪನ ಬಟ್ಟೆ ಬ್ಯಾಗಿನಲ್ಲಿ ಅವರ ಪಂಚೆ ಷರಟಿನ ಜೊತೆ ನನ್ನದೊಂದು ಜೊತೆ ಬಟ್ಟೆ. ಆಗ ಕಾಲಿಗೆ ಚಪ್ಪಲಿಯೂ ಹಾಕುತ್ತಿರಲಿಲ್ಲ.

ಬಸ್ ಸ್ಟ್ಯಾಂಡ್ ಹತ್ತಿರ ಬೇಕಾದಷ್ಟು ಹುಣಿಸೆ ಮರಗಳಿದ್ದರೂ, ಬೇಸಿಗೆಯ ಬೇಗೆಯಲ್ಲಿ ಮರದ ನೆರಳೂ ಏನೂ ಹಿತವಾಗಿರುವುದಿಲ್ಲ. ಆದರೆ ಜಯಂತಿ ಸಾಮಾನ್ಯವಾಗಿ ಫೆಬ್ರುವರಿ, ಮಾರ್ಚ್ ನಲ್ಲಿ ಬರುವುದರಿಂದ ಅಷ್ಟೇನೂ ಬಿಸಿಲಿರುವುದಿಲ್ಲ. ನನ್ನ ಪ್ರಯಾಣದ ಹೆಚ್ಚೇನೂ ವಿವರಗಳು ನೆನಪಿನಲ್ಲಿಲ್ಲ. ಯಾವುದೋ ಬಸ್ಸಿನಲ್ಲಿ ಶ್ರೀನಿವಾಸಪುರ ತಲುಪಿ, ಅಲ್ಲಿ ಮತ್ತೆ ಮುಳಬಾಗಿಲ ಕಡೆ ಹೋಗುವ ಬಸ್ಸಿಗೆ ಕಾದು, ಆಂಧ್ರದ ಕಡೆಗೆ ಹೋಗುವ ಯಾವುದೋ ಬಸ್ಸು ಹಿಡಿದು ಮುಡಿಗನೂರಿನವರೆಗೂ ಹೋಗಿ ಅಲ್ಲಿ ಇಳಿದು, ಮತ್ತೆ ಆಂಧ್ರದ ಯಾವುದೋ ಊರಿನಿಂದ ಮುಳಬಾಗಿಲಿಗೆ ಬರುವ ಬಸ್ ಹತ್ತಿ ಮುಸ್ಸಂಜೆಯ ಹೊತ್ತಿಗೆ ಮುಳಬಾಗಿಲು ಸೇರಿದ ಈ ಪ್ರಯಾಣ ಅಪರೂಪವಾಗಿದ್ದರಿಂದ ನೆನಪಿದೆ. ಮುಳಬಾಗಿಲಲ್ಲಿ ಇಳಿದ ತಕ್ಷಣ ಯಾಜ್ಞವಲ್ಕ್ಯ ಆಶ್ರಮಕ್ಕೆ ಹೋದೆವು. ಆಶ್ರಮದ ಎದುರಿಗೇ ಅಲ್ಲಿನ ಅರ್ಚಕರಾದ ಪ್ರದ್ಯುಮ್ನಾಚಾರ್ ಮನೆ. ಅಜ್ಜಿ ಅಲ್ಲಿ ಸ್ನಾನ ಮಾಡಿ ತನ್ನ ಅನುಷ್ಠಾನಗಳನ್ನು ಮಾಡಿಕೊಂಡಳು. ನನಗೋ ಪ್ರಯಾಣದ ಧಾವಂತದಲ್ಲಿ ಬೆಳಿಗ್ಗೆ ಮಾಡಿದ್ದ ಊಟ ಯಾವಾಗಲೋ ಕರಗಿ ಹೋಗಿತ್ತು. ಯಾವಾಗ ಏನಾದರೂ ತಿಂದೇನೋ ಎನ್ನುವಂತಾಗಿ ಹೋಗಿತ್ತು. ಅಜ್ಜಿ, "ಶ್ರೀನಿವಾಸ, ಇಲ್ಲೆಲ್ಲಾದರೂ ಹೋಗಿ ಇವನಿಗೆ ಬಿಸ್ಕತ್ತೋ ಏನಾದರೂ ಕೊಡಿಸಿಕೊಂಡು ಬಾರೋ", ಎಂದು ದೊಡ್ಡಪ್ಪನಿಗೆ ಹೇಳಿದ್ದೆ ಅಮೃತ ವಾಕ್ಯಗಳಂತೆ ಕಿವಿಗೆ ಬಿತ್ತು. ನಮ್ಮ ಅಜ್ಜಿ ಮಕ್ಕಳು ಕಾಸು ಖರ್ಚು ಮಾಡಿ ಹೊರಗಡೆ ತಿಂಡಿ ತಿನ್ನುವುದಕ್ಕೆ ತೀವ್ರ ವಿರೋಧಿ. ಕುಂಬಾರಪಾಳ್ಯದ ಡಿ.ವಿ.ಜಿ. ಬಡಾವಣೆಯಲ್ಲಿರುವ ಸೂರ್ಯನಾರಾಯಣ ದೇವಾಲಯ ಮತ್ತು ಯಜ್ಞವಲ್ಕ್ಯ ಆಶ್ರಮ ಸಂದಿಯೊಂದರಲ್ಲಿದ್ದವು. ಸೀನಣ್ಣ ದೊಡ್ಡಪ್ಪ ನನ್ನನ್ನು ಕರೆದುಕೊಂಡು ಬೀದಿ ದೀಪಗಳೂ ಇಲ್ಲದ ಆ ಬಡಾವಣೆಯ ರಸ್ತೆಯಲ್ಲಿ ಎಲ್ಲೋ ಇದ್ದ, ಗಬೋ ಎನ್ನುತ್ತಿದ್ದ ಕತ್ತಲಿನ ಒಂದು ಸಣ್ಣ ರೂಮಿನ ಬೇಕರಿ ಎಂಬ ಜಾಗಕ್ಕೆ ಹೋದ ನೆನಪು. ಅದು ನಿಜವೋ ನನ್ನ ಕಲ್ಪನೆಯೋ? ಆದರೆ "ಸಕ್ಕರೆ ಬನ್ನು ತಿನ್ನುತ್ತೀಯೇನೋ" ಎಂದು ಸೀನಣ್ಣ ಕೇಳಿದ್ದು ನೆನಪಿದೆ.

ಸಕ್ಕರೆ ಬನ್ನೋ, ಬೆಲ್ಲದ ಬನ್ನೋ - ಅಲ್ಲಿ ಏನು ಸಿಗುತ್ತದೆ ಎಂದು ನನಗೇನು ಗೊತ್ತು. ತಲೆ ಆಡಿಸಿದೆ. ಒಂದು ನ್ಯೂಸ್ ಪೇಪರ್ ತುಂಡಿನಲ್ಲಿ ಅಂಗಡಿಯವ ಏನೋ ಸುತ್ತಿ ಕೊಟ್ಟ. ಆ ಪೇಪರ್ ಗಂಟು ಒಂದು ಅಮೂಲ್ಯ ಆಭರಣವೇನೋ ಎನ್ನುವಂತೆ ಅದನ್ನು ಹಿಡಿದು ಆಶ್ರಮಕ್ಕೆ ಬಂದೆ. ಅಲ್ಲೊಂದು ಮೂಲೆಯಲ್ಲಿ ಕುಳಿತು, ಮಿಣುಕು ಬೆಳಕಿನಲ್ಲಿ ಪ್ಯಾಕೆಟ್ ಬಿಚ್ಚಿ ಬನ್ನು ತಿಂದ ನೆನಪು ಚೆನ್ನಾಗಿದೆ. ಸಕ್ಕರೆ ಪಾಕದಲ್ಲಿ ಒಣಕೊಬ್ಬರಿ ತುರಿ ಬೆರಸಿ ಮಾಡಿದ್ದ ಬನ್ನು ಅದು! ಅದರ ಒಂದು ತುಂಡು ಬಾಯಲ್ಲಿಟ್ಟುಕೊಂಡ ತಕ್ಷಣ ಒಂದು ಅಮೃತ ಬಿಂದುವೇ ನಾಲಿಗೆಯ ಮೇಲೆ ಬಿದ್ದಂತಾಯಿತು. ಬೆಳಗ್ಗೆಯಿಂದ ಅಲ್ಲಿ-ಇಲ್ಲಿ ನಡೆದು, ಮೂರು ಬಸ್ ಹಿಡಿದು ಮಾಡಿದ ಪ್ರಯಾಣದ ಆಯಾಸ, ಬೆಂಕಿಯಂತೆ ಚುರುಗುಟ್ಟುತ್ತಿದ್ದ ಹೊಟ್ಟೆ, ಮೊದಲ ಬಾರಿಗೆ ಹೊಸ ತಿಂಡಿ ತಿನ್ನುತ್ತಿರುವ ಸಂಭ್ರಮ, ತಮ್ಮಂದಿರ ಜೊತೆ ಹಂಚಿಕೊಳ್ಳದೇ ಇಡೀ ಪದಾರ್ಥವೇ ನನ್ನದಾಗಿರುವ ಸಂತೋಷ-ಇವೆಲ್ಲವೂ ಸೇರಿ ಆ ಸಕ್ಕರೆ ಬನ್ನು ಪ್ರಪಂಚದಲ್ಲೇ ಅತ್ಯಂತ ರುಚಿಕರ ತಿಂಡಿಯಾಗಿ ನಾಲಿಗೆಯ ಮೇಲಾಡುತ್ತಾ ಹೊಟ್ಟೆಯಲ್ಲಿಳಿಯುತ್ತಿತ್ತು. "ಆಹಾ ಸಕ್ಕರೆ ಬನ್ನೇ! ಇಷ್ಟು ದಿನ ನೀನು ನನ್ನನ್ನು ಕಾಯಿಸಿದ್ದೇಕೆ? ಎಂತಹ ಮಧುರ ರುಚಿ ನಿನ್ನದು" ಎಂದು ಮನಸ್ಸು ಪ್ರಫುಲ್ಲಿತವಾಯಿತೆನ್ನಿಸುತ್ತದೆ. ಆ ಸಕ್ಕರೆ ಬನ್ನಿನ ಕಥೆ ಹೇಳಿ ಊರಿನ ಹುಡುಗರ ಹೊಟ್ಟೆ ಉರಿಸಬೇಕು, ಅದೇನು ಸಾಮಾನ್ಯ ತಿಂಡಿಯೇ? ಅದರ ರುಚಿ ಯಾವುದಕ್ಕೆ ಬಂದೀತು- ಎಂದು ಮನಸ್ಸಿನ ಮಂಡಿಗೆ ತಿನ್ನುತ್ತ ನಿದ್ದೆ ಮಾಡಿದ್ದೆ.

ನನ್ನ ಬದುಕಿನಲ್ಲಿ ನಾನೆಷ್ಟೋ ವಿಭಿನ್ನ ತಿಂಡಿಗಳನ್ನೂ, ಸಿಹಿಗಳನ್ನೂ ಸವಿದಿದ್ದರೂ, ಆ ಸಕ್ಕರೆ ಬನ್ನು, ಅದರಲ್ಲಿನ ಸಕ್ಕರೆ-ಒಣಕೊಬ್ಬರಿ ಪಾಕ ಯಾಕೆ ನನ್ನ ಮನಸ್ಸಿನಲ್ಲಿ ಉಳಿದುಬಿಟ್ಟಿದೆಯೋ ಗೊತ್ತಿಲ್ಲ. ನೆನಪಿನಲ್ಲಿ ಹರಳುಗಟ್ಟಿದ ಇತರ ರುಚಿಗಳ ಬಗ್ಗೆ ಮುಂದಿನ ಸಂಚಿಕೆಯಲ್ಲಿ ಬರೆಯುತ್ತೇನೆ. ■

ಕಥೆ

# ಬೇಟೆ



***ಕೇಶವ್ ಪ್ರಶಾಂತ್***

ನೆಲವೆಲ್ಲಾ ಒಂದೇ ಸಮನೆ ಗಢ ಗಢನೆ ನಡುಗಿದಂತಾಯಿತು. ಇತ್ತೀಚಿನ ದಿನಗಳಲ್ಲಿ ಅಲ್ಲಲ್ಲಿ ಭೂಕಂಪಗಳಾಗುತ್ತಿದ್ದ ಸುದ್ದಿಯನ್ನು ಪತ್ರಿಕೆಯಲ್ಲಿ ಓದುತ್ತಿದ್ದ ಕಾರಣ ಈ ಶನಿ ನಮ್ಮ ಊರಿಗೂ ವಕ್ಕರಿಸಿತೇನೋ ಎಂದು ತಿಳಿದು ಗಾಭರಿಯಿಂದ ಎದ್ದು ಕುಳಿತೆ.

"ನಿದ್ದೆ ಮಾಡಿದನೆಂದರೆ ಕುಂಭಕರ್ಣನೇ ಸರಿ, ಕಿವಿಯ ಬಳಿ ಬಾಂಬ್ ಸಿಡಿದರೂ ಎಚ್ಚರ-ವಾಗಲಿಕ್ಕಿಲ್ಲ ನಿನಗೆ" ಅಮ್ಮನ ಧ್ವನಿ. ಮನೆಯಲ್ಲಾದ ಭೂಕಂಪಕ್ಕೆ ಕಾರಣ ತಿಳಿಯಿತು. ನನ್ನನ್ನು ಏಳಿಸುವ ಅಮ್ಮನ ಎಲ್ಲಾ ಪ್ರಯತ್ನಗಳೂ ವಿಫಲವಾಗಿ ಕೊನೆಯದಾಗಿ ಗಟ್ಟಿಯಾಗಿ ನನ್ನನ್ನು ಹಿಡಿದು ಕುಲುಕಿದ್ದರು. ಆಕಳಿಸುತ್ತಾ ಎದ್ದು ಕುಳಿತೆ. ಗೋಡೆಯ ಮೇಲಿನ ಮರದ ಗೂಡಿನಲ್ಲಿದ್ದ ಗಡಿಯಾರದ ಪೆಂಡುಲಮ್ ತನ್ನ ಇರುವಿಕೆಯನ್ನು ತಿಳಿಸಲೆಂಬಂತೆ ಮೂರು ಬಾರಿ ಹೊಡೆದು ಸುಮ್ಮನಾಯಿತು. ಸಕ್ಕರೆಯಂತಹ ಸವಿನಿದ್ದೆಯನ್ನು ಕೆಡಿಸಿದ ಅಮ್ಮನ ಮೇಲೆ ಸಿಟ್ಟುಕ್ಕಿ ಬಂತು.

"ಟಾಮಿ ಮತ್ತು ಸಾಸಿ ಸುಮಾರು ಹೊತ್ತಿಂದ ತೋಟದಲ್ಲಿ ಬೊಗಳ್ತಾ ಇವೆ. ಏನೆಂದು ಒಂಚೂರು ಹೋಗಿ ನೋಡು" ಎಂದರು.

"ನಾಯಿಗಳು ಬೊಗಳದೇ ಇನ್ನೇನು ನಾವಾ ಬೊಗಳುವುದು? ದಿನಕ್ಕೆರಡು ಸಲ ಸೇರು ಅನ್ನ ಮುಕ್ಕುತ್ತವೆ, ಬೊಗಳಲಿ ಬಿಡಿ ನೀವೇನೂ ತಲೆ ಕೆಡಿಸಿಕೊಳ್ಳಬೇಡಿ"

"ತೋಟದಲ್ಲಿ ಆವಾಗಿಂದ ಏನೋ ಶಬ್ದ ಕೇಳ್ತಾ ಇದೆ. ಹಂದಿ ಗಿಂದಿ ಏನಾದರೂ ಬಂತೆಂದಾದರೆ ಬಾಳೆ, ಮರಗೆಣಸೆಲ್ಲಾ ಹೋದಂತೆಯೇ ಲೆಕ್ಕ" ಚಿಮಣಿ ದೀಪ ಉರಿಸಿ ತಂದರು ಅಮ್ಮ. "ತಗೊ, ಮಂಗಗಳನ್ನು ಹೆದರಿಸಲೆಂದು ತಂದ ಪಟಾಕಿ ಇರಬೇಕು ,ಸಿಡಿಸು. ಶಬ್ದಕ್ಕೆ ಹೆದರಿ ಓಡಿ ಹೋದಾವು". ತಂದೆಯವರು ಮನೆಯಲ್ಲಿರಲಿಲ್ಲ. ಯಾವಾಗಲೂ ಇರುತ್ತಿದ್ದ ಸಿದ್ದನೂ ಸಹ ಅಂದು ಇರಲಿಲ್ಲ. ಏನೋ ಸುಳ್ಳು ನೆವ ಹೇಳಿ ಸಂಜೆಯೇ ಮನೆಗೆ ಹೋಗಿದ್ದ. ಮಧ್ಯ ರಾತ್ರಿಯಲ್ಲಿ ನಿದ್ದೆ ಬಿಟ್ಟು ಪಟಾಕಿ ಹೊಡೆಯುವ ಕೆಲಸ ಸಿಕ್ಕಿದ್ದಕ್ಕೆ ನನ್ನನ್ನು ನಾನೇ ಶಪಿಸಿಕೊಂಡೆ. ಪಟಾಕಿ ಪೆಟ್ಟಿಗೆಯನ್ನು ಹುಡುಕಿ, ಚಿಮಣಿ ದೀಪ ತೆಗೆದುಕೊಂಡು ಹೊರಬಂದೆ. ಇನ್ನೇನು ಪಟಾಕಿ ಸಿಡಿಸಬೇಕೆನ್ನುವಷ್ಟರಲ್ಲಿ ಕೆಳಗಿನ ತೋಟದ ಕಡೆಯಿಂದ "ಧುಳುಂ" ಎಂದು ಶಬ್ಧವೊಂದು ಕೇಳಿಸಿತು. ನೀರಿಗೆ ದೊಡ್ಡದೊಂದು ಕಲ್ಲು ಹೊತ್ತು ಹಾಕಿದಂತೆ. ಒಂದು ಕ್ಷಣ ಏನು ನಡೆಯಿತೆಂದು ತಿಳಿಯಲಿಲ್ಲ.

"ಹಂದಿಯೇನಾದರೂ ತೋಟದ ಬಾವಿಗೆ ಬಿತ್ತಾ?" ಕೆಳಗಿನ ತೋಟದಲ್ಲಿ ಕಟ್ಟೆಯಿಲ್ಲದ ಒಂದು ಬಾವಿ ಇದೆ. ತೋಟಕ್ಕೆ ನದಿಯ ನೀರನ್ನು ಬಳಸು-ತ್ತಿದ್ದುದರಿಂದ ಆ ಬಾವಿಯ ಉಪಯೋಗವಿಲ್ಲದೆ ಒಳಗೆಲ್ಲಾ ಅಡಿಕೆ ಸೋಗೆ, ಕಸಕಡ್ಡಿ ಬಿದ್ದು ನೀರು ಕೆಟ್ಟಿತ್ತು.

"ಟಾರ್ಚ್ ತೆಗೆದುಕೋ, ಏನೆಂದು ನೋಡಿ ಬರುವ" ಎಂದರು ಅಮ್ಮ.

ನನಗೆ ಮೊದಲೇ ಕತ್ತಲೆಂದರೆ ಹೆದರಿಕೆ. ರಾತ್ರಿಯಾದ ಮೇಲೆ ಮನೆಯಿಂದ ಹೊರಗಿಳಿಯಲೇ ಮೀನ ಮೇಷ ಎಣಿಸುವವನು ನಾನು. ಅಮ್ಮ ನನ್ನೊಬ್ಬನನ್ನೇ ತೋಟಕ್ಕೆ ಹೋಗಲು ಹೇಳಿದರೆ ಏನು ಗತಿ ಎಂದು ಚಿಂತಿಸುತ್ತಿದ್ದ ನನಗೆ ಅಮ್ಮ "ನಾನೂ ಬರುತ್ತೇನೆ" ಎಂದು ಹೇಳಿದಾಗ ಸ್ವಲ್ಪ ಸಮಾಧಾನವಾಯಿತು.

ಟಾರ್ಚ್ ನ ಕ್ಷೀಣ ಬೆಳಕಿನಲ್ಲಿ ಏನೂ ಸರಿಯಾಗಿ ಕಾಣಿಸುತ್ತಿರಲಿಲ್ಲ.

ಸಣ್ಣಗೆ ಬೀಸುತ್ತಿದ್ದ ಗಾಳಿಗೆ ದೊಡ್ಡ ಬಾಳೆಯ ಎಲೆಗಳು ಅತ್ತಿಂದಿತ್ತ ತೂಗಾಡಿಕೊಂಡು ಒಂದಕ್ಕೊಂದು ತಾಗಿ ಅವಾಗೊಮ್ಮೆ ಈವಾಗೊಮ್ಮೆ ಸರ ಸರ ಸದ್ದು ಮಾಡುತ್ತಿದ್ದವು. ನಾವು ನಡೆಯುತ್ತಿದ್ದುದು ಕಾಲು ದಾರಿಯೋ ಅಥವಾ ಮಳೆಗಾಲದಲ್ಲಿ ಅಡಕೆ ಮರದ ಬುಡದಲ್ಲಿ -

(ಮುಂದಿನ ಪುಟಕ್ಕೆ)

"ಹಂದಿ ಹೊಡೆದೆವಮ್ಮಾ ಬೆಳಿಗ್ಗೆ.... ತೊಟ್ಟಿಲು ಗುಂಡಿಯ ಹತ್ತಿರ..."

## ಬೇಟೆ (ಮುಂದುವರೆದುದು)

ನೀರು ನಿಲ್ಲದೆ ಸರಾಗವಾಗಿ ಹರಿದು ಹೋಗಲು ಬಿಡಿಸಿಟ್ಟ ಉಜಿರು ಕಣಿಯೋ ಎಂದು ತಿಳಿಯುತ್ತಿರಲಿಲ್ಲ. ಅಷ್ಟರಲ್ಲಿ ಕೆಳಗೆ



ಬಿದಿರು ಹಿಂಡಿನ ಕಡೆಯಿಂದ 'ಗುರ್ರ್ ಗುರ್ರ್' ಗೂರಲು ಸದ್ದು ಕೇಳಿಸಿತು. ಯಾವುದೋ ಪ್ರಾಣಿಯ ಶಬ್ಧ. ಯಾಕೋ ಭಯವೆನಿಸಿತು, ಬಾವಿಯ ಕಡೆಗೆ ಹೋಗುವುದು ಬೇಡವೆಂದು ನಿರ್ಧರಿಸಿ, ಸುತ್ತೆಲ್ಲಾ ಒಮ್ಮೆ ಬೆಳಕು ಬೀರಿ ಮನೆಗೆ ಹಿಂದಿರುಗಿದೆವು. ನಾನು ಹಾಗೆಯೇ ತೂಕಡಿಸಿ ನಿದ್ದೆ ಹೋದೆ. ಅಮ್ಮ ಎಚ್ಚರವಾಗೇ ಇದ್ದರು.

ಬೆಳಗ್ಗೆ ಬೇಗನೇ, ಅಂದರೆ ಸುಮಾರು ಆರು ಗಂಟೆಯ ಹೊತ್ತಿಗೆ ಸಿದ್ದ ಬಂದಿದ್ದ. ಹೆಗಲಿಗೆ ಒಂಟಿ ಬ್ಯಾರಲ್ ನ ಕೋವಿಯೊಂದನ್ನು ನೇತು ಹಾಕಿಕೊಂಡಿದ್ದ.

"ಹಂದಿ ಹೊಡೆದೆವಮ್ಮಾ, ಬೆಳಗ್ಗೆ.. ತೊಟ್ಟಿಲು ಗುಂಡಿಯ ಹತ್ತಿರ" ಎಂದ. ಕೇಳಿ ಆಶ್ಚರ್ಯವೆನಿಸಲಿಲ್ಲ.

ಸಿದ್ದನ ಬಳಿ ಒಂಟಿ ಬ್ಯಾರಲ್ ನ ಗನ್ ಒಂದಿತ್ತು. ಸಂಪಾಜೆಯಲ್ಲಿ ಕಾಡು ಕಡಿಯುವ ಕೆಲಸಕ್ಕೆ ಹೋಗುತ್ತಿದ್ದಾಗ ಪರಿಚಯವಾದ ಕಾಸರಗೋಡಿನ ಮಲೆಯಾಳಿಯೊಬ್ಬನ ಬಳಿಯಿಂದ 600 ರೂಪಾಯಿಗೆ ಖರೀದಿಸಿದ್ದೆಂದು ಹೇಳುತ್ತಿದ್ದ. ಆ ಕೋವಿಯನ್ನು ಹಿಡಿದುಕೊಂಡು ಸಿದ್ದ, ಮರ ಕೊಯ್ಯುವ ಬಾಬು, ಮೇಸ್ತ್ರಿ ಶೇಖರ ಎಲ್ಲರೂ ತಿಂಗಳಿಗೊಮ್ಮೆ ಹಂದಿ ಬೋಂಟೆ (ಬೇಟೆ) ಗೆ ಹೋಗುವುದಿತ್ತು. ಬಾಬು, ಶೇಖರ ಮತ್ತಿತರರ ಕೆಲಸ - ಡಬ್ಬಿಗಳನ್ನು ಜೋರಾಗಿ ಕೋಲಿನಿಂದ ಬಾರಿಸಿ ಶಬ್ಧ ಉಂಟು ಮಾಡುವುದು, ಪೊದೆ ಪೊದರುಗಳಿಗೆಲ್ಲಾ ದೊಡ್ಡ ದೊಡ್ಡಾ ಬಡಿಗೆಯಿಂದ ಜೆಪ್ಪಿ "ಹೋ" ಎಂದು ಕಿರುಚುತ್ತಾ ಗದ್ದಲ ಉಂಟು ಮಾಡುವುದು. ಯಾವುದೋ ಕುರುಚಲು ಪೊದರಿನೊಳಗೆ ಕಾಡು ಹಂದಿಗಳು ಇದ್ದ ಪಕ್ಷದಲ್ಲಿ ಗದ್ದಲಕ್ಕೆ ಹೆದರಿ ಹೊರಗೆ ಓಡಿ ಬಂದಾಗ ಗನ್ ಇರುವವರು ಅದಕ್ಕೆ ಗುರಿ ಇಟ್ಟು ಬೇಟೆಯಾಡುವುದು. ತೋಮಸ ಪುರ್ಬುಗಳು ಈ ಥರದ ಹಂದಿ ಬೇಟೆಗೆ ಹೆಸರುವಾಸಿ. ತಮ್ಮ ಭತ್ತದ ಗದ್ದೆಯ ಪಕ್ಕ - ಕೆಲವೊಂದು ಹಂದಿಗಳನ್ನು ಹೊಡೆದಿದ್ದರೂ ಕೂಡ. ಆದರೆ ಸಿದ್ದನಿಗೆ ಈ ವರೆಗೂ ಯಾವ ಹಂದಿಯೂ ಬಿದ್ದಿರಲಿಲ್ಲ.

'ತೊಟ್ಟಿಲು ಗುಂಡಿ' ಸ್ವರ್ಣಾ ನದಿಯಲ್ಲಿರುವ ಒಂದು ವಿಶಿಷ್ಟವಾದ ಜಾಗ. ಸ್ವರ್ಣಾ ನದಿ ಕುದುರೆಮುಖದ ಬೆಟ್ಟಗಳಲ್ಲಿ ಹುಟ್ಟಿ ಪಶ್ಚಿಮಾಭಿಮುಖವಾಗಿ ಕಾರ್ಕಳ, ಉಡುಪಿ ತಾಲೂಕುಗಳಲ್ಲಿ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತದೆ. ಕಾರ್ಕಳದಿಂದ ಕುದುರೆಮುಖಕ್ಕೆ ಹೋಗುವ ಹೆದ್ದಾರಿಯಲ್ಲಿ 'ಕಡಾರಿ' ಎಂಬ ಸ್ಥಳದಲ್ಲಿ ಸ್ವರ್ಣಾ ನದಿಗೆ ಅಡ್ಡಲಾಗಿ ಸೇತುವೆಯೊಂದಿದೆ. ಅಲ್ಲಿಂದ ಸುಮಾರು 4 ಕಿ.ಮೀ. ಕೆಳಗಡೆ ಇದೆ ತೊಟ್ಟಿಲು ಗುಂಡಿ. ತೊಟ್ಟಿಲಿನಾಕಾರದಲ್ಲಿರುವ ಕಲ್ಲು ಕಟ್ಟೆಗಳ ಮಧ್ಯದಲ್ಲಿ ನದಿ ನೀರು ಹರಿಯುವುದರಿಂದ ಈ ಹೆಸರು. ನಮ್ಮ ತೋಟಕ್ಕಿಂತ ಸ್ವಲ್ಪ ದೂರದಲ್ಲೇ ಇದೆ ಇದು. ತೊಟ್ಟಿಲು ಗುಂಡಿಗಿಂತ ಸ್ವಲ್ಪ ಮೇಲೆ ನದಿ ಪಕ್ಕದಲ್ಲೇ ವಾಮಯ ದರ್ಖಾಸು ಎಂಬ ಜಾಗವಿದೆ. ಹಲವಾರು ವರ್ಷಗಳಿಂದ ಖಾಲಿ ಬಿದ್ದಿದ್ದ ಆ ಜಾಗದಲ್ಲಿ ಕಳೆದೆರಡು ವರ್ಷಗಳಿಂದ ಯಾರೋ ಮಲೆಯಾಳಿಗಳು ವಾಸ ಮಾಡುತ್ತಿದ್ದರು.

ಎರಡೆಕರೆ ಜಾಗದಲ್ಲಿ ಮರಗೆಣಸು ಹಾಕಿದ್ದರು. ಮರಗೆಣಸಿನ ಆಸೆಗೆ ಕಾಡು ಹಂದಿಗಳು ಬರುವುದು ಸಾಮಾನ್ಯ. ಹಾಗೆ ಬಂದಿದ್ದ ಹಂದಿಯೊಂದನ್ನೇ ಸಿದ್ದ ಮತ್ತು ಆತನ ತಂಡ ರಾತ್ರಿ ಕಾವಲು ಕಾದು ಹೊಡೆದದ್ದು.

"ಪೆಟ್ಟು ತಿಂದು ಓಡಿ ಹೋಯಿತು, ಕೈಗೆ ಸಿಗಲಿಲ್ಲ. ಕತ್ತಲಲ್ಲಿ ಎತ್ತ ಹೋಯಿತು ಎಂದು ತಿಳಿಯಲಿಲ್ಲ. ಹುಡುಕಲೂ ಆಗಲಿಲ್ಲ, ದರಿದ್ರ.." ಹಳಿದುಕೊಂಡ ಸಿದ್ದ.

"ಕಾಡು ಹಂದಿ ಮಾಂಸ ನೋಡದೇ ಎಷ್ಟೊಂದು ದಿನವಾಯಿತು, ಸರಿಯಾಗಿ ಅದರ ನೆತ್ತಿಗೆ ಹೊಡೆದಿದ್ದು ಗುಂಡು. ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ..." ನಿರಾಶೆಯನ್ನು ಮರೆ ಮಾಚುತ್ತಾ ಹೇಳಿದ ಸಿದ್ದ ಅಮ್ಮನ ಹತ್ತಿರ.

ರಾತ್ರಿ ತೋಟದಲ್ಲಿ ಏನೋ ಸದ್ದಾಗುತ್ತಿತ್ತೆಂದೂ, ಟಾರ್ಚ್ ನ ಬೆಳಕಿಗೆ ಏನೂ ಕಾಣಿಸಲಿಲ್ಲವೆಂದೂ ಅಮ್ಮ ಅಂದರು.

"ತೋಟದ ಬಾವಿಗೆ ಏನೋ ಬಿದ್ದಂತೆ ಸದ್ದು ಕೂಡಾ ಕೇಳಿಸಿತು, ನಾವು ಆ ಕಡೆಗೆ ಹೋಗಿ ನೋಡಲಿಲ್ಲ" ನಾನೂ ದನಿಗೂಡಿಸಿದೆ.

ಆತುರಾತುರವಾಗಿ ಬಾವಿಯ ಕಡೆಗೆ ಓಡಿದ ಸಿದ್ದ. ಹೋದಷ್ಟೇ ವೇಗದಲ್ಲಿ ಏದುಸಿರು ಬಿಡುತ್ತಾ ವಾಪಾಸ್ ಬಂದ.

(ಮುಂದಿನ ಪುಟಕ್ಕೆ)

# ಕಥೆ

## ಬೇಟೆ (ಮುಂದುವರೆದುದು)

"ಅದೇ ಹಂದಿ ಅಂತ ಕಾಣ್ಸತ್ತೆ. ಬಾವಿಯ ಬಳಿಯಲ್ಲಿ ನೆತ್ತರ ಕಲೆಗಳು, ಬಾವಿಗೇನೂ ಬಿದ್ದಿಲ್ಲ."
"ಮತ್ತೇನೋ ನೀರಿಗೆ ಬಿದ್ದಂತಾಯಿತಲ್ಲಾ?"

"ರಭಸಕ್ಕೆ ಕಲ್ಲೇನಾದರೂ ಇರಬಹುದು. ಅದಕ್ಕೆ ಏಟು ಸರಿಯಾಗಿ ತಾಗಿದೆ. ಗೇರು ತೋಪಿನ ಕಡೆಗೆ ಓಡಿದಂತಿದೆ. ಆ ಕಡೆ ತೋಟದ ಬೇಲಿ ಹುಡಿಯಾಗಿದೆ" ಅಂತ ಏನೇನೋ ಅಂದ.
ಬಾಬು, ಶೇಖರನೂ ಅಷ್ಟರಲ್ಲಿ ಬಂದು ಸೇರಿದ್ದರು. ಬಾಬು ಹಟ್ಟಿಗೆ ಹೋಗಿ ಸೊಪ್ಪು ಕೊಚ್ಚಲು ಉಪಯೋಗಿಸುತ್ತಿದ್ದ ಉದ್ದನೆಯ ಕತ್ತಿಯನ್ನು ಹಿಡಿದುಕೊಂಡು ಗೇರು ತೋಪಿನ ಕಡೆಗೆ ಓಡಿದ. ದೊಡ್ಡದಾದ ಹಂದಿಯೆಂದೂ, ಅಷ್ಟು ದೊಡ್ಡ ಹಂದಿಯನ್ನು ತಾವ್ಯಾವತ್ತೂ ನೋಡಿಲ್ಲವೆಂದೂ ಹೇಳಿಕೊಳ್ಳುತ್ತಾ, ಕಾಡು ಹಂದಿ ಮಾಂಸ ತಿಂದು ತುಂಬಾ ದಿನ ಆಯಿತು;
ಇವತ್ತು ಅದನ್ನು ಹುಡುಕಿ ಹಬ್ಬ ಮಾಡುವುದೆಂದೂ ಮಿಕ್ಕ ಮಾಂಸವನ್ನು ಬಜಗೋಳಿಯಲ್ಲಿ ಗಡಂಗಿನ ಹಿಂಬದಿ ಮಾರುವುದೆಂದೂ ಆಡಿಕೊಳ್ಳುತ್ತಾ ಇಬ್ಬರೂ ಗೇರು ತೋಪಿನ ಕಡೆಗೆ ಹೆಜ್ಜೆ ಹಾಕಿದರು. ನನಗೂ ಹಂದಿ ನೋಡುವ ಕುತೂಹಲ ತಡೆಯಲಾಗದೆ, ಅಮ್ಮ ಹೋಗಬೇಡವೆಂದರೂ ಕೇಳದೆ ಅವರ ಹಿಂದೆ ಓಡಿದೆ. ತೋಟದ ಬಲ ಬದಿಗೆ ಸರ್ಕಾರೀ ಗೇರು ತೋಪೊಂದಿದೆ. ಹೆಸರಿಗೆ ಮಾತ್ರ ಗೇರು ತೋಟ ಆದರೆ ಅದರ ಹೆಚ್ಚಿನ ಭಾಗವನ್ನಾಕ್ರಮಿಸಿರುವುದು ಗಾಳಿ ಮತ್ತು ಅಕೇಶಿಯಾ ಮರಗಳು. ಸುಮಾರು 100 ಎಕರೆ ಜಾಗದಲ್ಲಿ ವಿಶಾಲವಾಗಿ ದಟ್ಟವಾಗಿ ಹಬ್ಬಿರುವ ಆ ತೋಪಿಗೆ ಊರವರು ಅಗತ್ಯದ ಸೊಪ್ಪು ಸೌದೆ ಕಡಿಯಲು ಬರುತ್ತಿದ್ದುದುಂಟು.

ಆ ದಿನ ಬೆಳಗ್ಗೆಯೇ ಸೌದೆಗಾಗಿ ಬಂದ ಶಂಭುವಿನ ಹೆಂಡತಿ ಗಿರಿಜಳಿಗೆ ಕಂಡ ದೃಶ್ಯ ಆಕೆಗೆ ಭಯವನ್ನೂ ಆಶ್ಚರ್ಯವನ್ನೂ ಏಕಕಾಲದಲ್ಲಿ ಉಂಟುಮಾಡುವಂತಿತ್ತು. ಗೇರು ತೋಪಿನ ಗಡಿಯ ಕಲ್ಲುಗುಪ್ಪೆಗೆ ಒರಗಿದಂತಿದ್ದ ಭಾರೀ ಗಾತ್ರದ ದೈತ್ಯ ಕಾಡು ಹಂದಿ. ಹತ್ತಿರ ಹೋಗಲು ಧೈರ್ಯ ಸಾಲದೆ, ಬೇಗ ಬೇಗನೆ ಮನೆಯ ಕಡೆ ಓಡಿ ಶಂಭುವನ್ನೂ, ಜೊತೆಗೆ ಇನ್ನೊಬ್ಬ ಕಪ್ಪಗೆ ಕುಳ್ಳಗೆ ಇದ್ದ ಯುವಕನನ್ನೂ ಕರೆದುಕೊಂಡು ಬಂದಳು.

****

"ಕೂ ಕೂ" ಎರಡು ಬಾರಿ ಸಿದ್ದನ ಧ್ವನಿ ಕೇಳಿಸಿತು ನದಿಯ ಬದಿಯ ಗೇರು ತೋಪಿನ ಕಡೆಯಿಂದ. ಬಾಬು ಮತ್ತು ಶೇಖರ ಸಿದ್ದನಿಗೆ ಹಂದಿ ಸಿಕ್ಕಿತೇನೋ ಎಂದುಕೊಂಡು ಸ್ವರ ಕೇಳಿಸಿದ ಕಡೆಗೆ ಹೋದರು. ನಾನೂ ಹಿಂಬಾಲಿಸಿದೆ. ಕಲ್ಲುಗುಪ್ಪೆಯ ಹತ್ತಿರ ಸಿದ್ದ ಯಾರೊಡನೆಯೋ ಜೋರು ಜೋರಾಗಿ ಮಾತಾಡುತ್ತಿದ್ದ. ಹತ್ತಿರ ಹೋದಾಗ ಅಲ್ಲಿ ಸಿದ್ದ, ಶಂಭು, ಗಿರಿಜ ಮತ್ತೊಬ್ಬ ಇದ್ದರು. ಸಿದ್ದ ಹೊಡೆದ ಹಂದಿಯನ್ನು ನೋಡಿದೆ. ಅದೊಂದು ದೈತ್ಯ ದೇಹೀ ವರಾಹ. ನಾನು ಒಂದೆರಡು ಸಲ ಅಪ್ಪನ ಜೊತೆಗೆ ಗಾಳಿ ಗೆಲ್ಲು ಕಡಿಯಲು ತೋಪಿಗೆ ಹೋಗಿರಬೇಕಾದರೆ ಹಂದಿ ಮರಿಗಳನ್ನು ನೋಡಿದ್ದೆ. ಆದರೆ ದೊಡ್ಡ ಕಾಡು ಹಂದಿಯನ್ನು ನೋಡುವುದು ಮೊದಲ ಸಲ.
ಸಿದ್ದ ಹೊಡೆದ ಗುಂಡಿನ ಏಟು ಅದರ ಹಿಂಭಾಗದ ತೊಡೆಗಿಂತ ಸ್ವಲ್ಪ ಮೇಲೆ ತಗುಲಿತ್ತು. ಒಂದೇ ಏಟಿಗೆ ಪ್ರಾಣ ಹೋಗಿರಲು ಸಾಧ್ಯವಿರಲಿಲ್ಲ. ತುಂಬಾ ಸಮಯವಾದುದರಿಂದ ವಿಪರೀತ ರಕ್ತಸ್ರಾವವಗಿತ್ತು. ಆ ದೈತ್ಯ ದೇಹಿ ಕಲ್ಲುಗುಪ್ಪೆಗೆ ಒರಗಿದಂತೆ ಬಿದ್ದಿತ್ತು. ಮಿಸುಕಾಡುತ್ತಿರಲಿಲ್ಲ. ಸುತ್ತೆಲ್ಲಾ ಹೆಪ್ಪುಗಟ್ಟಿದ ರಕ್ತ.
ಸಿದ್ದ ಹಂದಿ ಬಿದ್ದ ಜಾಗಕ್ಕೆ ಬರುವ ಮೊದಲೇ ಅಲ್ಲಿ ಗಿರಿಜ, ಶಂಭು ಮತ್ತೊಬ್ಬ ಹಾಜರಿದ್ದರು. ಕಲ್ಲುಗುಪ್ಪೆಯ ಸುತ್ತ ಇದ್ದ ಕುರುಚಲು ಪೊದೆಗಳನ್ನು ಕಡಿದು ಸೊಪ್ಪನ್ನೆಲ್ಲಾ ಸಮತಟ್ಟಾದ ಜಾಗದಲ್ಲಿ ಹಾಸಿದ್ದರು, ಹಂದಿ ಕಡಿಯಲು.
"ಸತ್ತಿದೆ" ಎಂದ ಶಂಭು. "ಯಾರೋ ರಾತ್ರಿ ಹೊಡೆದಿದ್ದಾರೆ." ತಾನು ಹೊಡೆದ ಹಂದಿಯ ಬಳಿ ತಾವು ಬರುವ ಮೊದಲೇ ಬೇರೊಬ್ಬರ ದರ್ಶನವಾದುದು ಸಿದ್ದನಿಗೆ ಅಸಹನೆ-ಯುಂಟುಮಾಡಿತೆನಿಸುತ್ತದೆ.
ಅದಕ್ಕಿಂತಲೂ ಹೆಚ್ಚಾಗಿ ಹಂದಿ ಹೊಡೆದ ವಿಚಾರ ಶಂಭುವಿಗೆ ತಿಳಿದದ್ದು, ಆತ ಹಂದಿ ಕಡಿಯಲು ತಯಾರಾಗುತ್ತಿದ್ದುದು ಎಲ್ಲಾ ನೋಡಿ ಸಿದ್ದ, ಬಾಬು, ಶೇಖರರಿಗೆ ಸಿಟ್ಟುಕ್ಕಿ ಬಂತು. ಹೊತ್ತೇರುತ್ತಿತ್ತು. ಸೂರ್ಯನ ಮುಂಜಾನೆಯ ಕಿರಣಗಳು ತಮ್ಮ ದೇಹೋಷ್ಣವನ್ನು ನಿಧಾನವಾಗಿ ಹೆಚ್ಚಿಸಿಕೊಳ್ಳುತ್ತಿದ್ದವು. ಸತ್ತ ಹಂದಿ ಯಾರಿಗೆ ಸೇರಬೇಕು ಎಂಬ ಬಗ್ಗೆ ಇತ್ತಂಡಗಳಲ್ಲಿ ಆರಂಭವಾದ ಸಣ್ಣದೊಂದು ಚರ್ಚೆ ಬಿಸಿಲೇರಿದಂತೆ ಕಾವು ಪಡೆದುಕೊಳ್ಳತೊಡಗಿತು. ಹಂದಿ ಹೊಡೆದಿದ್ದು ತಾನೆಂದೂ, ನ್ಯಾಯವಾಗಿ ಅದು ತನಗೇ ಸೇರಬೇಕೆಂದು ಸಿದ್ದ.

**(ಮುಂದಿನ ಪುಟಕ್ಕೆ)**

## ಬೇಟೆ (ಮುಂದುವರೆದುದು)

"ಹೊಡೆದಿದ್ದು ನೀನೆ ಎಂದು ಹೇಗೆ ನಂಬಲಿ? ಮೊದಲು ಅದನ್ನು ಇಲ್ಲಿ ನೋಡಿದ್ದು ನಾವು, ನಮಗೆ ಬೇಕಾದ್ದು ತೆಗೆದುಕೊಂಡು ಉಳಿದದ್ದು ಬೇಕಾದರೆ ನಿನಗೆ" ಎಂದು ಶಂಭು. ಶರಂಪರ ವಾಗ್ವಾದಗಳು ನಡೆದು ಕೈ ಕೈ ಮಿಲಾಯಿಸುವ ಹಂತಕ್ಕೇರಿತು ವಿವಾದ. ಸಿದ್ದ, ಬಾಬು, ಶೇಖರರಿಗೆ ನಖಶಿಖಾಂತ ಉರಿದು ಹೋಯಿತು. ಕಂಬಾಯಿಯನ್ನು ಮಡಿಸಿ ಕಟ್ಟಿ ಸಿಟ್ಟಲ್ಲಿ ನಡುಗುತ್ತಾ, "ನೀನು ಗಂಡಸೇ ಆಗಿದ್ದರೆ ನಮ್ಮ ಮುಂದೆ ಈ ಹಂದಿಯನ್ನು ಮುಟ್ಟುವ ಧೈರ್ಯ ಮಾಡು" ಎಂದು ಶಂಭುವಿನ ಗಂಡಸ್ತನಕ್ಕೇ ಸವಾಲು ಹಾಕಿದರು. ಸೊಪ್ಪು ಕೊಚ್ಚುವ ಕತ್ತಿ ಹಿಡಿದು ಆ ಸತ್ತ ಹಂದಿಗೆ ಅಡ್ಡಲಾಗಿ ನಿಂತೇ ಬಿಟ್ಟರು. ಹೊತ್ತೇರಿದಂತೆ ಆ ಹೆಪ್ಪುಗಟ್ಟಿದ ರಕ್ತದ ವಾಸನೆಗೆ ಬವಳಿ ಬಂದಂತಾಗಿ ನಾನು ಅಲ್ಲಿ ನಿಲ್ಲಲಾರದೆ ಮನೆಯ ಕಡೆಗೆ ಬಂದೆ. ಅಷ್ಟು ಹೊತ್ತು ಸಿದ್ದ ಮತ್ತು ಶಂಭುವಿನ ನಡುವೆ ಒಂದು ರಾಜೀ ಸೂತ್ರ ಏರ್ಪಟ್ಟಿರಲಿಲ್ಲ.

****

ಇಳಿ ಸಂಜೆಯ ಹೊತ್ತಿಗೆ ಕಾಲೆಳೆಯುತ್ತಾ ಬಂದ ಪೆಚ್ಚು ಮೋರೆ ಹಾಕಿಕೊಂಡು ಸಿದ್ದ. "ಏನಾಯ್ತು?" ನನಗೆ ಕುತೂಹಲ. "ಆ ಸೂ*ಮಗ ನಟರಾಜ ಮತ್ತು ಭೋಪಣ್ಣ ಎಲ್ಲಾದರೂ ಮತ್ತೆ ನನ್ನ ಕಣ್ಣಿಗೆ ಕಂಡರೆ ಗುಂಡಿಟ್ಟು ಹೊಡೆಯುವುದು ಗ್ಯಾರಂಟಿ. ಹಡಬ್ಬೆ ಮು** ಮಕ್ಳು. ಸರ್ಕಾರೀ ಸಂಬಳ ಸಾಲದೆ ನಮ್ಮ ರಕ್ತ ಕುಡಿತಾರೆ." ಎಂದು ಹೀನಾಮಾನ ಬೈದು ಮನಸೋ ಇಚ್ಛೆ ಶಪಿಸಿದ. ಸಿದ್ದನ ಧ್ವನಿಯಲ್ಲಿ ನಿರಾಶೆ ಮತ್ತು ಸಿಟ್ಟು.

****

ಬೋಪಣ್ಣ ಫಾರೆಸ್ಟ್ ಡಿಪಾರ್ಟ್ ಮೆಂಟಿನವನು. ಮುಡಾರು, ಕೆರ್ವಾಶೆ ಮತ್ತು ದುರ್ಗದ ಸರ್ಕಾರೀ ತೋಪಿನ ಗಾರ್ಡ್. ಮಡಿಕೇರಿ ಕಡೆಯವನು. ಕಳೆದ ಮೂರು ವರ್ಷಗಳಿಂದ ಇಲ್ಲೇ ಇದ್ದಾನೆ. ನಟರಾಜ ಫಾರೆಸ್ಟ್ ವಾಚರ್. ಹೆಬ್ರಿಯವನು. ಗಾಳಿಮರಗಳ ಅಕ್ರಮ ಮಾರಾಟ, ಗೇರು ತೋಪಿನೊಳಗಿಂದ ಕೆಂಪು ಕಲ್ಲುಗಳನ್ನು ಕದ್ದು ಸಾಗಿಸುವುದು ಮುಂತಾದ ದಂಧೆಗಳಲ್ಲಿ ಬೋಪಣ್ಣ ಮತ್ತು ನಟರಾಜನ ಕೈವಾಡವಿದೆ. ಊರವರಿಗೆಲ್ಲಾ ಇದು ತಿಳಿದ ವಿಷಯವೇ. ಒಂದೆರಡು ಬಾರಿ ಇವರ ಮೇಲೆ ಡಿಪಾರ್ಟ್ ಮೆಂಟಿಗೆ ಕಂಪ್ಲೇಂಟು ಹೋಗಿ ಬೇರೆ ಕಡೆಗೆ ವರ್ಗವಾಗಿದ್ದರು. ಆದರೂ ಯಾರೋ ರಾಜಕಾರಣಿಯ ಕೈ ಬಿಸಿ ಮಾಡಿ ಮತ್ತೆ ಕಾರ್ಕಳ ವಲಯಕ್ಕೇ ಬಂದಿದ್ದರು.

ಇಂದು ಬೆಳಗ್ಗೆ ತೋಪಿನೊಳಗೆ ಯಾರದೋ ಜೋರು ಮಾತು ಕೇಳಿ ಆ ಕಡೆಗೆ ಬಂದವರಿಗೆ ಕಂಡಿದ್ದು ಕಲ್ಲು ಗುಪ್ಪೆಗೆ ಒರಗಿದ್ದ ದೊಡ್ಡದೊಂದು ಹಂದಿ.

"ಕಳ್ಳ ಮಕ್ಳಾ, ನ್ಯಾಶನಲ್ ಫಾರೆಸ್ಟ್ ರೇಂಜು ಇದು. ಬೇಟೆ ಆಡಿದರೆ ಮೂರು ವರ್ಷ ಕಂಬಿ. ಯಾವನೋ ಹೊಡೆದಿದ್ದು ಇದನ್ನ?"

ಸಿದ್ದ ಭಯದಿಂದಲೇ "ನಾನೇ ಹೊಡೆದಿದ್ದು ಸಾರ್, ತೊಟ್ಟಿಲು ಗುಂಡಿ ಪಕ್ಕ ಮರಗೆಣಸಿನ ತೋಟಕ್ಕೆ... "

ಬೋಪಣ್ಣ ಮತ್ತು ನಟರಾಜ ಕಣ್ಸನ್ನೆಯಲ್ಲೇ ಏನೋ ಮಾತಾಡಿಕೊಂಡರು.

"ಕೋವಿ ಇಟ್ಕೊಂಡಿದ್ದೀಯಾ? ಲೈಸನ್ಸ್ ಇದೆಯಾ? ರೇಂಜರ್ ಸಾಹೇಬ್ರು ತುಂಬಾ ಸ್ಟ್ರಿಕ್ಟು, ನ್ಯಾಶನಲ್ ಫಾರೆಸ್ಟ್ ಬೇರೆ"

"ಲೈಸನ್ಸೂ.. " ತೊದಲಿದ ಸಿದ್ದ.

"ಸರಿ ಸರಿ.. ನೀನೇ ಅಂಥಾ ಯಾರಿಗೂ ಹೇಳ್ಬೇಡ. ಹಂದೀನ ಎತ್ತಿ ಜೀಪಿಗೆ ಹಾಕಿ" ಅಂದ ಭೋಪಣ್ಣ.

"ಸಾರ್.. ಹಂಗ್ ಮಾಡ್ಬೇಡ್ರಿ.. ಕಾಡು ಹಂದಿ ಸಾರ್.." ಗೋಗರೆದರು ಎಲ್ಲರೂ. ಬೇಟೆ ಕೈ ಜಾರೀತೆಂಬ ಭಯದಿಂದ.

"ಕಳ್ಳ ಭೋ**ಗಳಾ... ಸಾಯಲಿ ಅಂಥಾ ಬಿಟ್ರೆ ನಖರಾ ಮಾಡ್ತೀರೋ... ನಾನೇನಾದ್ರೂ ಡಿಪಾರ್ಟ್ ಮೆಂಟಿನವರಿಗೆ ತಿಳಿಸಿದರೆ ಒಬ್ಬೊಬ್ಬರೂ ಕಂಬಿ ಎಣಿಸ್ತೀರಾ. ಮರ್ಯಾದೆಯಿಂದ ಹೇಳಿದಷ್ಟು ಮಾಡಿ ಬದುಕಿಕೊಳ್ಳಿ" ಎಂದು ಕಿರುಚಿ, ನಟರಾಜನ ಕಡೆ ತಿರುಗಿ "ಅದನ್ನು ಎತ್ತಿ ಜೀಪಿಗೆ ಹಾಕಿಸು" ಎಂದ.

ನಟರಾಜ, ಬೋಪಣ್ಣರನ್ನ ಎಷ್ಟೊಂದು ಗೋಗರೆದರೂ ಯಾವುದೇ ಪ್ರಯೋಜನವಾಗದೆ ಎಲ್ಲರೂ ಸೇರಿ ತಮಗೆ ಸೇರಬೇಕಾಗಿದ್ದ ಆ ದೈತ್ಯ ದೇಹಿಯನ್ನು ಕಷ್ಟಪಟ್ಟು ಹೊತ್ತು ಜೀಪಿನ ಹಿಂಭಾಗಕ್ಕೆ ಎತ್ತಿ ಹಾಕಿದರು.

ಬೋಪಣ್ಣ, ನಟರಾಜ ಇಬ್ಬರೂ ತಾವಾಡಿದ ಬೇಟೆಯನ್ನು ನೆನೆಸಿ ಮೀಸೆಯಡಿಯಲ್ಲೇ ನಕ್ಕರು. ಗೇರು ತೋಪಿನ ಮಣ್ಣ ಮಾರ್ಗದಲ್ಲಿ ವೇಗವಾಗಿ ಹೋದ ಜೀಪು ಎಬ್ಬಿಸಿದ ಧೂಳು ಸಿದ್ದನ ಕಣ್ಣಲ್ಲಿ ನೀರೂರಿಸಿತು. ■ (ಛಾಯಾಚಿತ್ರ ಕೃಪೆ: ಅಂತರ್ಜಾಲ)



## ಇ-ಕಾಲದಲ್ಲಿ

# ಸಂತಸದ SMULE ಸಂಗೀತ ಸಂಭ್ರಮ




ವಿ.ಪ್ರಸನ್ನಕುಮಾರ್

ಸೆಪ್ಟೆಂಬರ್ ೨೦೧೭ ರಲ್ಲಿ, ನಮ್ಮ ಬೃಂದಾವನ ಬಿಂದಾಸ್ ಬಳಗದ ವಾಟ್ಸಪ್ಪ್ ಗ್ರೂಪಿನಲ್ಲಿ ಬಂದ ಒಂದು ವೀಡಿಯೊ ವಿಶೇಷವಾಗಿ ನನ್ನ ಗಮನ ಸೆಳೆಯಿತು!! ಅವಳಿ ಜವಳಿ ಹುಡುಗಿಯರಿಬ್ಬರು "ಈ ಸಂಭಾಷಣೆ ನಮ್ಮ ಈ ಪ್ರೇಮ ಸಂಭಾಷಣೆ" ಚಿತ್ರಗೀತೆಯನ್ನು ಅತ್ಯಂತ ಮಧುರವಾಗಿ ಮನಮೋಹಕವಾಗಿ ಹಾಡಿದ್ದ ವೀಡಿಯೋ!! ಅದನ್ನ ವೀಕ್ಷಿಸಿದ ಮೇಲೆ ತಿಳಿಯಿತು, ಅದು ಒಂದೇ ಹುಡುಗಿ, SMULE ಅನ್ನೊ APP ನಲ್ಲಿ ಹಾಡಿರುವುದು ಎಂದು...ಅವಳೇ, ಇತ್ತಿಚಿಗೆ ನಡೆದ ಕನ್ನಡ ಕೋಗಿಲೆ ಸಂಗೀತ ಸ್ಪರ್ಧೆಯಲ್ಲಿ ೮ ಜನ FINALIST ಗಳಲ್ಲಿ ಒಬ್ಬಳಾಗಿದ್ದ ಶ್ವೇತಾ ದೇವನಹಳ್ಳಿ ಎಂಬುದು, ನನ್ನ ಮೊದಲನೆ SMULE ಹಾಡಿನ ಜೊತೆಗಾರ್ತಿ ಮತ್ತು SMULE ಸೇರಲು ನನಗೆ ಪ್ರೇರಣೆಯಾದ ಮುದ್ದು ಪುಟ್ಟ ಗಾಯಕಿ.

SMULE ಅಂದರೆ ಏನೆಂದು ತಿಳಿಯದಿದ್ದ ನನಗೆ ಅಲ್ಲಿಂದ ಶುರುವಾಯ್ತು ನೋಡಿ ಸಂತಸದ SMULE ಸಂಗೀತ ಸಂಭ್ರಮ!!!

SMULE ಎನ್ನುವುದು ಒಂದು ಮ್ಯೂಸಿಕ್ APP... ಹಾಡುವುದಕ್ಕೆ ಅಪಾರವಾದ ಆಸಕ್ತಿಯಿರುವ ನನ್ನಂಥ "ಬಾತ್ ರೂಮ್ ಸಿಂಗರ್ಸ್" ಗೆ SMULE ಒಂದು ಅತ್ಯಮೂಲ್ಯ ನಿಧಿ ಹಾಗು ಹಾಡಲು VIRTUAL ವೇದಿಕೆ ಅಂದರೆ ಅತಿಶಯೋಕ್ತಿಯಾಗಲಾರದು!! ಯಾಕೆಂದರೆ, ಇದರ ಮೂಲಕ ನಮಗೆ ಬರುವ ಹಾಡನ್ನು, ಬೇಕಾದರೆ ನಾವೊಬ್ಬರೇ, ಇಲ್ಲದಿದ್ದರೆ ಇನ್ನೊಬ್ಬರ ಜೊತೆಯಲ್ಲಿ, ನಮ್ಮ ಮನೆಯ ಯಾವುದೇ ಕೋಣೆಯಿಂದ, ನಮಗೆ ಸಮಯ ಸಿಕ್ಕಾಗ, ಮ್ಯುಸಿಕ್ ಟ್ರಾಕ್ ನೊಂದಿಗೆ ಹಾಡಬಹುದು.... ಅದನ್ನು ಕೇಳುವುದಕ್ಕೆ ಹಾಗೂ ಪ್ರತಿಕ್ರಿಯಿಸುವುದಕ್ಕೆ ಪ್ರಪಂಚದ ಎಲ್ಲೆಡೆ ಸುಮಾರು ೫ ಮಿಲಿಯನ್ SMULE ಸದಸ್ಯರು ಕಾದು ಕುಳಿತಿರುತ್ತಾರೆ!!! **(ಮುಂದಿನ ಪುಟಕ್ಕೆ)**





SMULE APP ಅನ್ನು ನಮ್ಮ ಮೊಬೈಲ್ ಫೋನಿಗೆ ಡೌನ್ ಲೋಡ್ ಮಾಡಿ ವರುಷಕ್ಕೆ ೪೦ ಡಾಲರ್ ಚಂದಾ ಹಣ ಪಾವತಿ ಮಾಡಿದರಾಯಿತು...ಹತ್ತಾರು ಭಾಷೆಗಳಲ್ಲಿ, ಸಾವಿರಾರು ಹಾಡುಗಳ ಟ್ರ್ಯಾಕ್ ನೊಂದಿಗೆ , SOLO ಅಥವಾ ನೂರಾರು ಒಳ್ಳೆಯ SINGERS ಜೊತೆ ಯುಗಳ ಗೀತೆ ಹಾಡುವ ಅವಕಾಶ ನಮ್ಮದಾಗುವುದು. ನಮ್ಮ ಮೊಬೈಲ್ ಫೋನಿನ ಕ್ಯಾಮರ ಹಾಗು ಹೆಡ್ ಫ಼ೋನಿನ ಮೈಕ್ ಉಪಯೋಗಿಸಿಕೊಂಡು ಒಳ್ಳೆ ಆಡಿಯೊ ವೀಡಿಯೊ ಹಾಡುಗಳನ್ನು ರೆಕಾರ್ಡ್ ಮಾಡಬಹುದು. ನಾವು ಯಾವ ಹಾಡು ಹಾಡಬೇಕೆಂದು APP ನಲ್ಲಿ SEARCH ಮಾಡಿ ಕ್ಲಿಕ್ ಮಾಡಿದರಾಯಿತು, ಹಾಡಿನ ಸಾಹಿತ್ಯ ನಮ್ಮ ಮೊಬೈಲ್ ಸ್ಕ್ರೀನ್ ನಲ್ಲಿ ನಾವು ಯಾವ ಸಾಲು ಹಾಡಬೇಕೊ, ಆ ಸಾಲು ಹೈಲೈಟ್ ಆಗಿ ಅದಕ್ಕೆ ಬೇಕಾದ ಟ್ರ್ಯಾಕ್ ಸಂಗೀತ ಹೆಡ್ ಫೋನ್ ಮೂಲಕ ಕಿವಿಯಲ್ಲಿ ಕೇಳಿಸುತ್ತದೆ. ಹೆಡ್ ಫೋನಿನ ಮೈಕ್ ಬಳಸಿ ಹಾಡಿದರಾಯಿತು. ಉತ್ತಮ ಗುಣಮಟ್ಟದ ಆಡಿಯೊ ವೀಡಿಯೊ ರೆಡಿ ! ನಮ್ಮ ಮನಸ್ಸಿಗೆ ಸಮಾಧಾನ ಆಗುವವರೆಗೂ ಮತ್ತೆ ಮತ್ತೆ ರೆಕಾರ್ಡ್ ಮಾಡಿ, ನಮಗೆ ಸಮಾಧಾನ ಆದ ಮೆಲೆ SAVE ಮಾಡಬಹುದು. SAVE ಮಾಡಿದ ಹಾಡನ್ನು SMULE ನಲ್ಲಿ ಇರುವ ಸುಮಾರು ೫ ಮಿಲಿಯನ್ ಸದಸ್ಯರು ಆಡಿಯೊ ರೆಕಾರ್ಡ್ ಆಗಿದ್ದಲ್ಲಿ ಆಲಿಸಬಹುದು. ವೀಡಿಯೊ ರೆಕಾರ್ಡಿಂಗ್ ಮಾಡಿದ್ದರೆ ನೋಡಬಹುದು!

ಸದಸ್ಯರು ಒಂದು ಹಾಡಿನ ಕೆಲವು ಸಾಲುಗಳನ್ನು ಹಾಡಿ ತನ್ನನ್ನು FOLLOW ಮಾಡುವ ಸದಸ್ಯರು ಸೇರಿಕೊಳ್ಳಲು ಅದನ್ನು" ಇನ್ವೈಟ್) "INVITE) ಅಂತ ಕಳಿಸುತ್ತಾರೆ. ಮೊದ ಮೊದಲು ನಾನು ಇತರರ" ಇನ್ವೈಟ್ ಗೆ ಸೇರಿಕೊಳ್ಳುತ್ತಿದ್ದೆ..ಸುಮಾರು ೨ ತಿಂಗಳು ಹಾಗೆ ಮಾಡಿದ ಮೇಲೆ ಸ್ವಲ್ಪ ಧೈರ್ಯ ಮಾಡಿ ನಾನೇ ಯುಗಳ ಗೀತೆಗಳಲ್ಲಿ ಪುರುಷನು ಹಾಡುವ ಸಾಲುಗಳನ್ನು ಹಾಡಿ ಅದಕ್ಕೆ ಯಾರಾದರು ಸೇರುತ್ತಾರಾ ಅಂತ ಕಾದು ಕೂತಿರುತ್ತಿದ್ದೆ...ಒಂದು ವಾರದ ಅವಧಿಯೊಳಗೆ ಯಾರೂ ಸೇರಿಕೊಳ್ಳದಿದ್ದರೆ ಆ ಇನ್ವೈಟ್ CLOSE ಆಗಿಬಿಡುತ್ತೆ.

**(ಮುಂದಿನ ಪುಟಕ್ಕೆ)**

ನಮ್ಮ ಹಾಡುವ ವರಸೆ ಇಷ್ಟವಾದರೆ, ಇತರ ಸದಸ್ಯರು ನಮ್ಮನ್ನು" ಫಾಲೊ " ಮಾಡ್ತಾರೆ ಮತ್ತು ಅವರಿಗೆ ನಮ್ಮ ಹಾಡಿನ ವಿವರ ಅವರ INVITE BOX ಗೆ ಹೋಗುತ್ತೆ.ಹಾಡು ಕೇಳಿ ಇಷ್ಟವಾದರೆ ಅವರಿಗೆ ಆ ಹಾಡು ಹೇಳಲು ಬಂದರೆ, ನಮ್ಮ ಹಾಡಿಗೆ ಸೇರಿಕೊಳ್ಳುತ್ತಾರೆ ಇಲ್ಲದಿದ್ದರೆ ಇಲ್ಲ.ಮೊದಮೊದಲು ನಮ್ಮ ಇನ್ವೈಟ್ಸ್ ಗೆ ಒಬ್ಬರೊ ಇಬ್ಬರೊ ಸೇರಿಕೊಂಡರೆ ಅದೇನೊ ಖುಶಿ.ಅಂದ ಹಾಗೆ ಸೇರಿಕೊಳ್ಳುವವರಲ್ಲಿ ಕೆಲವರು ಇತ್ತಿಚಿನ ಬಾತ್ ರೂಮ್ ಸಿಂಗರ್ಸ್ ಕೂಡ ಇರ್ತಾರೆ.ಮತ್ತೆ ಕೆಲವರು ತುಂಬಾ ಒಳ್ಳೆಯ ಹಾಡುಗಾರರು ಇರ್ತಾರೆ. ಪರಿಚಯ ಇದ್ದಲ್ಲಿ ಕೆಲವು CELEBRITY SINGERS ಕೂಡ ಸೇರಿಕೊಳ್ಳುವರು.ಯಾರು ನಮ್ಮ ಹಾಡಿಗೆ ಸೇರುತ್ತಾರೆ ಅನ್ನೋದು ನಮ್ಮ FOLLOWERS ಮೇಲೂ, ಎಷ್ಟು-







ಚೆನ್ನಾಗಿ ಹಾಡುವವರು ಅನ್ನೋದು ಈ FOLLOWERS ಗಳ ಕಂಠಸಿರಿ ಹಾಗು ಸಂಗೀತ ಜ್ಞಾನದ ಮೇಲೂ ಹೋಗುತ್ತೆ!


SMULE ನಲ್ಲಿ ತುಂಬ ಥ್ಯಾಂಕ್ ಲೆಸ್ ಕೆಲಸ ಅಂದರೆ UPLOADERS ಗಳದ್ದು.ಎಷ್ಟೋ ಉತ್ಸಾಹಿ ಜನಗಳು ಕೆಲವರಿಗೆ ಹಾಡುವುದಕ್ಕೆ ಬಾರದಿದ್ದರೂ ಕೂಡ ಅಪ್ ಲೋಡರ್ಸ್ ಆಗುತ್ತಾರೆ. ಇವರು ಹಾಡುಗಳ ಟ್ರ್ಯಾಕ್ ಹಾಗು ಸಾಹಿತ್ಯ ಅಪ್ಲೋಡ್ ಮಾಡುವುದಲ್ಲದೆ, ಹಾಡಿನ ಸಾಹಿತ್ಯ ಹಾಕಿ, ನಾವು ಹಾಡುವಾಗ ಆ ಸಾಹಿತ್ಯದ ಸಾಲುಗಳು ಯಾವಾಗ ಹೈಲೈಟ್ ಆಗಬೇಕು ಅನ್ನೋದನ್ನು ಸೂಕ್ತವಾಗಿ ಹೈಲೈಟ್ ಮಾಡಿ, ನಮಗೆ ಹಾಡಲು ಸುಲಭ ಮಾಡಿಕೊಡುತ್ತಾರೆ. ಇವರಿಗೆ SMULE COMPANY ಆಗಲಿ, ಹಾಡುವ ಸದಸ್ಯರಾಗಲಿ ಯಾವ ಸಂಭಾವನೆ ಕೊಡುವುದಿಲ್ಲ...ನಮ್ಮಂಥ ಸಿಂಗರ್ಸ್ COMMENT BOX ನಲ್ಲಿ ಅಗಾಗ್ಗೆ "ಬೇಷ್" ಅನ್ನೊದು ಅಥವಾ ಹಾಡಿನ ಶುರು ಅಥವ ಕೊನೆಯಲ್ಲಿ ಅವರ ಹೆಸರು ಹೇಳಿ ಧನ್ಯವಾದಗಳನ್ನು ತಿಳಿಸುವುದು ಬಿಟ್ಟರೆ ಪಾಪ ಇವರಿಗೆ ಬೇರೇನೂ ಸಿಗುವುದಿಲ್ಲ. ಆದರೆ ಇವರು ಟ್ರ್ಯಾಕ್ಸ್ ಮತ್ತು ಸಾಹಿತ್ಯ SMULE ಗೆ ಅಪ್ ಲೋಡ್ ಮಾಡದಿದ್ದರೆ ನಾವು ಹಾಡಲಿಕ್ಕೆ ಆಗುವುದೇ ಇಲ್ಲ !


ಅಕ್ಟೊಬರ್ ೨೦೧೭ ರಲ್ಲಿ ಯಾವುದೇ FOLLOWERS ಇಲ್ಲದೆ ಶುರು ಮಾಡಿದ ನಾನು, ಒಂದು ವರ್ಷದಲ್ಲಿ - ೧೦೦೦ ಕ್ಕಿಂತ ಅಧಿಕ FOLLOWERS ಪಡೆದು ಈಗ ಸ್ವಲ್ಪ ತಕ್ಕ ಮಟ್ಟಿಗೆ ಹಾಡೋದನ್ನ ಕಲಿತುಕೊಂಡಿದ್ದೀನಿ. ಇದಕ್ಕೆ ಮುಖ್ಯ ಕಾರಣ ನಮ್ಮ ಸಂಗೀತದ ಗುರುಗಳಾದ ಸಿಂಹಾದ್ರಿ ಸಂತೆಬೆನ್ನೂರ್, SMULE ಸ್ನೇಹಿತರ CANDID COMMENTS ಮತ್ತು ಉತ್ತೇಜನ ನೀಡುವ ಪ್ರತಿಕ್ರಿಯೆಗಳು. ಹಾಗು ಮನೆಯಲ್ಲಿ ಗಂಟೆಗಟ್ಟಲೆ ಅರಚಿ-ಕೊಂಡರೂ ಸಹಿಸಿಕೊಂಡು ಆಗೊಮ್ಮೆ ಈಗೊಮ್ಮೆ ಅಭಿಪ್ರಾಯ ಕೊಡುವ ನನ್ನ ಶ್ರೀಮತಿ ಉಷಾ ಹಾಗು ಮಕ್ಕಳಾದ ಸುಹಾಸ್ ಮತ್ತು ಸ್ನೇಹ ಜೊತೆಗೆ ನಮ್ಮ ಅಳಿಯ ಮೈಕ್ ಗೂ ಸ್ವಲ್ಪ ಪರಿಚಯ ಮಾಡಿಸ್ತಾ ಇದ್ದೀನಿ ! **(ಮುಂದಿನ ಪುಟಕ್ಕೆ)**



"ಯಾರು ಕಿವಿ ಮುಚ್ಚಿದರು ನನಗಿಲ್ಲ ಚಿಂತೆ" ಎಂದು ಎದೆ ತುಂಬಿ ಹಾಡುವ ನನಗೆ SMULE ನಲ್ಲಿ ಹಾಡುವುದು ತುಂಬಾ ಖುಶಿ ನೀಡುತ್ತೆ. ಯಾರೇನು ಅಂದುಕೊಳ್ಳಲಿ, ಈ SMULE ನಲ್ಲಿ ನಮಗೆ ಇಷ್ಟವಾದ ಹಾಡನ್ನು ಸಾಧ್ಯವಾದಷ್ಟು ಚೆನ್ನಾಗಿ ಹಾಡಿದಾಗ ಆಗುವ ಆನಂದ ಅವರ್ಣನೀಯ! ಅದನ್ನು ನೀವು ಅನುಭವಿಸಿಯೇ ತಿಳಿದುಕೊಳ್ಳಬೇಕು. ನಮ್ಮ ಗುರುಗಳಾದ ಸಿಂಹಾದ್ರಿ ಕೂಡ ಹೇಳುವುದು ಒಂದೇ ಮಾತು, "ಶ್ರುತಿ, ತಾಳ, ರಾಗ, ಭಾವಬದ್ಧವಾಗಿ ಹಾಡು ಚೆನ್ನಾಗಿ ಬರಲು ಮಾಡಬೇಕಾದ್ದು ಕೇವಲ ಅಭ್ಯಾಸ, ಅಭ್ಯಾಸ, ಅಭ್ಯಾಸ". ದಿನಕ್ಕೆ ಸುಮಾರು ೨ ತಾಸು SMULE ನಲ್ಲಿ ಕಳೆಯುವ ನನಗೆ ಸಂಗೀತ ಹಾಗು SMULE ಮೇಲೆ ವಿಶೇಷವಾದ ಒಲವು ಮೂಡಿದೆ. "ನೀನಿಲ್ಲದೆ (SMULE) ನನಗೇನಿದೆ" ಅಂತ ಹಾಡಬೇಕೆನಿಸಿದೆ. ನೀವು SMULE APP ಬಳಸಿ ಹಾಡಲು ಶುರು ಮಾಡಿ!ನನ್ನನ್ನೂ FOLLOW ಮಾಡಿ! ಕನ್ನಡ, ಹಿಂದಿ, ಚಿತ್ರಗೀತೆ, ಭಾವಗೀತೆ, ಭಕ್ತಿಗೀತೆ, ಜನಪದಗೀತೆ ಎಲ್ಲ ಹಾಡುಗಳನ್ನು ಹಾಡಬಹುದು. ಇನ್ನೊಂದು ವರ್ಷದಲ್ಲಿ ನೀವು ಕೂಡ "ಸಂತೃಪ್ತಿ" ಯಿಂದ ಹೀಗೆ ಹಾಡುವಿರಿ. "SMULE ಇಲ್ಲದ ಜೀವನ ಶ್ರುತಿ ಲಯವಿಲ್ಲದ ತಾನ" ಎಂದು!

ನಿಮಗೆಲ್ಲ SMULE ಹೇಗೆ ಕಾಣುವುದು ಎಂಬುದನ್ನು ತಿಳಿಸಲು, SMULE ನ PROFILE ಪುಟ, INVITES ಪುಟ, ಇಷ್ಟವಾಗಿರುವ ಹಾಡುಗಳನ್ನು ಒಂದು ಕಡೆ ಇಡುವ FAVORITES ಪುಟ ಹಾಗು ತುಂಬಾ ಚೆನ್ನಾಗಿ ಹಾಡಿರುವ ಒಂದು COLLAB ಅನ್ನು ಎಲ್ಲರಿಗು ಕಾಣುವಂತೆ ಇಡಲು PINNED - ರೆಕಾರ್ಡ್ಸ್ ಪುಟಗಳ ಚಿತ್ರ ಇಲ್ಲಿ ನೀಡಿದ್ದೀನಿ.




SMULE ನ ಇತರ ಉಪಯೋಗ-ಗಳೆಂದರೆ, ನಾವು ಮನೆಯಲ್ಲೇ ಕೂತು ಪ್ರಖ್ಯಾತ ಸಂಗೀತಗಾರರ ಜೊತೆ ದನಿಗೂಡಿಸುವ ಒಂದು ಸದವಕಾಶ. ನಾನು ಕಳಿಸಿರುವ INVITES ಗೆ ವಿದುಷಿ ಸಂಗೀತ ಕಟ್ಟಿ ಕುಲಕರ್ಣಿ, ಸುನೀತ ಅನಂತಸ್ವಾಮಿ, ನಂದಿನಿ ಗುಜ್ಜಾರ್ ಹಾಗು "ಮಗಳು ಜಾನಕಿ" ಧಾರಾವಾಹಿಯ "ಚಂಚಲ" ಐಶ್ವರ್ಯ ರಂಗರಾಜನ್ ಅವರುಗಳು ದನಿ ಗೂಡಿಸುವ ಸದವಕಾಶ ದೊರಕಿತು.

ಇದಲ್ಲದೆ ಹತ್ತು ಹಲವಾರು ತುಂಬಾ ಒಳ್ಳೆಯ ಪ್ರತಿಭೆಗಳ ಪರಿಚಯ ಹಾಗು ಅವರ ಜೊತೆ ಹಾಡುವ ಅವಕಾಶ ಒದಗಿ ಬಂತು. SMULE ನಲ್ಲಿ ತಮಗೆ ಇಷ್ಟವಾದ ಯಾವ ಹಾಡನ್ನು ಯಾರು ಬೇಕಾದರು ಹಾಡಬಹುದು. ಗಂಡಸರು ಎಸ್ ಜಾನಕಿ, ಲತಾ ಮಂಗೇಶ್ಕರ್ ಹಾಡಿರುವ ಹಾಡುಗಳನ್ನ ಹಾಡಬಹುದು, ಹೆಂಗಸರು ಪಿ ಬಿ ಶ್ರೀನಿವಾಸ್, ಮಹಮದ್ ರಫಿ ಹಾಡುಗಳನ್ನು INVITE ಆಗಿ ಕಳಿಸಬಹುದು. ಎಲ್ಲಕ್ಕಿಂತ ಮಿಗಿಲಾಗಿ ಕೆಲವು ಒಳ್ಳೆಯ ಸ್ನೇಹಿತರನ್ನು ಈ SMULE ನೀಡುತ್ತದೆ. ಒಂದು ವರ್ಷದಲ್ಲಿ ನಮ್ಮ ಭಾರತ, ಇಂಗ್ಲೆಂಡ್, ದುಬೈ, ಶಾರ್ಜ, ಆಸ್ಟ್ರೇಲಿಯ, ಅಮೇರಿಕ ದೇಶಗಳಲ್ಲಿ ಸುಮಾರು ೩೦-೪೦ ಒಳ್ಳೆಯ ಸ್ನೇಹಿತರಾಗಿದ್ದಾರೆ. ಹಾಡುವುದೊಂದೇ ನಮ್ಮ ಈ ಎಲ್ಲಾ ಸ್ನೇಹಿತರಲ್ಲಿ ಇರುವ ಸಮಾನ ಆಸಕ್ತಿ. ಪ್ರತಿ ದಿನ ನಾನು ಈ ಎಲ್ಲ ಸ್ನೇಹಿತರಿಗೂ ಹೇಳುವುದು ಒಂದೇ. KEEP SMULING, KEEP SMILING,KEEP SHINING !!! ■

**ಛಾಯಾಚಿತ್ರ ಕೃಪೆ: ಲೇಖಕರು, ಅಂತರ್ಜಾಲ**

ಅತಿಥಿ ಅಂಕಣ

# ಕುವೆಂಪು ಮತ್ತು ವೈಚಾರಿಕತೆ



*ಗೀತಾಂಜಲಿ ಪ್ರಸನ್ನಕುಮಾರ್.*
*ಶಿವಮೊಗ್ಗ,*
*ಕರ್ನಾಟಕ*

**"ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು? ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು? ನಿನ್ನೆದೆಯ ದನಿಯೇ ಋಷಿ ! ಮನು ನಿನಗೆ ನೀನು"**

ಮೇರು ಕವಿ, ರಸಋಷಿ. ಜಗದ ಕವಿ, ಯುಗದ ಕವಿ, ಶ್ರೀ ಕುವೆಂಪುರವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಅದ್ವಿತೀಯತೆ-ಯನ್ನು ಸಾಧಿಸಿದವರು. ಶ್ರೀ ರಾಮಾಯಣ ದರ್ಶನಂ, ಬೃಹತ್ ಕಾದಂಬರಿಗಳಾದ ಮಲೆಗಳಲ್ಲಿ ಮದುಮಗಳು, ಕಾನೂರು ಸುಬ್ಬಮ್ಮ ಹೆಗ್ಗಡತಿ, ಕಾವ್ಯ ಸಂಕಲನಗಳು, ನಾಟಕಗಳು, ಸಾಹಿತ್ಯ ಲೇಖನಗಳು ಮತ್ತು ಭಾಷಣಗಳಲ್ಲಿ ವೈಚಾರಿಕತೆಯನ್ನು ಮತ್ತು ವೈಜ್ಞಾನಿಕತೆಯನ್ನು ಪ್ರತಿಪಾದಿಸಿದವರು. ಈ ಲೇಖನದಲ್ಲಿ ನನ್ನ ಓದಿನ ಮಿತಿಯಲ್ಲಿ ನನ್ನ ಅಲ್ಪಮತಿಗೆ ಹೊಳೆದದ್ದನ್ನು, ಅರಗಿಸಿಕೊಂಡಿದ್ದನ್ನು ತಮ್ಮ ಮುಂದಿಡುತ್ತಿದ್ದೇನೆ.

ಕುವೆಂಪುರವರು ಹೇಳುತ್ತಾರೆ,

**"ನೀನೇರಬಲ್ಲೆಯಾ ನಾನೇರುವೆತ್ತರಕೆ?**
**ನೀ ಹಾರಬಲ್ಲೆಯಾ ನಾ ಹಾರುವಗಲಕ್ಕೆ?**
**ನೀ ಮುಳುಗಬಲ್ಲೆಯಾ ನಾ ಮುಳುಗುವಾಳಕ್ಕೆ ?**
**ಇಲ್ಲ? ನಡಿ ದೂರ ಸರಿ ! ಹೌದು !**
**ಬಾ ಹತ್ತಿರಕೆ!"**

ಕುವೆಂಪು ಕೃತಿಗಳ ಆಳ ವೈಶಾಲ್ಯತೆಯನ್ನು ಅರಿಯಬೇಕಾದರೆ ಅದಕ್ಕೊಂದು ತಪಸ್ಸು ಬೇಕು. ಆ ತಪಸ್ಸಿಗೆ ಈ ಲೇಖನದ ಸಿದ್ಧತೆ ನಾಂದಿಯಾಗಲಿ ಎಂದು ಆಶಿಸುತ್ತಾ ಈ ಪುಟ್ಟ ಲೇಖನವನ್ನು ಪ್ರಸ್ತುತ ಪಡಿಸುತ್ತಿದ್ದೇನೆ.

ಕವಿ ಕುವೆಂಪು ಮಲೆನಾಡಿನ ಅಪ್ಪಟ ಪ್ರತಿಭೆ. ಮಲೆನಾಡಿನ ಕಾಡಿನ ಸೌಂದರ್ಯ ರಾಶಿಯ ಜೊತೆಗೆ ಅಲ್ಲಿದ್ದ ಮೌಢ್ಯ, ಪುರೋಹಿತಶಾಹಿತ್ವ, ಕಂದಾಚಾರಗಳನ್ನು ನೋಡುತ್ತಾ ಬೆಳೆದವರು.

**ಕುವೆಂಪು ಮತ್ತು ವೈಚಾರಿಕತೆ**

ತಮ್ಮ ಕೃತಿ ನೆನಪಿನ ದೋಣಿಯಲ್ಲಿ ಅದನ್ನು ಅವರು ಸವಿಸ್ತಾರವಾಗಿ ವರ್ಣಿಸಿದ್ದಾರೆ. ಅಂತಹ ಮೌಢ್ಯದ ಪರಿಸರದಲ್ಲೂ ಹೊಸಮನೆ ಮಂಜಪ್ಪಗೌಡರು, ದೇವಂಗಿ ರಾಮಣ್ಣ ಗೌಡರು, ಮೊನೆಸ್ ಮೇಷ್ಟ್ರು, ವ್ಯಾಸರಾಯರು ತಮ್ಮ - ಛಾಪನ್ನೊತ್ತುತ್ತಾರೆ. ಹೊಸಮನೆ ಮಂಜಪ್ಪ-ಗೌಡರು ಒಮ್ಮೆ ಬಾಲಕ ಕುವೆಂಪುವಿಗೆ ಲಾಂಗ್ ಫೆಲೋ ಕವಿಯ "A psalm of life" ಕವಿತೆಯನ್ನು ಅರ್ಥ ಸಹಿತ ವಿವರಿಸುತ್ತಾರೆ. ಕುವೆಂಪುರವರ ಮಾತಿನಲ್ಲೇ ಹೇಳುವುದಾದರೆ, "ಆಲಿಸುತ್ತಾ ಆಲಿಸುತ್ತಾ ನನ್ನ ಜೀವ ಜ್ವಾಲಾಮಯವಾಯ್ತು, ನನ್ನ ಅಂತಶ್ಚೇತನ ಕ್ಕೊಂದು ಮೊದಲನೆ ಉಪನಯನವಾಯ್ತು! ಚೈತನ್ಯ ಕಣ್ಣು ಬಿಟ್ಟಿತು. ಎಚ್ಚರ ಗೊಂಡಿತು" ಎಂಬುದು.

ಬಾಲಕ ಕುವೆಂಪುರವರಲ್ಲಿ ವೈಚಾರಿಕತೆ ಪ್ರಚೋದಿಸಿದ ಇನ್ನೊಬ್ಬ ಮಹನೀಯರು ಶ್ರೀಯುತ ದೇವಂಗಿ ರಾಮಣ್ಣಗೌಡರು. 'ಬ್ರಾಹ್ಮಣರ ಮತ ಮೌಢ್ಯದ ಉಸುಬಿನಲ್ಲಿ ಸಿಕ್ಕು' ತಮ್ಮತನವನ್ನೆಲ್ಲಾ ಪುರೋಹಿತ ಹಾರುವರ ಕಾಲಕೆಳಗೆ ಸಮರ್ಪಿಸಿದ್ದ ಗೌಡರುಗಳಂತೆ ಇರಬಾರದೆಂದು ಕುವೆಂಪು ಚೇತನ ಅರಿತುಕೊಂಡಿತು.

ತೀರ್ಥಹಳ್ಳಿಯ ಶಾಲೆಯಲ್ಲಿ ಮೇಷ್ಟ್ರು ರಾಮರಾಯರ ಅಣತಿಯಂತೆ, ತರಗತಿಗೆ ಹೋಗುವಾಗ ಹುಡುಗರೆಲ್ಲರೂ ಅವರವರ ಜಾತಿಸೂಚಕವಾದ ತಿಲಕವನ್ನು ಹಣೆಯಲ್ಲಿಟ್ಟು ಹೋಗಬೇಕು ಎನ್ನುವ ನಿಯಮವಿತ್ತು. ಕುವೆಂಪು ತಿಲಕವಿಡಲು ಮರೆತಾಗ ಇನ್ನಾರದ್ದೋ ಹಣೆಗೆ ಹಣೆ ಒತ್ತಿ ತಿಲಕವನ್ನು ಹಚ್ಚಿಕೊಂಡು ಶಿಕ್ಷೆಯಿಂದ ಪಾರಾಗುತ್ತಿದ್ದರಂತೆ. ಯಾರೂ ಸಿಗದಿದ್ದಾಗ ಬ್ರಾಹ್ಮಣ ಹುಡುಗನೊಬ್ಬನಿಗೆ ಬೇಡಿಕೆ ಇಟ್ಟರಂತೆ. ಆತ ಕೇವಲ ತಿರಸ್ಕರಿಸದೆ 'ಶೂದ್ರ , ಮುಠ್ಠಾಳ' ಎಂದೆಲ್ಲಾ ಬೈದನಂತೆ. ಇವರಿಗೆ ಸಿಟ್ಟು ಏರಿ ನಿನ್ನ ಮೇಲೆ ಉಗುಳುತ್ತೇನೆ ಎಂದರಂತೆ. ಆ ಹುಡುಗ ಉಗುಳಿಯೇ ಬಿಟ್ಟ ಎಂದು ಹೆಡ್ ಮಾಸ್ತರಿಗೆ ದೂರು ಕೊಟ್ಟನಂತೆ. ಬೆತ್ತದಿಂದ ಕುವೆಂಪುರವರಿಗೆ ಏಟು ಕೊಟ್ಟು ಕೇಡಿ ರಿಜಿಸ್ಟರ್ ನಲ್ಲಿ ಇವರ ಹೆಸರು ನಮೂದಿಸಿದರಂತೆ.

**(ಮುಂದಿನ ಪುಟಕ್ಕೆ)**

## ಕುವೆಂಪು ಮತ್ತು ವೈಚಾರಿಕತೆ (ಮುಂದುವರೆದುದು)

ಈ ಕಾಲಕ್ಕೆ ಯಕಃಶ್ಚಿತ್ ಎಂದುಕೊಳ್ಳಬಹುದಾದ ವಿಚಾರ ಆ ಕಾಲಕ್ಕೆ ಅವಮಾನ ಎಂದೆನಿಸಿತ್ತು. ಅದು ಅವರ ವೈಚಾರಿಕ ದೃಷ್ಟಿಗೆ ನಾಂದಿಯಾಯಿತು.

**"ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು**
**ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?**
**ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?**
**ನಿನ್ನೆದೆಯ ದನಿಯೇ ಋಷಿ ! ಮನು ನಿನಗೆ ನೀನು**
**ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ**
**ದಡದಲ್ಲಿ ಮೀಯುತ್ತ ನಿಂತಿರುವ ನಾನು**
**ಮುಟ್ಟಿದರೆ ಬ್ರಹ್ಮತ್ವ ಕೆಟ್ಟು ಹೋಗುವುದೆಂದು**
**ಸುಮ್ಮನಿದ್ದರೆ ಶಾಸ್ತ್ರ ಸಮ್ಮತವದೇನು?"** (ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ)

ಕವಿ ಕುವೆಂಪುರವರು ಈ ಕವನದಲ್ಲಿ ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ, ನಮ್ಮ ಹೃದಯವೆ ನಮಗೆ ಶ್ರೀ ಧರ್ಮಸೂತ್ರ ಎಂದು ಹೇಳಿದ್ದಾರೆ. ಪೌರೋಹಿತಶಾಹಿಯ ಭದ್ರ ಬುನಾದಿಯಾದ ಮನುಶಾಸ್ತ್ರದ ಬುನಾದಿಯನ್ನು ಅಲ್ಲಾಡಿಸುವ ವೈಚಾರಿಕತೆ-ಯನ್ನು ತಮ್ಮದೊಂದು ಕವಿತೆಯಲ್ಲಿ ಕುವೆಂಪುರವರು ನಿರ್ಭಯವಾಗಿ ಸಾರಿದರು.

**"ಯಾವ ಮತದವನಲ್ಲ**
**ಎಲ್ಲ ಮತದವನು;**
**ಯಾವ ಪಂಥವು ಇಲ್ಲ**
**ಬಹು ಪಂಥದವನು ;**
**ಎಲ್ಲ ಬಿಡಲೂ ಬಲ್ಲೆ**
**ಎಲ್ಲ ಹಿಡಿಯಲು ಬಲ್ಲೆ"**

ಈ ಕವಿತೆ ಪ್ರಾರಂಭದ ದಿನಗಳದ್ದು. ಅನಂತರ ಅವರ ಜೀವನದ ದೃಷ್ಟಿ ವೃದ್ಧಿಯಾಗಿ ವಿಶ್ವಮಾನವ ಗೀತೆಯಲ್ಲಿ ಮೂಡಿಬಂದಿತು.

**ಓ ನನ್ನ ಚೇತನ ಆಗು ನೀ ಅನಿಕೇತನ**

**ನೂರು ಮತದ ಹೊಟ್ಟ ತೂರಿ ಎಲ್ಲ ತತ್ವದೆಲ್ಲೆ ಮೀರಿ**
**ನಿರ್ದಿಗಂತವಾಗಿ ಏರಿ ...**

ಈ ಕವಿತೆಯ ಬಗ್ಗೆ ಸಂದರ್ಶನವೊಂದರಲ್ಲಿ ಕವಿ ಕುವೆಂಪು ಹೀಗೆ ಹೇಳಿದ್ದಾರೆ.

"ನಾನು ಮತಗಳನ್ನು ಹಳಿಯುತ್ತಿದ್ದೇನೆಂದು ತಿಳಿಯಬೇಡಿ. ಯಾವುದನ್ನೂ ಬಿಡಬೇಡಿ. ಪರಮಹಂಸರ ಹಾಗೆ ಅವುಗಳಲ್ಲಿರುವ ಹೊಟ್ಟನ್ನು ತೂರಿ ಸಾರವನ್ನು ಗ್ರಹಿಸಿ, ಎಲ್ಲ ತತ್ವಗಳನ್ನು ಅಧ್ಯಯನ ಮಾಡಿ , ಆದರೆ ಅವುಗಳನ್ನು ಮೀರಿ ನಿಲ್ಲಿ. ಆದ್ದರಿಂದಲೇ ಶ್ರೀ ರಾಮಕೃಷ್ಣರು ಸರ್ವಧರ್ಮ ಸಮನ್ವಯಾಚಾರ್ಯರಾದರು".

'ತರುಣರಿರ ಎದ್ದೇಳಿ' ಕವನದಲ್ಲಿ

**"ಹಳೆಮತದ ಕೊಳೆಯಿಲ್ಲ ಹೊಸಮತಿಯ ಹೊಳೆಯಲ್ಲಿ**
**ಕೊಚ್ಚಿ ಹೋಗಲಿ ಬರಲಿ ವಿಜ್ಞಾನ ಬುದ್ಧಿ."**

ಹಾಗೆಯೇ

**"ಗುಡಿಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ**
**ಬಡತನವ ಬುಡಮಟ್ಟ ಕೀಳ ಬನ್ನಿ**
**ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ**
**ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ**
**ಓ ಬನ್ನಿ ಸೋದರರೆ ಬೇಗ ಬನ್ನಿ.**
**ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ**
**ಮತಿಯಿಂದ ದುಡಿಯಿರೈ ಲೋಕ ಹಿತಕೆ**
**ಆ ಮತದ ಈ ಮತದ ಹಳೆ ಮತದ ಸಹವಾಸ**
**ಸಾಕಿನ್ನು ಸೇರಿರೈ ಮನುಜ ಮತಕೆ**
**ಓ ಬನ್ನಿ ಸೋದರರೆ ವಿಶ್ವಪಥಕೆ"**

ಕುವೆಂಪುರವರ ಮಾತಿನಲ್ಲಿ ಹೇಳುವುದಾದರೆ ಪ್ರತಿಯೊಂದು ಮತದ ಕೇಂದ್ರದಲ್ಲಿಯೂ ನಿತ್ಯ - ಸತ್ಯ ಹುದುಗಿದೆ. ಅನಿತ್ಯಾಂಶಗಳಿಂದ ಅದನ್ನು ಬೇರೆ ಮಾಡುವುದೇ ಸಾಹಸದ ಕಾರ್ಯ. ಕುವೆಂಪುರವರ ಸಮಗ್ರ ಕಾವ್ಯಕ್ಕೆ ಮುನ್ನುಡಿ ಬರೆಯುತ್ತಾ ರಾಷ್ಟ್ರಕವಿ ಶ್ರೀ ಜಿ.ಎಸ್. ಶಿವರುದ್ರಪ್ಪನವರು ಹೀಗೆ ಹೇಳುತ್ತಾರೆ. - ಕುವೆಂಪು ಅವರ ವೈಚಾರಿಕತೆಗೆ ಇರುವ ಇನ್ನೊಂದು ಮುಖ್ಯ ಲಕ್ಷಣ ವೈಜ್ಞಾನಿಕ ದೃಷ್ಟಿ. ಆಧುನಿಕ ಯುಗದ ಎಲ್ಲ ಸಾಮಾಜಿಕ ಅನಿಷ್ಟಗಳ ಚಿಕಿತ್ಸೆಗೆ ಅಗತ್ಯವಾದ ವೈಜ್ಞಾನಿಕ ದೃಷ್ಟಿ ಹಾಗೂ ವೈಜ್ಞಾನಿಕ ಮನೋಧರ್ಮ-ವೊಂದನ್ನು ಅತ್ಯಂತ ಏರುದನಿಯಲ್ಲಿ ಸಾರಿ ಹೇಳಿದವರು ಕುವೆಂಪು.

**(ಮುಂದಿನ ಪುಟಕ್ಕೆ)**

## ಅತಿಥಿ ಅಂಕಣ

### ಕುವೆಂಪು ಮತ್ತು ವೈಚಾರಿಕತೆ (ಮುಂದುವರೆದುದು)

ಕುವೆಂಪುರವರು ತಮ್ಮ ಆತ್ಮಶ್ರೀ ಗಾಗಿ ನಿರಂಕುಶಮತಿಗಳಾಗಿ ಎಂಬ ಲೇಖನದಲ್ಲಿ ಹೀಗೆ ಹೇಳುತ್ತಾರೆ. - "ಮತಿ ಮಾನವನ ಸರ್ವೋತ್ಕೃಷ್ಟ ಆಯುಧ. ಮತಿಯೇ ಕತ್ತಲಲ್ಲಿ ದಾರಿ ತೋರುವ ರತ್ನದ ದೀವಿಗೆ. ಮತಿಯ ದೆಸೆಯಿಂದಲೇ ಪ್ರಾಣಿ ಮಾತ್ರವಾಗುತ್ತಿದ್ದ ನರಜೀವಿ ಮನುಷ್ಯತ್ವಕ್ಕೆ ಏರಿದ್ದಾನೆ. ಮತಿ ನಿಮ್ಮ ಮೆಚ್ಚಿನ ರತ್ನ ದೀವಿಗೆಯಾಗಲಿ. ಸರ್ವ ಮತಗಳಿಗಿಂತಲೂ ಶುದ್ಧ ಹೃದಯದ ಮತ್ತು ಸನ್ಮತಿಯ ಮತವೇ ಮಹೋನ್ನತವಾದುದು. ನಂಬುಗೆ ಪುರಾತನವಾದ ಮಾತ್ರಕ್ಕೆ ಸತ್ಯವಾದುದೆಂದು ಭಾವಿಸಬೇಡಿ. ವಿಜ್ಞಾನ ಪ್ರಪಂಚದಲ್ಲಿ ಹೊಸದಾಗಿ ಕಂಡುಹಿಡಿದ ಸತ್ಯಗಳು ಹಳೆಯ ಅರ್ಧ ಸತ್ಯಗಳಿಗಿಂತಲೂ ಮಾನ್ಯವಾಗುವುದಾದರೆ ಧರ್ಮ ಪ್ರಪಂಚದಲ್ಲೇಕೆ ಹಾಗಾಗಬಾರದು? ನಿರಂಕುಶ ಮತಿ-ಗಳಾಗಬೇಕಾದರೆ ದಾಸ್ಯ ಬುದ್ಧಿ ತೊಲಗಬೇಕು. ದರ್ಶನ ದ್ರಷ್ಟಾರರಾಗಬೇಕು. ಧ್ಯಾನಮಯ ನಿರ್ಮಲ ಜೀವನದಿಂದ ಅಂತಹ ಓಜಸ್ಸು ಲಭಿಸುತ್ತದೆ".

ಹಾಗೆಯೇ ಮಲೆನಾಡ ಯುವಕರಿಗೆ ಮಾಡಿರುವ ಭಾಷಣದಲ್ಲಿ ಮೌಢ್ಯತೆ , ಆರೋಗ್ಯ, ಮದ್ಯಪಾನ , ಬಾಲ್ಯವಿವಾಹದ ಬಗ್ಗೆ ಕುವೆಂಪು ಎಚ್ಚರಿಸಿದ್ದಾರೆ. ಮಲೆನಾಡಿನಲ್ಲಿ ವ್ಯಾಪಕವಾಗಿದ್ದ ಭೂತ, ದೆವ್ವ, ಪಂಜ್ರೊಳ್ಳಿ, ರಣ, ಜಕ್ಕಿಣಿ, ಅಂತಹ ಅಸಂಖ್ಯ ಅಂತರ ಬೆಂತರಗಳ ಪೂಜೆಗಾಗಿ ಸಾಲದಲ್ಲಿ ಬೀಳುವವರಿಗೆ ಹೀಗೆಂದು ಕಿವಿಮಾತು ಹೇಳುತ್ತಾರೆ.

ಭಗವಾನ್ ಶ್ರೀ ಕೃಷ್ಣನ ಶ್ಲೋಕವೊಂದನ್ನು ಉಲ್ಲೇಖಿಸುತ್ತಾರೆ.

**"ಯಾಂತಿ ದೇವವ್ರತಾ ದೇವಾನ್ ಪಿತೃನ್ ಯಾಂತಿ ಪಿತೃವ್ರತಾಃ ಭೂತಾನಿಯಾಂತಿ ಭೂತೇಜ್ಯಾ ಯಾಂತಿ ಮದ್ಯಾಜಿನೋಪಿ ಮಾಮ್ ".**

ದೇವತೆಗಳನ್ನು ಪೂಜಿಸುವವರಿಗೆ ದೇವಲೋಕ ಲಭಿಸುತ್ತದೆ. ಪಿತೃಪೂಜೆ ಮಾಡಿದವರು ಪಿತೃಲೋಕ ಹೊಂದುತ್ತಾರೆ. ಭೂತ -ಪ್ರೇತ ಪೂಜಕರು ಆ ಭೂತ-ಪ್ರೇತ ಲೋಕ ಹೊಂದುತ್ತಾರೆ. ನನ್ನ ಪೂಜಕರು ನನ್ನಲ್ಲಿಗೇ ಬರುತ್ತಾರೆ.

ವಿಚಾರವಾದಕ್ಕೂ ನಾಸ್ತಿಕವಾದಕ್ಕೂ ವ್ಯತ್ಯಾಸವಿದೆ ಎಂದು ಕುವೆಂಪು ತಮ್ಮ ಲೇಖನಗಳಲ್ಲಿ ಹೇಳಿದ್ದಾರೆ.ನಾವು ಜನಗಳಿಗೆ ವಿಚಾರವಾದ ಬೋಧಿಸುವಾಗ ದೇವರ ಕಲ್ಪನೆಗಾಗಲೀ, ಧರ್ಮದ ಕಲ್ಪನೆಗಾಗಲೀ ವಿರುದ್ಧವಾಗಿ ಹೋದರೆ ನಮ್ಮ - ವಿಚಾರವಾದ ಸೋತು ಹೋಗುತ್ತದೆ.

ಹಾಗೆಯೇ **ಋಷಿವಾಣಿ**ಯ ಮುನ್ನುಡಿಯಲ್ಲಿ ಕುವೆಂಪುರವರು ಹೀಗೆ ಬರೆಯುತ್ತಾರೆ. "ವೇದಗಳು ಭಾವ ಮತ್ತು ಕಲ್ಪನಾ ಪ್ರಧಾನವಾಗಿರುವಂತೆ, ವೇದಾಂತವಾದ ಉಪನಿಷತ್ತುಗಳು ಆಲೋಚನಾ ಪ್ರಧಾನವಾಗಿದೆ. ಉಪನಿಷತ್ತುಗಳಲ್ಲಿ ಇರುವುದೇ ಪರಮಸತ್ಯ ಮತ್ತು ಸತ್ಯದ ಪರಮಾವಧಿ ಎಂದು ಭಾವಿಸಬಾರದು. ಬೇಡದ್ದನ್ನು ಗುಡಿಸಿ ರತ್ನಗಳನ್ನು ಉಳಿಸಿಕೊಳ್ಳಬೇಕು" ಎಂದು ಕರೆ ನೀಡಿದ್ದಾರೆ. ಹಿಂದೂ ಸಂಸ್ಕೃತಿಯನ್ನು ಕೆಲವು ಉಗ್ರ ವಿಚಾರವಾದಿಗಳಂತೆ ಸಂಪೂರ್ಣವಾಗಿ ನಿರಾಕರಿಸುವುದಕ್ಕೆ ಬದಲು ಅದರೊಳಗಿರುವ ಜೀವವಿರೋಧಿ, ಸಮಾನತಾ ವಿರೋಧಿ ಸಂಸ್ಕೃತಿಗಳನ್ನು ನಿರಾಕರಿಸುತ್ತಾ ಮನುಷ್ಯನ ಚೈತನ್ಯೋತ್ಕರ್ಷಕ್ಕೆ ಅಗತ್ಯವಾದ ಮೌಲ್ಯಗಳನ್ನು ಸ್ವೀಕರಿಸುವುದು ಉತ್ತಮ ಮಾರ್ಗ ಎಂಬುದು ಅವರ ಆಶಯ.

'ಶ್ರೀ ರಾಮಾಯಣದರ್ಶನಂ' ನಲ್ಲಿ ಸುರಾಂಗನಾ ಮೂರ್ತಿ-ಯಾಗಿ ಬದಲಾಗುವ ಮಂಥರೆ, ತಪಸ್ವಿನಿ ಊರ್ಮಿಳೆ, ವಾಲಿ-ಸುಗ್ರೀವರ ಕದನದಲ್ಲಿ ವಾಲಿಯೆದುರು ತಲೆ ಬಾಗಿದ ಶ್ರೀ ರಾಮನ ವ್ಯಕ್ತಿತ್ವ, ಸೀತಾ ಅಗ್ನಿ ಪ್ರವೇಶದಲ್ಲಿ ತಾನೂ ಪಾಲ್ಗೊಂಡ ರಾಮ, ಸೀತೆಗೆ ರಾಮನನ್ನು ಕಾಣಿಕೆಯಾಗಿ ಒಪ್ಪಿಸುವ ರಾವಣನ ಮನಃಪರಿವರ್ತನೆ ಹೀಗೆ ರಾಮಾಯಣ-ವನ್ನು ಹೊಸ ಕಾಣ್ಕೆಯೊಂದಿಗೆ ನೋಡಿದ ಮೇರು ಕೃತಿ.

**ವಾಲಿ ವಧೆಯ ಸಂದರ್ಭದಲ್ಲಿ ರಾಮ ವಾಲಿಗೆ -**

**"ಮನ್ನಿಸೆನ್ನ ಮಹಾ ವೀರ , ತಪ್ಪಿದೆನಯ್ಯೋ, ಬ್ರಹ್ಮವರದಾ ಬಲೆಗೆ ಸಿಲ್ಕಿ| ನಿನಗಾವರಮೆ ಶಾಸನವಾದುದು | ಕೀರ್ತಿ ಮಸುಳಿಸುವೋಲೆನ್ನ ನಡುಗಿಸಿತೋ ! ಮರೆವೊಕ್ಕೆನಾ ಮರಕೆ ! ಮಾಡಿದ ತಪ್ಪನೊಪ್ಪಿಕೊಳ್ವುದೆ ಲೌಕಿಕದ ಬೀರಕ್ಕೆ ಸಲ್ಲಕ್ಷಣಂ|"**

ಎಂದು ತಪ್ಪೊಪ್ಪಿಕೊಳ್ಳುತ್ತಾನೆ.

ಹೀಗೆ ಅವರ ವೈಚಾರಿಕತೆ ಪರಂಪರಾಗತ ಮೂಢನಂಬಿಕೆ-ಗಳನ್ನು ತೊಡೆದು ಹಾಕುತ್ತದೆ.

**ಸೀತೆಯನ್ನು ಅಗ್ನಿಪರೀಕ್ಷೆಗೆ ಗುರಿಪಡಿಸಿದ ರಾಮ -**

**"ಹದಿಬದೆಯನಗ್ನಿವುಗಿಸುವದಿರಲಿ,**
**ತನ್ನಂ ಪರೀಕ್ಷಿಸುವರಾರೋ? ತಾನೇಮ್ ಪೊರತೋ**
**ದುರಿತ ದೋಷಕೆ? ಎನುತ ಶಂಕಿಸಿದೆನಾ".**

**(ಮುಂದಿನ ಪುಟಕ್ಕೆ)**

## ಕುವೆಂಪು ಮತ್ತು ವೈಚಾರಿಕತೆ (ಮುಂದುವರೆದುದು)

ಸೀತೆಯೇನೋ ಅಗ್ನಿಪರೀಕ್ಷೆಗೆ ಗುರಿಯಾಗುತ್ತಾಳೆ. ತನ್ನನ್ನು ಪರೀಕ್ಷಿಸುವವರು ಯಾರು ಎಂದು ಯೋಚಿಸುತ್ತಾನೆ ಕುವೆಂಪು ಸೃಷ್ಟಿಸಿದ ಶ್ರೀ ರಾಮ.

ಜಲಗಾರ, ಶೂದ್ರ ತಪಸ್ವಿ, ಮತ್ತು ಬೆರಳ್ ಗೆ ಕೊರಳ್ ಈ ಮೂರು ನಾಟಕಗಳಲ್ಲಿ ತಳಸಮುದಾಯದ ಧ್ವನಿಯಾಗಿ ಕುವೆಂಪು ಹೊರಹೊಮ್ಮಿದ್ದಾರೆ.

**ಜಲಗಾರ ನಾಟಕದಲ್ಲಿ** - ಜಲಗಾರ - "ಶಿವಗುಡಿಯ ಶಿವನು ಜೋಯಿಸರ ಶಿವನಂತೆ. ನನ್ನ ಶಿವನೇ ಮಣ್ಣಿನಲ್ಲಿಹನು. ನಿನ್ನ ದೇಗುಲದೆಡೆಗೆ ಹೋದೆನ್ನ ಕಂದನಂ ಬೈದಿರಿದು ನೂಕಿದರು. ಶಿವಗುಡಿಯ ಶಿವನು ಜೋಯಿಸರ ಶಿವನಂತೆ. ನನ್ನೆದೆಯೆ ದೇಗುಲ ನನ್ನೊಲ್ಮೆ ಅದೇ ಪೂಜೆ". ಈ ನಾಟಕದಲ್ಲಿ ವರ್ಣಾಶ್ರಮ ವ್ಯವಸ್ಥೆಯನ್ನು ತೀಕ್ಷ್ಣವಾಗಿ ವಿರೋಧಿಸುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

**ಬೆರಳ್ ಗೆ ಕೊರಳ್ ನಾಟಕದಲ್ಲಿ**

ಈ ನಾಟಕದಲ್ಲೂ ಕುವೆಂಪುರವರು ಪುರಾಣ ಪ್ರತಿಮೆಯನ್ನು ಹಾಗೆ ಉಳಿಸಿಕೊಂಡಿದ್ದಾರೆ. ಆದರೆ ಏಕಲವ್ಯ, ದ್ರೋಣಾಚಾರ್ಯರು, ಅರ್ಜುನ ಇವರಲ್ಲದೆ, ಏಕಲವ್ಯನ ಅಬ್ಬೆಯ ಪಾತ್ರವನ್ನು ಸೃಷ್ಟಿಸಿದ್ದಾರೆ.

ಅರ್ಜುನನ ಸಂಸ್ಕೃತಿಯಲ್ಲಿ ಅಧಿಕಾರ, ಅಹಂ, ಸ್ಪರ್ಧಾ ಮನೋಭಾವ, ನಯವಂಚಕತನ ಕಾಣುತ್ತದೆ. ಏಕಲವ್ಯನ ಸಂಸ್ಕೃತಿಯಲ್ಲಿ ಮುಗ್ಧತೆ ಮತ್ತು ಶ್ರದ್ಧೆ ಗುರುಭಕ್ತಿ ಪ್ರಧಾನವಾಗಿ ಕಾಣುತ್ತದೆ. ಏಕಲವ್ಯನು ತನ್ನ ಅಪ್ಪನ ಬಳಿ ದ್ರೋಣಾಚಾರ್ಯರ ಬಳಿ ವಿದ್ಯೆ ಕಲಿಯಲು ಹೋಗುತ್ತೇನೆಂದು ಹೇಳಿದಾಗ

**ಅವರ್ ಪಾರ್ವರ್ ಬಿಯದರ್ಗೆ ಓವಜುಗೆಯಲ್ಕೆ ಒಪ್ಪರ್**
**ನಿನ್ನನ್ ಗಹಗಹಿಸಿ ನಕ್ಕು ನೂಕುವರ್**

ಈ ವಿದ್ಯೆ ಕಲಿಯಲು ಕೇವಲ ಮೇಲ್ವರ್ಗದವರು ಮಾತ್ರ ಉಚಿತರು ಎನ್ನುವುದನ್ನು ತೋರಿಸುತ್ತದೆ.

**ಅರ್ಜುನ : ನಾವಾರೆಂದಿರ್ಪೆ? ಆಳ್ವರ್ | ನೀನಾಳ್** ಎಂದು ಏಕಲವ್ಯನಿಗೆ ಸಂಬೋಧಿಸುತ್ತಾನೆ.

ದ್ರೋಣನ ಆತ್ಮವಿಶ್ಲೇಷಣೆಯ ಚಿಂತನೆಯಲ್ಲಿ

**ಏನಹಂಕಾರಮೋ ಈ ಕ್ಷತ್ರಿಯರ ಮಕ್ಕಳ್ಗೆ|**
**ಪೆಸರ ಬಿಂಕಂ ರಕ್ತಪಂಕಂ**
**ಸೆಣಸುವಂಕಂ ಲೋಕಕಾತಂಕಂ**
**ಪೆಸರಂತೆ ಪೆಸರ್ ? ಕೆಸರ್ | ನೆತ್ತಿರ್ಗೆ ಸರ್|**

ಹೆಸರಿನ ಮೋಹವನ್ನು ಕುವೆಂಪುರವರು ಇಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ. ಏಕಲವ್ಯನ ಬೆರಳನ್ನು ದ್ರೋಣರು ಪಡೆಯುವುದು ಪೂರ್ವ ನಿಯೋಜಿತದಂತೆ. ಆದರೆ ಮಗನ
ಹೆಬ್ಬೆರಳನ್ನು ನೋಡಿದ ಅಬ್ಬೆ

**ಆರ್ ಕೊ ಬಲಿ ನನ್ನ ಕಂದನ ಬೆರಳ್ ಬಲಿಯಕ್ಕೆ ಆ ಪಾಪಿಯ ಕೊರಳ್**

ಎನ್ನುವುದು ತಾಯಿಯ ದುಃಖಭರಿತ ಕೋಪ. ಇಲ್ಲಿ ನೋವು ಪ್ರತಿಭಟನೆಯ ರೂಪ ಪಡೆಯುವುದು ಕ್ರಾಂತಿಕಾರಿಯಾದದ್ದು.

ಕುವೆಂಪುವಿನ ಸಂದರ್ಶನದ ಭಾಗವೊಂದನ್ನು ಉದ್ಧರಿಸಿ ಈ ಚಿಕ್ಕ ನುಡಿತೋರಣವನ್ನು ಮುಗಿಸುತ್ತಿದ್ದೇನೆ.

ಸರ್ವೋದಯವೇ ಸಕಲ ಸಾಧನೆಗಳ ಗುರಿಯಾಗಬೇಕು. ಪೂರ್ಣದೃಷ್ಟಿ ಮತ್ತು ಸಮನ್ವಯ ಭಾವದಿಂದ ಮೇಲು ಕೀಳುಗಳ ಬೇಧ ಹರಿಯುತ್ತದೆ. ಮನುಷ್ಯನನ್ನು ಮನುಷ್ಯನಿಂದ ಬೇರ್ಪಡಿಸುವ ಹತ್ತಾರು ಮತ ಬೇಡ. ವರ್ಣ, ಜಾತಿ, ವರ್ಗಗಳನ್ನು ಸೃಷ್ಟಿಸುವ ಮತ ಬೇಡ. ಆಧ್ಯಾತ್ಮ ಸಾಧನೆಯೊಂದೆ ಮಾನವನ ಗುರಿಯಾಗಬೇಕು. ಲೋಕದ ಎಲ್ಲಾ ಜಾಡ್ಯಗಳಿಗೂ ಮತೀಯ ರೂಪದ ವ್ಯವಸ್ಥೆಯೇ ಮೂಲವಾಗಿದೆ. ಚೇತನ ಅನಿಕೇತನವಾದಾಗ ಎಲ್ಲ ವ್ಯವಸ್ಥೆಗಳಿಂದ ಪಾರಾದಾಗ ಮತ ಮನುಜಮತವಾದಾಗ ಮನುಷ್ಯ ವಿಶ್ವಮಾನವನಾದಾಗ ಎಲ್ಲ ವೈಯುಕ್ತಿಕ ಸಾಂಸ್ಥಿಕ ವಿರಸ ವೈಷಮ್ಯಗಳು ತೊಲಗುತ್ತವೆ.

**ಎಲ್ಲರೂ ನಿರಂಕುಶ ಮತಿಗಳಾಗಲಿ ?**
**ಎಲ್ಲರೂ ಸ್ವತಂತ್ರ ಮತಿಗಳಾಗಲಿ ?**
**ಎಲ್ಲರೂ ಮುಕ್ತ ಮತಿಗಳಾಗಲಿ ?**
**ಓಂ ಶಾಂತಿ ಶಾಂತಿ ಶಾಂತಿಃ**

- ಆಕರ ಗ್ರಂಥಗಳು


ಕುವೆಂಪು ಸಮಗ್ರ ಸಾಹಿತ್ಯ ಮಾಲೆ , ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ) ಕುಪ್ಪಳ್ಳಿ

ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ ಸಾಮಜಿಕ ನಿಷ್ಠೆ , ನವಕರ್ನಾಟಕ ಪ್ರಕಾಶನ ■

ವನಿತೆಯ ಮನದಾಳ

# ಮನದಾಳಕ್ಕಿಳಿದ 'ವಿವೇಕ ವಾಣಿ'



*ಸರಿತಾ ನವಲಿ*

**“ ವಿವೇಕಾನಂದರು ನೀಡಿದ ಸಂದೇಶಗಳು ವ್ಯಕ್ತಿಯ ವ್ಯಕ್ತಿತ್ವವನ್ನು ವಿಕಸಿತಗೊಳಿಸಿ, ವಿವೇಕವನ್ನು ಜಾಗೃತಗೊಳಿಸುವಲ್ಲಿ ಮಹತ್ತರ ಪಾತ್ರವಹಿಸುತ್ತವೆ. ”**

ಸ್ವಾಮಿ ವಿವೇಕಾನಂದ ಈ ವಿಶ್ವ ಕಂಡ ಧೀಮಂತ ವ್ಯಕ್ತಿತ್ವ, ಆಧ್ಯಾತ್ಮ ಗುರು, ರಾಮಕೃಷ್ಣ ಪರಮಹಂಸರ ಶಿಷ್ಯ, ವಿಶ್ವದ ಎಲ್ಲೆಡೆ ಸಂಚರಿಸಿ ಜನರನ್ನು ಜಾಗೃತಗೊಳಿಸಿದವರು ಎಂಬುದು ನಮಗೆಲ್ಲರಿಗೂ ತಿಳಿದ ವಿಷಯ. ಬಾಲ್ಯದಿಂದಲೂ ಶಾಲಾ ಪಠ್ಯಪುಸ್ತಕಗಳಲ್ಲಿ, ಬಾಲ-ಭಾರತಿ ಕಥೆ ಪುಸ್ತಕಗಳಲ್ಲಿ 'ಬಾಲಕ ನರೇಂದ್ರ'ನ ಬಗ್ಗೆ ಓದುತ್ತ ಬೆಳೆಯುವ ನಾವು, ಸ್ವಾಮಿ ವಿವೇಕಾನಂದರ ಬಗ್ಗೆ ಹೆಚ್ಚು-ಹೆಚ್ಚು ಮಾಹಿತಿ ಪಡೆಯುತ್ತ ಹೋದಂತೆ ಅವರ ಜೀವನದಿಂದ ಪ್ರಭಾವಿತರಾಗುತ್ತೇವೆ. ನಾನು ವಿವೇಕಾನಂದರ ಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಲು ಹಲವು ಪುಸ್ತಕಗಳನ್ನು ಮತ್ತು ಕನ್ನಡದ ಕವಿಗಳು ಬರೆದ ಕವನಗಳನ್ನು ಓದಿದಾಗ, ಆ ಕವನಗಳ ಸಾಲುಗಳಲ್ಲಿ ಸ್ವಾಮಿ ವಿವೇಕಾನಂದರ ವ್ಯಕ್ತಿತ್ವವನ್ನು ವಿವರಿಸಿದ್ದು ಕಂಡು ಬಂದಿತ್ತು. ಸ್ವಾಮಿ ವಿವೇಕಾನಂದರೆಂದ ಕೂಡಲೇ ಕೇಸರಿ ನಿಲುವಂಗಿ ತೊಟ್ಟು, ಎದೆಗೆ ಕೈಕಟ್ಟಿ ನಿಂತ ಸಂತನ ಚಿತ್ರ ನಮ್ಮೆಲ್ಲರ ಮನದಲ್ಲಿ ಮೂಡುತ್ತದಲ್ಲವೇ? ಪ್ರೊ.ಎಂ.ವಿ.ಸೀತಾರಾಮಯ್ಯ -ರವರು ತಮ್ಮ ಕವನದಲ್ಲಿ ವಿವೇಕಾನಂದರ ಬಾಹ್ಯರೂಪವನ್ನು ಬಣ್ಣಿಸಿದ್ದಾರೆ.

**“ಆ ವಿಶಾಲ ಲಲಾಟ,**
**ಆ ತೀಕ್ಷ್ಣ ಕಣ್ ನೋಟ, ಬಿಗಿದ ತುಟಿ,**
**ಬಿಗಿದ ತಲೆಯ ರುಮಾಲು, ಬಿಗಿ ಹುಬ್ಬು;**
**ಬಿಗಿದ ಕೈಕಟ್ಟು, ಕಾವಿಯ ಅಂಗಿ, ನಡುಕಟ್ಟು-**
**ಬಿಗುವಿನಲಿ ಹುಗಿದಿಟ್ಟ ಚೇತನದ ಕಡಲೊಡಲು”**

ಎಂದು ವಿವರಿಸಿ ಮುಂದುವರೆಸುತ್ತ,

**“ಮೈ ತಳೆದು ಗರ್ಜಿಸುತ ಬಾ ಧೀರ ವೇದಾಂತ ಕೇಸರಿ! ಸಮರಯೋಗವ ಕಲಿಸೆ ಸಮನಾರು ನಿನಗೆ? ನೀನೇ ಸರಿ!”** ಎಂದು ಬರೆಯುತ್ತಾರೆ.

ವಿವೇಕಾನಂದರ ಬಗ್ಗೆ ಓದಿ, ತಿಳಿದುಕೊಳ್ಳಲು ಪ್ರಯತ್ನಿಸುವವನಿಗೆ ಈ ಸಾಲುಗಳು ಅದಷ್ಟು ಅರ್ಥಪೂರ್ಣ ಎನಿಸುತ್ತವೆ. ರಾಷ್ಟ್ರಕವಿ ಕುವೆಂಪು -ರವರು ತಮ್ಮ ಕವನದಲ್ಲಿ ವಿವೇಕಾನಂದರನ್ನು 'ಸಿಂಹ ಹೃದಯನೆ' ಎಂದಿದ್ದಾರೆ.

**“ಭರತಖಂಡದೊಳರಚುತಲೆಯುವ**
**ಮನುಜಕುರಿಗಳಿಗೆ, ಸಿಂಹಹೃದಯವನಿತ್ತು**
**ಗರ್ಜಿಸುವಂತೆ ನೀ ಮಾಡಿ,**
**ಕುರಿಯದೊಡ್ಡಿಯ ಮುರಿದು**
**ಸಿಂಹದ ಗುಹೆಯ ವಿರಚಿಸಿದೆ.**
**ಸಿಂಹ ಹೃದಯನೆ,**
**ಶ್ರೀ ವಿವೇಕಾನಂದ ಯೋಗೀಂದ್ರ!”**

ಕವನದಲ್ಲಿನ ಪ್ರತಿಯೊಂದು ಸಾಲುಗಳು ಓದುಗನಿಗೆ ವಿವೇಕಾನಂದರ ವ್ಯಕ್ತಿತ್ವದ ಅರಿವನ್ನು ಮೂಡಿಸುತ್ತವೆ. ಅವರ ಬಾಹ್ಯರೂಪ ಮತ್ತು ಆಂತರಿಕ ಶಕ್ತಿಯ ಬಗ್ಗೆ ತಿಳಿದುಕೊಂಡಾಗ, ನಮ್ಮ ಮೇಲೆ ಪ್ರಭಾವ ಬೀರುವುದು ಇವುಗಳಷ್ಟೇ ಅಲ್ಲ ಅವರು ನೀಡಿದ ಸಾವಿರಾರು ಸಂದೇಶಗಳೆಂದು ಮನವರಿಕೆಯಾಗುತ್ತದೆ.
'ವಿವೇಕವಾಣಿ'ಯು ಹೇಗೆ ನಮ್ಮೆಲ್ಲರ ಮೇಲೆ ಪ್ರಭಾವ ಬೀರಿದೆ ಎಂಬುದು ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪರವರ ಕವನದ ಸಾಲುಗಳಲ್ಲಿ ಕಂಡುಬರುತ್ತದೆ.

**“ನಿನ್ನ ವಾಣಿಯು ತಟ್ಟಿ, ಚಿಪ್ಪೊಡೆದು ಅದರಲ್ಲಿ ಹುದುಗಿದ್ದವರೆದ್ದೆದ್ದು ಹೊರ ಬಂದರು.**
**ಕ್ರಿಮಿ ಎಂದು ಮಲಗಿದ್ದವರೆದ್ದು ಕುಲಶೈಲದೊಲು ಮುಗಿಲೆಡೆಗೆ ಮುಡಿ ಎತ್ತಿ ನಿಂತುಕೊಳಲು,**
**ಏಳು ಕಡಲಿನ ತೆರೆಯು ತಾಳವನು ಹಾಕಿದವು,**
**ದಿಕ್ಕು ದೆಸೆ ಹಾಡಿದವು ಜಯಗಾಥವ!**
**ಪೂರ್ವ ಪಶ್ಚಿಮ ಎರಡು ಒಂದನ್ನೊಂದನ್ನಪ್ಪಿ ಕಂಡು ಕೊಂಡವು ದಿವ್ಯ ಹೃದಯಾರ್ಥವ!”**

(ಮುಂದಿನ ಪುಟಕ್ಕೆ)

**ಮನದಾಳಕ್ಕಿಳಿದ 'ವಿವೇಕ ವಾಣಿ' (ಮುಂದುವರೆದುದು)**

ಸ್ವಾಮಿ ವಿವೇಕಾನಂದರ ಸಂದೇಶಗಳೆಂದಾಕ್ಷಣ ನೆನಪಿಗೆ ಬರುವ ಸಾಲುಗಳೆಂದರೆ, "ಏಳಿ, ಎದ್ದೇಳಿ. ಗುರಿ ಮುಟ್ಟುವವರೆಗೆ ನಿಲ್ಲದಿರಿ".

ನಾವೆಲ್ಲರು ಶಾಲಾದಿನಗಳಿಂದಲೇ ಅವರ ಅದೆಷ್ಟೋ ಸಂದೇಶಗಳನ್ನು ಕೇಳುತ್ತ ಬೆಳೆಯುತ್ತೇವೆ. ಉಪನಿಷತ್ತಿನಲ್ಲಿ ಉಲ್ಲೇಖಿಸಿರುವ ಅನೇಕ ತತ್ವಗಳನ್ನು ಆಧರಿಸಿ ವಿವೇಕಾನಂದರು ನೀಡಿದ ಸಂದೇಶಗಳು ವ್ಯಕ್ತಿಯ ವ್ಯಕ್ತಿತ್ವವನ್ನು ವಿಕಸಿತಗೊಳಿಸಿ, ವಿವೇಕವನ್ನು ಜಾಗೃತ-ಗೊಳಿಸುವಲ್ಲಿ ಮಹತ್ತರ ಪಾತ್ರವಹಿಸುತ್ತವೆ. ನಮ್ಮೆಲ್ಲರ ಮೇಲೆ ಪ್ರಭಾವ ಬೀರುವ ಸ್ವಾಮಿ ವಿವೇಕಾನಂದರ ನೂರಾರು ಸಂದೇಶಗಳನ್ನು ಓದಿ, ಮನನ ಮಾಡಿಕೊಳ್ಳುವ ನನ್ನ ಪ್ರಯತ್ನ ಪ್ರಾರಂಭವಾಗಿದ್ದು ಪದವಿ ವಿದ್ಯಾರ್ಥಿ-ಯಾಗಿದ್ದಾಗ. ಕಾಲೇಜಿನಿಂದ ಏರ್ಪಡಿಸಿದ್ದ ಪ್ರವಾಸದಲ್ಲಿ ಕನ್ಯಾಕುಮಾರಿಗೆ ಹೋಗಿ 'ವಿವೇಕಾನಂದ ರಾಕ್ ಮೆಮೋರಿಯಲ್'ಗೆ ಭೇಟಿಕೊಟ್ಟು, ಅಲ್ಲಿ ಸ್ವಾಮಿ ವಿವೇಕಾನಂದರ ಜೀವನದ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದಾಗ ಅದೇನೋ ರೋಮಾಂಚನವಾಗಿತ್ತು. ಅಲ್ಲಿದ್ದ ಅಷ್ಟೂ ಸಮಯವನ್ನು ನಾನು ಮತ್ತು ನನ್ನ ಗೆಳತಿ ಪುಸ್ತಕ ಮಳಿಗೆಗಳಿಂದ ವಿವೇಕಾನಂದರ ಕೆಲವು ಪುಸ್ತಕಗಳನ್ನೂ, ಪೋಸ್ಟರ್ ಗಳನ್ನು, ಫೋಟೋಗಳನ್ನು ಖರೀದಿಸುತ್ತ ಕಳೆದಿದ್ದೆವು. ಅವುಗಳಲ್ಲಿ 'Flashes from Viveka-nanda' ಎನ್ನುವುದು 'ನಾಲ್ಕಾಣೆ ಮಾಲೆ'ಯ ಪುಸ್ತಕ. ಕೇವಲ ಇಪ್ಪತ್ತೈದು ಪೈಸೆ ಬೆಲೆಯ ಆ ಪುಟ್ಟ ಪುಸ್ತಕ, ಬೆಲೆ ಕಟ್ಟಲಿಕ್ಕಾಗದ ಜ್ಞಾನಭಂಡಾರವನ್ನು ಹೊಂದಿತ್ತು ಎನ್ನುವುದು ಅದರಲ್ಲಿನ ಸಂದೇಶಗಳನ್ನು ಓದಿ, ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಿದಾಗಲೇ ಅರಿವಿಗೆ ಬಂದಿತ್ತು. ಪ್ರವಾಸ ಮುಗಿಸಿಕೊಂಡು ಹಿಂದಿರುವಾಗ ತಿರುವನಂತಪುರದಿಂದ ಧಾರವಾಡದವರೆಗಿನ ರೈಲು ಪ್ರಯಾಣದಲ್ಲಿ ಆ ಪುಟ್ಟ ಪುಸ್ತಕಗಳಲ್ಲಿನ ಸಂದೇಶಗಳನ್ನು ಓದುತ್ತಾ ಬಂದಿದ್ದೆವು. ಆ ಸಂದೇಶಗಳು ತಿಳಿಯಪಡಿಸುವ ಅರ್ಥವನ್ನು ಅರಿಯುವ ಜೀವನಾನುಭವಗಳು ಆಗ ನಮಗಿರದಿದ್ದರೂ, ಅವುಗಳನ್ನು ಓದಿದಾಗ ಏನೋ ಹೊಸ ವಿಷಯವೊಂದನ್ನು ತಿಳಿದುಕೊಂಡ ಸಂತೋಷ ಮನಸ್ಸಿಗಾಗಿತ್ತು. **(ಮುಂದಿನ ಪುಟಕ್ಕೆ)**



ವರ್ಣಚಿತ್ರ : ರಾಮಪ್ಪ ಒಣರೊಟ್ಟಿ.
ಹುಬ್ಬಳ್ಳಿ, ಕರ್ನಾಟಕ

## ಮನದಾಳಕ್ಕಿಳಿದ 'ವಿವೇಕ ವಾಣಿ' (ಮುಂದುವರೆದುದು)

ಪ್ರವಾಸದಿಂದ ಮನೆಗೆ ಮರಳಿದಾಗ, ಸ್ವಾಮಿ ವಿವೇಕಾನಂದರ ಪೋಸ್ಟರ್, ಫೋಟೋಗಳು ನನ್ನ ಕೋಣೆಯ ಗೋಡೆಯನ್ನಲಂಕರಿಸಿದವು. ಜೊತೆಗೆ ಪ್ರವಾಸದ ಪ್ರಭಾವ ಇಲ್ಲಿಗೆ ನಿಲ್ಲದೇ ಮುಂದುವರೆಯುವಂತೆ ಮಾಡಿದ್ದವು ಆ ಪುಟ್ಟ ಪುಸ್ತಕಗಳಲ್ಲಿನ ಸಂದೇಶಗಳು! ನಾನು ಮತ್ತು ಅಕ್ಕ ಸೇರಿ ದೊಡ್ಡದೊಂದು ಪೇಟಿಂಗ್ ಮಾಡಿ, ಮುಗ್ಧ-ನಿಶ್ಕಲ್ಮಶ ಸ್ನೇಹದ ಸಂಕೇತವನ್ನು ಸಾರುವ ಆ ಚಿತ್ರಕ್ಕೆ ಶೀರ್ಷಿಕೆಯಾಗಿ ವಿವೇಕಾನಂದರ ಸಂದೇಶವನ್ನೇ ಬರೆದಿದ್ದೆವು. “There is nothing holier in the world than to keep good company”. ನಿಸ್ವಾರ್ಥ ಸ್ನೇಹ, ನಿಶ್ಕಲ್ಮಶವಾಗಿದ್ದು ತನ್ನ ಪ್ರಾವಿತ್ರ್ಯತೆಯನ್ನು ಬಿಂಬಿಸುತ್ತದೆ ಎನ್ನುವುದನ್ನು ನಾವು ಬದುಕಿನಲ್ಲಿ ನೋಡುವ, ಕೇಳುವ ಅಥವಾ ನಾವೇ ಭಾಗಿಯಾದ ಗೆಳೆತನಗಳಲ್ಲಿ ಕಾಣುತ್ತೇವೆ ಎನ್ನುವುದು ಎಲ್ಲರೂ ಒಪ್ಪುವ ಮಾತೇ ಆಗಿದೆ. ಇದರೊಂದಿಗೆ, “ನಿನ್ನ ಮೇಲೆ ನಿನಗೆ ನಂಬಿಕೆಯಿರಲಿ”, “ನಿನ್ನನ್ನು ನೀನು 'ಬಲಹೀನ' ಎಂದು ತಿಳಿಯುವುದೇ ಬಹುದೊಡ್ಡ ಪಾಪವೆನಿಸಿಕೊಳ್ಳುತ್ತದೆ”, “ನಮ್ಮಲ್ಲಿ ಮೂಡುವ ನಕಾರಾತ್ಮಕ ಯೋಚನೆಗಳಿಗೆ ಭಯವೇ ಕಾರಣ”, “ನಿನ್ನ ಬದುಕಿನ ಪುಸ್ತಕವನ್ನು ತೆರೆಯುವವರೆಗೂ ಬೇರೆ ಪುಸ್ತಕಗಳಿಗೆ ಬೆಲೆಯಿರುವುದಿಲ್ಲ”, “ಪರಿಪೂರ್ಣತೆ ಎಂದಿಗೂ ಅಪೂರ್ಣವಾಗಿರುವುದಿಲ್ಲ” ಎನ್ನುವ ಸಂದೇಶಗಳು ಅದೆಷ್ಟು ಸ್ಫೂರ್ತಿದಾಯಕ! “The Perfect never becomes imperfect” ಎಂದು ಅರಿತು ನಾವು ಕೈಗೆತ್ತಿಕೊಳ್ಳುವ ಯಾವುದೇ ಕಾರ್ಯದಲ್ಲಿ ಪರಿಪೂರ್ಣತೆಯಿರಬೇಕೆಂದಾಗ ಅದಕ್ಕೆ ನಾವು ನೀಡುವ ಸಮಯ, ಪಡುವ ಪರಿಶ್ರಮ, ತೋರಿಸುವ ಸಮರ್ಪಣಾಭಾವಗಳು ಆ ಕಾರ್ಯವನ್ನು ಅಪೂರ್ಣವಾಗಿಸುವುದಿಲ್ಲ ಎನ್ನುವುದು ನಮ್ಮೆಲ್ಲರ ಅನುಭವದ ಮಾತಾಗುತ್ತದೆ. ಇದನ್ನೇ ಸ್ವಾಮಿ ವಿವೇಕಾನಂದರು ಅದೆಷ್ಟು ಸರಳವಾಗಿ ತಿಳಿಹೇಳಿದ್ದಾರಲ್ಲ ಎನಿಸುತ್ತದೆ.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವಾಗ, ನಾನು ಮತ್ತು ಗೆಳತಿ ಹತ್ತಿರದಲ್ಲೇ ಇದ್ದ 'ಶ್ರೀ ರಾಮಕೃಷ್ಣಾಶ್ರಮ' ಕ್ಕೆ ಹೋಗಿ ಕೆಲವು ಪುಸ್ತಕಗಳನ್ನು ಕೊಂಡು ಓದಿದೆವು. ನಾವು ಅರ್ಥಮಾಡಿಕೊಂಡ ಮಟ್ಟಿಗಾದರೂ ಸ್ವಾಮಿ ವಿವೇಕಾನಂದರ ಸಂದೇಶಗಳ ಸಾರವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂಬ - ಪ್ರಯತ್ನ ನಮ್ಮದಾಗಿತ್ತು. ನಂತರ ಬೆಂಗಳೂರಿನಲ್ಲಿ ಅಲ್ಲಲ್ಲಿ ನಡೆಯುವ 'ಪುಸ್ತಕ ಮೇಳ'ಗಳಿಗೆ ಹೋಗಿ ವಿವೇಕಾನಂದರ ಹಲವಾರು ಪುಸ್ತಕಗಳನ್ನು ಕೊಳ್ಳುವ ಅವಕಾಶ ಸಿಕ್ಕಿತ್ತು. ಅಲ್ಲಿ 'ಶ್ರೀ ರಾಮಕೃಷ್ಣ ಪರಮಹಂಸ' ಮತ್ತು ಶ್ರೀ ಶಾರದಾ ಮಾತೆ' - ಯವರ ಸಂದೇಶಗಳ ಪುಸ್ತಕಗಳೂ ದೊರೆತಿದ್ದವು. 'ನಾಲ್ಕಾಣೆ ಮಾಲೆ'ಯ ಪುಟ್ಟ ಪುಸ್ತಕಗಳ ಬೆಲೆಯನ್ನು ಆಗ ಐವತ್ತು ಪೈಸೆಗೆ ನಿಗದಿಪಡಿಸಲಾಗಿತ್ತು. ಆ ಪುಸ್ತಕಗಳನ್ನೆಲ್ಲ ನನ್ನ ಬ್ಯಾಗಿನಲ್ಲಿ ಇಟ್ಟುಕೊಂಡು, ಸಮಯ ಸಿಕ್ಕಾಗ ಓದಬಹುದೆಂದು ರೂಢಿಸಿಕೊಂಡೆ. ಅಲ್ಲದೇ, ಆಫೀಸಿನ ಸ್ನೇಹಿತರಿಗೆ ಹುಟ್ಟುಹಬ್ಬದ ಕಾರ್ಡುಗಳನ್ನು ಕೊಡುವಾಗ ಅದರೊಂದಿಗೆ ಈ ತೆರನಾದ ಪುಟ್ಟ ಪುಸ್ತಕಗಳನ್ನೂ ಕೊಡುತ್ತಿದ್ದೆ. “ಒಳ್ಳೆಯದೆಂದು ಅನಿಸುವುದನ್ನು ಇನ್ನೊಬ್ಬರಿಂದ ಕಲಿ, ಕಲಿತ ನಂತರ ಆ ಇನ್ನೊಬ್ಬನಾಗದೇ, ಅದನ್ನು ನಿನ್ನ ರೀತಿಯಲ್ಲಿ ಅರ್ಥಮಾಡಿಕೊ” ಎನ್ನುವ ವಿವೇಕಾನಂದರ ಮಾತುಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ನನ್ನದಾಗಿಸಿಕೊಂಡೆ. ಹಿರಿಯರು ತಿಳಿಸಿಕೊಡುವ ಜೀವನಾನುಭಗಳು ಮತ್ತು ನನಗಾಗುವ ಜೀವನದ ಅನುಭವಗಳು ಈ ನಿಟ್ಟಿನಲ್ಲಿ ನೆರವಾದವು ಎನ್ನಬಹುದು. ಇದೇ ಸಮಯದಲ್ಲಿ ಅಪ್ಪ ಮನೆಗೆ ಪೋಸ್ಟಿನಲ್ಲಿ ತರಿಸುತ್ತಿದ್ದ 'ವಿವೇಕ ಸಂಪದ' ಪತ್ರಿಕೆಯನ್ನು ಓದಿ, ಹಲವಾರು ವಿಷಯಗಳನ್ನು ತಿಳಿದುಕೊಳ್ಳುವ ಅವಕಾಶ ಸಿಕ್ಕಿತ್ತು.

ಅಮ್ಮನ ಮನೆಯಲ್ಲಿ ನನ್ನ ಆಸಕ್ತಿಯಂತೆ ವಿವೇಕಾನಂದರ ಪೇಂಟಿಂಗ್-ಪೋಸ್ಟರ್ ಗಳಿಂದ, ಪುಸ್ತಕಗಳಿಂದ ಅಲಂಕರಿಸಿ-ಕೊಂಡಿದ್ದ ಕೋಣೆಯನ್ನು ನನ್ನ ಪತಿಗೆ ಪರಿಚಯಿಸಿ, ನನ್ನ ಸಾಹಿತ್ಯಾಸಕ್ತಿ ಮತ್ತು ಇನ್ನಿತರ ಹವ್ಯಾಸಗಳಲ್ಲಿ ಸ್ವಾಮಿ ವಿವೇಕಾನಂದರ ಸಂದೇಶಗಳನ್ನು ತಿಳಿದುಕೊಳ್ಳುವ ಪ್ರಯತ್ನವೂ ಒಂದು ಎಂದು ಹೇಳಿದಾಗ, ಅವರ ಸಾಹಿತ್ಯಾಸಕ್ತಿ, 'ಯುವವೇದಿಕೆ'ಯ ಚಟುವಟಿಕೆಗಳ ಬಗ್ಗೆ ತಿಳಿದು ನಮ್ಮ ಯೋಚನೆಗಳಲ್ಲಿ ಸಾಮ್ಯತೆಯಿದೆ ಎನಿಸಿತ್ತು. ಅತ್ತೆಯ ಮನೆಗೆ ಹೊರಟಾಗ ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು, ಫೋಟೋಗಳನ್ನು ಜೋಡಿಸಿಕೊಂಡೆ. ಸಂಪ್ರದಾಯಸ್ಥ ಕುಟುಂಬದ ಸೊಸೆಯಾಗಿ ಹೊರಟಿದ್ದ ನಾನು, ನನ್ನ ಇಷ್ಟದ ಆ ಎಲ್ಲ ಸಾಮಾನುಗಳನ್ನು ಅಮ್ಮನ ಮನೆಯಲ್ಲಿಯೇ ಬಿಟ್ಟು ಹೋಗಬೇಕೆಂದ ಅಕ್ಕನ ಮಾತನ್ನು ಸುಲಭವಾಗಿ ಒಪ್ಪಿಕೊಳ್ಳಲಿಲ್ಲ. ನನ್ನ ಆಸಕ್ತಿಯನ್ನು ಸ್ವೀಕರಿಸುವ, ಗೌರವಿಸುವ ಪ್ರೌಢತೆ-ಪ್ರಭುದ್ಧತೆ ಆ ಮನೆಯವರಿಗೂ ಇರಬೇಕೆಂಬ ಅಭಿಪ್ರಾಯ ನನ್ನದಾಗಿತ್ತು.

**(ಮುಂದಿನ ಪುಟಕ್ಕೆ)**

**ಮನದಾಳಕ್ಕಿಳಿದ 'ವಿವೇಕ ವಾಣಿ' (ಮುಂದುವರೆದುದು)**

ಆಗಲೇ ಅಕ್ಕ ವಿವೇಕಾನಂದರ ಸಂದೇಶವೊಂದನ್ನು ನೆನಪಿಸಿದ್ದಳು. "No two people see the same world". ಅದು ಅಕ್ಕನ ಅನುಭವದ ಮಾತಾಗಿತ್ತು. ಈ ಮಾತನ್ನು ಅರ್ಥಮಾಡಿಕೊಂಡು ಅನವಶ್ಯಕ ವಾದ-ವಿವಾದಗಳಿಗೆ ಅವಕಾಶ ಕೊಡದೆ, ತಾಳ್ಮೆಯನ್ನು ಅಭ್ಯಾಸ ಮಾಡಿದಲ್ಲಿ ಇಲ್ಲದ ವೈಮನಸ್ಯಗಳನ್ನು ತಡೆಯಬಹುದೆಂದು ಕಾಲಕಳೆದಂತೆ ನನಗೂ ಮನವರಿಕೆಯಾಗಿತ್ತು. ಈ ರೀತಿ ಅಭ್ಯಾಸ ಮಾಡಿಕೊಂಡ ತಾಳ್ಮೆ ಬದುಕಿನಲ್ಲಿ ಬಹಳಷ್ಟು ಕಡೆ ನಮಗೆ ಉಪಯೋಗವಾದರೂ, ನಮ್ಮ ಈ ಸ್ವಭಾವವನ್ನು ದುರುಪಯೋಗ ಪಡಿಸಿಕೊಳ್ಳುವ, ಮುಗ್ಧತೆಯ ಸೋಗಿನಲ್ಲಿ ವಂಚನೆ ಮಾಡುವ, ಸತ್ಯವನ್ನು ಮರೆಮಾಚುವವರನ್ನು ಒಪ್ಪಿಕೊಳ್ಳುವುದು ಆತ್ಮವಂಚನೆ ಎನಿಸಿಕೊಳ್ಳುವುದಿಲ್ಲವೇ? ಸ್ವಾಮಿ ವಿವೇಕಾನಂದರ ಮಾತಿನಂತೆ ಇಂತಹ ಆತ್ಮವಂಚನೆ ಸಲ್ಲದು. "ಒಳ್ಳೆಯದು ಸತ್ಯಕ್ಕೆ ಹತ್ತಿರವಾಗಿರುತ್ತದೆ, ಆದರೆ ಸತ್ಯವಾಗಿರುವುದಿಲ್ಲ", "ಸತ್ಯವನ್ನು ಬಿಟ್ಟುಕೊಡದೆ ಅದಕ್ಕೆ ಅಂಟಿಕೊಂಡಿರು. ಸತ್ಯಕ್ಕೆ ಯಶಸ್ಸು ನಿಧಾನವಾಗಿಯಾದರೂ ನಿಶ್ಚಿತವಾಗಿ ದೊರೆಯುತ್ತದೆ. ಅಸತ್ಯದ ವಿಷಯದಲ್ಲಿ ಎಚ್ಚರದಿಂದಿರು." ಎನ್ನುವ ಮಾತುಗಳು ಸತ್ಯ-ಅಸತ್ಯದ ವಿಷಯವಾಗಿ ನಮ್ಮ ಮನದಲ್ಲಿ ಮೂಡುವ ಗೊಂದಲವನ್ನು ದೂರಗೊಳಿಸುತ್ತವೆ.

ಬದುಕಿನ ಅನೇಕ ಮಜಲುಗಳನ್ನು ಏರುತ್ತ, ವಿವಿಧ ಘಟ್ಟಗಳನ್ನು ತಲುಪುವಷ್ಟರಲ್ಲಿ ನಾವು ಅದೆಷ್ಟೋ ಅನುಭವಗಳನ್ನು ಕಲೆಹಾಕಿಕೊಂಡಿರುತ್ತೇವಲ್ಲವೇ? ನಮ್ಮ ಅನುಭವಗಳಿಂದ ಆಗುವ ಕಲಿಕೆ ಅಪಾರ. "ಜೀವನಾನುಭವಗಳೇ ದಾರಿ ತೋರಿಸುವ ಗುರು" ಎನ್ನುವ ಮಾತಿನ ಅರ್ಥ ನಮಗಾಗುತ್ತದೆ. ಜೀವನದ ಕಠಿಣತೆಯ ಪರಿಚಯವಾದಾಗ, ಸತ್ಯವನ್ನು ಒಪ್ಪಿಕೊಳ್ಳದೇ ಬದುಕನ್ನು ದೂಷಿಸಿತ್ತಾ ಕುಳಿತರೆ ಜೀವನ ನೀಡುವ ಅಮೂಲ್ಯ ಕ್ಷಣಗಳನ್ನು ಕಳೆದುಕೊಳ್ಳುತ್ತೇವಲ್ಲವೇ? ಸೋಲಿನ/ಹಿನ್ನಡೆಯ ಕಹಿಯನ್ನು ಮನವರಿಕೆ ಮಾಡಿಕೊಂಡು ಯೋಚಿಸಿದಾಗ, ಮುಂದಿನ ಪ್ರಯತ್ನಗಳಲ್ಲಿ ಗೆಲುವು ಪಡೆಯುವ ಮಾರ್ಗವನ್ನು ಹುಡುಕಿಕೊಳ್ಳಬಹುದಲ್ಲವೇ? ಸೋಲಿನ ಸತ್ಯವನ್ನು ಒಪ್ಪಿಕೊಳ್ಳದೇ ಪರಸ್ಪರ ದೋಷಾರೋಪಣೆಯಲ್ಲಿ ತೊಡಗಿದರೆ ಗೆಲುವಿನ ಸಿಹಿ 'ಕನ್ನಡಿಯೊಳಗಿನ ಗಂಟು' ಎನಿಸಿಕೊಳ್ಳುವು-ದಲ್ಲವೇ? ಮನಸ್ಸಿನಲ್ಲಿ ಮೂಡುವ ಇಂತಹ ನೂರಾರು ಪ್ರಶ್ನೆಗಳಿಗೆ ಸ್ವಾಮಿ ವಿವೇಕಾನಂದರ ಸಂದೇಶಗಳಿಂದ ಉತ್ತರ ಕಂಡುಕೊಳ್ಳಬಹುದು.

"ನೀನು ಮಾಡಿದ ತಪ್ಪಿನ ಅರಿವಾದಾಗ ಧೈರ್ಯದಿಂದ ಒಪ್ಪಿಕೊ. ಬೇರೊಬ್ಬನನ್ನು ದೂರುತ್ತ, ತಪ್ಪಿನ ಕಾರಣ ಅವನೆಂದು ದೂಷಿಸುತ್ತ ಕೂರಬೇಡ. ನಿನ್ನ ನೋವುಗಳಿಗೆ ಕಾರಣಕರ್ತ ನೀನೆ.", "You are the creator of your own destiny" ಎನ್ನುವ ನುಡಿಗಳು ಬದುಕಿನ ಸತ್ಯವನ್ನು ಒಪ್ಪಿಕೊಳ್ಳುವಂತೆ ಮಾಡುತ್ತವೆ.

ಜೀವನ ನೀಡುವ ಅನೇಕ ಅನುಭವಗಳನ್ನು ಕಲೆಹಾಕಿಕೊಳ್ಳುತ್ತ, ಬದುಕಿನ ಕಠಿಣತೆಯ ಸತ್ಯವನ್ನು ಒಪ್ಪಿಕೊಳ್ಳುತ್ತ ಅಮೆರಿಕಾಗೆ ಬಂದು ನೆಲೆಸಿದಾಗ ನಾನು ಸಂಗ್ರಹಿಸಿಟ್ಟುಕೊಂಡಿದ್ದ ಸ್ವಾಮಿ ವಿವೇಕಾನಂದರ ಪುಸ್ತಕಗಳೆಲ್ಲ ಅಮ್ಮನ ಮನೆಯ ಅಟ್ಟಕ್ಕೇರಿದ್ದವು. ಇಲ್ಲಿನ ಏಕತಾನತೆಯ ಬದುಕಿಗೆ ಹೊಂದಿಕೊಳ್ಳುವ ಪ್ರಯತ್ನದಲ್ಲಿ ಏನನ್ನೋ ಕಳೆದುಕೊಂಡ ಭಾವನೆ ಮೂಡಿದಂತಾದಾಗ, ಅಂತರ್ಜಾಲ ನೆರವಿಗೆ ಬಂದಿತ್ತು. 'ಸ್ವಾಮಿ ವಿವೇಕಾನಂದರ ಸಂದೇಶಗಳು' ಎಂಬ ಒಂದು ಸಾಲಿಗೆ ಅಂತರ್ಜಾಲದ ಪುಟ ಸಾವಿರಾರು ಸಂದೇಶಗಳನ್ನು ಹುಡುಕಿತ್ತು. ನಾನು ಖರೀದಿಸಿದ್ದ 'ನಾಲ್ಕಾಣೆ ಮಾಲೆ'ಯ ಪುಸ್ತಕವನ್ನು ನೆನಪಿಸಿಕೊಳ್ಳುತ್ತ ನನಗೆ ಉಪಯುಕ್ತವೆನಿಸುವ ಸಂದೇಶಗಳನ್ನು ಸಂಗ್ರಹಿಸಿಟ್ಟುಕೊಳ್ಳತೊಡಗಿದೆ. ನನ್ನನ್ನು ಯಾವುದಾದರೊಂದು ಕೆಲಸದಲ್ಲಿ ತೊಡಗಿಸಿಕೊಳ್ಳಬೇಕೆಂದಾಗ ನೂರಾರು ದಾರಿಗಳು ಕಂಡು ಗೊಂದಲಕ್ಕೀಡುಮಾಡಿದ್ದವು. ಪ್ರಯತ್ನಗಳು ಕೈಗೂಡದಿದ್ದಾಗ, ಅಂದುಕೊಂಡಷ್ಟು ಸಫಲತೆ ಸಿಗದಿದ್ದಾಗ ನಿರಾಸೆ ಖಂಡಿತ. ಯಶಸ್ಸು ಮರೀಚಿಕೆಯೆನಿಸತೊಡಗಿದಾಗ ನೆನಪಾಗುವ ಸಂದೇಶ "ಒಂದು ಉದ್ದೇಶವನ್ನಿಟ್ಟುಕೊ, ಅದನ್ನೇ ಕನಸಾಗಿಸಿಕೊ. ಅದನ್ನೇ ಉಸಿರಾಗಿಸಿಕೊ. ಬೇರೊಂದು ವಿಚಾರವನ್ನು ಮಾಡದೇ ಆರಿಸಿಕೊಂಡ ಯೋಜನೆಯ ಯಶಸ್ಸಿಗಾಗಿ ಶ್ರಮಿಸು". ಹಲವು ದೋಣಿಗಳ ಸವಾರನಾಗಿ ಪ್ರಯಾಣ ಮಾಡುವ ಪ್ರಯತ್ನ ಎಷ್ಟರ ಮಟ್ಟಿನ ಯಶಸ್ಸನ್ನು ನೀಡಬಹುದೆಂದು ಯೋಚಿಸುವ ಪ್ರೌಢತೆ ನಮ್ಮದಾಗಿರ-ಬೇಕಲ್ಲವೇ? ಆಗಲೇ ನನ್ನ ಸಾಹಿತ್ಯಾಸಕ್ತಿಯನ್ನು ಮುಂದುವರೆಸ-ಬೇಕೆಂದು ನಿರ್ಧರಿಸಿ, ಬರವಣಿಗೆಗೆ ಮುನ್ನ ಹೆಚ್ಚಿನ ಓದುವಿಕೆ ಅಗತ್ಯವೆಂದುಕೊಂಡು ರಜೆಗೆಂದು ಊರಿಗೆ ಹೋದಾಗ ನೂರಾರು ಪುಸ್ತಕಗಳನ್ನು ನನ್ನೊಂದಿಗೆ ತೆಗೆದುಕೊಂಡು ಬಂದೆ.

**(ಮುಂದಿನ ಪುಟಕ್ಕೆ)**


**ಮನದಾಳಕ್ಕಿಳಿದ 'ವಿವೇಕ ವಾಣಿ' (ಮುಂದುವರೆದುದು)**

ಪುಟ್ಟ ಮಗುವಿನೊಂದಿಗೆ ಓದುವುದು, ಬರವಣಿಗೆ ಅಷ್ಟರ ಮಟ್ಟಿಗೆ ಆಗುತ್ತಿರಲಿಲ್ಲ. ಮಗನಿಗೆ ಐದು ವರ್ಷವಾದಾಗ ಅವನಿಗೆ ನಮ್ಮ ಸಂಸ್ಕೃತಿ-ಸಂಪ್ರದಾಯಗಳ ಬಗ್ಗೆ ಹೇಳಿಕೊಡಲು ಪ್ರಾರಂಭಿಸಿದೆ. ಆಗ ನವರಾತ್ರಿಯ ಹಬ್ಬದಲ್ಲಿ ಬೊಂಬೆ ಇಡುವ ಪದ್ಧತಿಯನ್ನು ಮುಂದುವರೆಸಿದರಾಯಿತೆಂದುಕೊಂಡೆ.

ಬೆಂಗಳೂರಿನಲ್ಲಿ ಬೊಂಬೆಗಳ ಖರೀದಿಗಾಗಿ ಓಡಾಡುತ್ತಿದ್ದಾಗ, ಕರಕುಶಲ ಸಾಮಗ್ರಿಗಳ ಮೇಳವೊಂದರಲ್ಲಿ ಗಾಂಧೀಜಿ, ಸುಭಾಸ್ ಚಂದ್ರ ಬೋಸ್, ರವೀಂದ್ರನಾಥ್ ಟ್ಯಾಗೋರರ ಬೊಂಬೆ ಗಳೊಂದಿಗೆ ಸ್ವಾಮಿ ವಿವೇಕಾನಂದರ ಟೆರಕೋಟಾ ಬೊಂಬೆಯೊಂದು ಕಣ್ಣಿಗೆ ಬಿದ್ದಿತ್ತು. ಸೂಟ್ ಕೇಸಿನ ತುಂಬ ತುಂಬಿಕೊಂಡಿದ್ದ ಬೊಂಬೆಗಳ ಸಂಗ್ರಹಕ್ಕೆ ಅದನ್ನೂ ಸೇರಿಸಿ, ನವರಾತ್ರಿಯ ದಸರಾಬೊಂಬೆಗಳೊಂದಿಗೆ ಇಡುವುದನ್ನು ರೂಢಿಸಿಕೊಂಡೆ. ಮಗನಿಗೂ 'ಬಾಲಕ ನರೇಂದ್ರ'ನ ಕಥೆ ಹೇಳಿದೆ. ಅದೊಮ್ಮೆ ದಸರಾ ಕಳೆದು ಬೊಂಬೆಗಳನ್ನೆಲ್ಲ ಎತ್ತಿಡುವ ಕೆಲಸದಲ್ಲಿ ಕೈ ಜೋಡಿಸಿದ ಮಗನ ಪುಟ್ಟ ಕೈಗಳಿಂದ ಜಾರಿ ಕೆಳಗೆ ಬಿದ್ದ ವಿವೇಕಾನಂದರ ಬೊಂಬೆ ಒಡೆದುಹೋಗಿತ್ತು! ಮಗನನ್ನು ಗದರಿಸಿ, ಪಕ್ಕಕ್ಕೆ ಕೂರಿಸಿ, ಫೆವಿಕಾಲ್ ಹಚ್ಚಿ ಬೊಂಬೆಯನ್ನು ಮತ್ತೆ ಜೋಡಿಸಿಕೊಂಡಾಗ, ದೂರದ ಕುರ್ಚಿಯಲ್ಲಿ ಕುಳಿತಿದ್ದ ಕಂದ ಅಚ್ಚರಿಯ ಕಂಗಳಿಂದ ನೋಡಿತ್ತು. ಮಗನಿಗೆ ಮತ್ತೆ ವಿವೇಕಾನಂದರ ಕಥೆ ಹೇಳಿ ಕೆಲಸ ಮುಂದುವರೆಸಿದ್ದೆ. ಅವನಿಗೆ ವಿವೇಕಾನಂದರ ಚಿತ್ರ ಬರೆಯುವುದನ್ನು, ಬಣ್ಣ ತುಂಬುವುದನ್ನು ಹೇಳಿಕೊಟ್ಟೆ. 'ರಾಷ್ಟ್ರೀಯ ಯುವ ದಿನ'ದ ಅಂಗವಾಗಿ ನಾನೂ ರಂಗೋಲಿ ಕಲೆಯಲ್ಲಿ ಸ್ವಾಮಿ ವಿವೇಕಾನಂದರನ್ನು ಬರೆದು, ಬಣ್ಣ ತುಂಬಿ ಮಗನಿಗೆ ತೋರಿಸಿದೆ. ಒಂದೆರಡು ವರ್ಷಗಳ ನಂತರ ವಾಟ್ಸ್ಯಾಪಿನಲ್ಲಿ ಸ್ವಾಮಿ ವಿವೇಕಾನಂದರು ಶಿಕ್ಯಾಗೋನಲ್ಲಿ ಮಾಡಿದ ಭಾಷಣ(ಈ ಬಗ್ಗೆ ನಿಖರತೆಯಿಲ್ಲ) ಎಂಬ ಆಡಿಯೋ ತೇಲಿಬಂದಾಗ ಮಗನೂ ಕೇಳಿಸಿಕೊಂಡ. ಎರಡನೆ ತರಗತಿಯಲ್ಲಿ ಓದುತ್ತಿದ್ದ ಅವನಿಗೆ ಸ್ವಾಮಿ ವಿವೇಕಾನಂದರೆಂದರೆ ಒಬ್ಬ ಗುರು, "One of Amma's favorite Teacher" ಎನ್ನುವಷ್ಟು ತಿಳುವಳಿಕೆ ಬಂದಿತ್ತು. ಜೊತೆಗೆ ಇಂದಿನ ಕಾಲದ ಮಕ್ಕಳಂತೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಅಂತರ್ಜಾಲನಲ್ಲಿ ಹುಡುಕಿಕೊಂಡ.

ಇಂದಿನ ಬದಲಾದ ಕಾಲದಲ್ಲಿ ಅದೆಷ್ಟೋ ಮಾಹಿತಿಗಳನ್ನು ಅಂತರ್ಜಾಲದ ಪುಟಗಳಿಂದಲೇ ಪಡೆಯಬಹುದಾಗಿದೆ. ಅಲ್ಲಿಂದ ಪಡೆದ ಉತ್ಕೃಷ್ಟವಾದ ಮಾಹಿತಿಗಳನ್ನು ಮನನ ಮಾಡಿಕೊಳ್ಳುವ ಪ್ರಯತ್ನ ಪಡದೇ, ಅವುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ತೇಲಿ ಬಿಡುವುದೇ ಬುದ್ಧಿವಂತಿಕೆಯೆಂಬಂತಾಗಿದೆ. ಇದರೊಂದಿಗೆ ಹಿರಿಯರು, ಅನುಭವಿಗಳು ಏನೇ ಹೇಳ ಹೊರಟರೂ ಅದನ್ನು ಒಪ್ಪಿಕೊಳ್ಳದೇ ಅಂತರ್ಜಾಲವನ್ನೇ 'ಗುರು'ವೆಂದು ತಿಳಿಯುವ ಮತ್ತು ಅಲ್ಲಿಂದ ಪಡೆದ ಅರೆಬರೆ ಮಾಹಿತಿಯನ್ನೇ ಜ್ಞಾನವೆಂದುಕೊಂಡವರ ಸಂಖ್ಯೆ ಹೆಚ್ಚಾಗಿದೆ. ಹೀಗಿರುವಾಗ "ನೀವು ನಿಮ್ಮೊಳಗಿನಿಂದಲೇ ಬೆಳೆಯಬೇಕು. ಯಾರೂ ನಿಮಗೆ ಕಲಿಸಲಾರರು, ನಿಮ್ಮಾತ್ಮವೇ ನಿಮ್ಮ ಗುರು" ಎನ್ನುವ ಸ್ವಾಮಿ ವಿವೇಕಾನಂದರ ಮಾತುಗಳನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ವಿವೇಕಾನಂದರ ಇನ್ನೊಂದು ಸಂದೇಶದಲ್ಲಿಯೇ ಅಂತರಾತ್ಮವನ್ನು ನಮ್ಮ ಗುರುವಾಗಿಸಿಕೊಳ್ಳುವ ಪ್ರಯತ್ನಕ್ಕೆ ಉತ್ತರವಿದೆ ಎನಿಸುತ್ತದೆ. "ದಿನಕ್ಕೊಮ್ಮೆಯಾದರೂ ನಿನ್ನೊಂದಿಗೆ ನೀನು ಮಾತನಾಡು. ಇಲ್ಲದಿದ್ದಲ್ಲಿ ಈ ಜಗತ್ತಿನಲ್ಲಿನ ಒಬ್ಬ ಉತ್ತಮ ವ್ಯಕ್ತಿಯನ್ನು ಭೇಟಿಯಾಗುವ ಅವಕಾಶವನ್ನು ಕಳೆದುಕೊಳ್ಳುವೆ." ನಾವು ಸತ್ಯ-ಅಸತ್ಯ, ನ್ಯಾಯ-ಅನ್ಯಾಯ, ಧರ್ಮ-ಅಧರ್ಮಗಳಂಥ ಅದೆಷ್ಟೋ ವಿಷಯಗಳಲ್ಲಿ ಬೇರೊಬ್ಬರಿಂದ ಸತ್ಯವನ್ನು ಮರೆಮಾಚಿ, ಇಲ್ಲದ ಸಮರ್ಥನೆಗಳನ್ನು ನೀಡಿ, ಅವರೊಂದಿಗೆ ವಾದ-ವಿವಾದಗಳಲ್ಲಿ ತೊಡಗಿಕೊಳ್ಳುವ ಹಲವರನ್ನು ನೋಡುತ್ತೇವೆ. ಆದರೆ ನಾವು ಆತ್ಮವಂಚನೆ ಮಾಡಿಕೊಳ್ಳದೆ, ನಮ್ಮ ಆತ್ಮಸಾಕ್ಷಿಗೆ ಪ್ರಾಮಾಣಿಕ-ರಾಗಿದ್ದಾಗ, ಜೀವನದ ಅನುಭವಗಳು ಅಂತರಾಳದ ಆಳಕ್ಕಿಳಿದು ಆತ್ಮದ ಕತ್ತಲನ್ನು ಕಳೆದು, ವ್ಯಕ್ತಿಯ ವ್ಯಕ್ತಿತ್ವದಲ್ಲಿ ಬೆಳಕನ್ನು ತುಂಬುತ್ತವೆ ಮತ್ತು ಅಂತರಾತ್ಮವೇ ಸರಿಯಾದ ಮಾರ್ಗದರ್ಶನ ತೋರುವ 'ಗುರು' ಎಂದು ಮನವರಿಕೆಯಾಗುತ್ತದಲ್ಲವೇ?

'ವಿವೇಕ ವಾಣಿ'ಯ ಆಳವನ್ನು ಜೀವನದ ಹಲವು ಅನುಭವಗಳಿಂದ ಮತ್ತು ಕೆಲವು ಜೀವನಾನುಭವಗಳಿಂದ ಅರಿತು, ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ನನ್ನ ಪ್ರಯತ್ನವನ್ನು ಮುಂದುವರೆಸಬೇಕು ಎಂದುಕೊಂಡಾಗಲೆಲ್ಲ ನೆನಪಿಗೆ ಬರುವ ವಿವೇಕಾನಂದರ ಸಂದೇಶ, "ಮನುಷ್ಯ ತನ್ನ ಯೋಚನೆಗಳಿಂದಾಗುತ್ತಾನೆ, ಆ ಯೋಚನೆಗಳೇ ಅವನೊಂದಿಗೆ ಪಯಣಿಸುತ್ತವೆ". ನನ್ನ ಯೋಚನೆಗಳು ಜೀವನದ ಸಾರ್ಥಕತೆಯ ಗುರಿಯನ್ನು ಗಳಿಸುವ ಯೋಚನೆಗಳಾಗಿ ಬದುಕಿನ ಪಯಣದಲ್ಲಿ ಜೊತೆಯಾಗಲಿ ಎಂಬುದೇ ನನ್ನ ಆಶಯ. ■




ಛಾಯಾಚಿತ್ರ ಕೃಪೆ : ಅಂತರ್ಜಾಲ

## ರಾಷ್ಟ್ರೀಯ ಯುವದಿನದ ಶುಭಾಶಯಗಳು !


ಮುಂದಿನ ಸಂಚಿಕೆಯಿಂದ 'ಯುವ ವಾಣಿ ಅಂಕಣವನ್ನು ಪ್ರಾರಂಭಿಸುತ್ತಿದ್ದೇವೆ. 'ಯುವ ಬೃಂದಾವನ'ದ ಚಟುವಟಿಕೆಗಳನ್ನು ಈ ಅಂಕಣದಲ್ಲಿ ಕಾಣಬಹುದು"

- ಸಂಪಾದಕರು


ಚಿತ್ರ ರಚನೆ: ರಘುರಾಂ ರಾಯಸಂ



ಚಿತ್ರ ರಚನೆ: ಶ್ರೀಪರ್ಣಿಕಾ ರಾಘವೇಂದ್ರ




# ರಾಷ್ಟ್ರೀಯ ಯುವ ದಿನ



ಚಿತ್ರ ರಚನೆ: ಅದಿತಿ ಪ್ರಸಾದ್ (೧೨ ವರ್ಷ)


ಚಿತ್ರ ರಚನೆ: ಪೂರ್ವಿ ಶೇಖರ್ (೧೨ ವರ್ಷ)

## ಚಿಣ್ಣರು ಬಿಡಿಸಿದ ಚಿತ್ರಗಳು




ಚಿತ್ರ ರಚನೆ: ಸಿರಿ ತೈಲಗೇರಿ (೧೧ ವರ್ಷ)




ಚಿತ್ರ ರಚನೆ: ಶ್ರೇಯಾ ರಾಘವೇಂದ್ರ ( ೯ ವರ್ಷ )



ಚಿತ್ರ ರಚನೆ: ಅನಘಾ ವಿನೋದ್ (೭ ವರ್ಷ )



ಚಿತ್ರ ರಚನೆ: ಸಾರ್ಥಕ್ ರಾವ್ (೧೧ ವರ್ಷ )



ಸ್ವಾಮಿ ವಿವೇಕಾನಂದರು

ಏಳಿ-ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ...
ಸ್ವಾಮಿ ವಿವೇಕಾನಂದರು ನಮ್ಮ ಸಮಾಜಕ್ಕೆ ಅವರ ಕೊಡುಗೆ
ಅಪಾರ. ಅವರ ಜೀವನ ಘಟನೆಗಳು ಎಂದೆಂದಿಗೂ ಅಮರ.
ಶ್ರೀರಾಮಕೃಷ್ಣ ಪರಮಹಂಸರ ಆತ್ಮೀಯ ಶಿಷ್ಯರಾದ ವಿವೇಕಾನಂದರು
ಭಾರತದ ತತ್ವಜ್ಞಾನ, ಯೋಗ, ವೇದಾಂತ ಸಿದ್ಧಾಂತಗಳನ್ನು
ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಚಾರ ಮಾಡಿ ಭಾರತಕ್ಕೆ ಕೀರ್ತಿ ತಂದ
ಮಹಾನ್ ವ್ಯಕ್ತಿ.

ಸಾರ್ಥಕ್ ರಾವ್

# ಚಿಣ್ಣರು ಬಿಡಿಸಿದ ಚಿತ್ರಗಳು



ಹಿನ್ನೋಟ

# ವಾರ್ಷಿಕೋತ್ಸವ-೨೦೧೮ ಹಾಗೂ ಮಕ್ಕಳೋತ್ಸವ



ಶ್ರೀವಿದ್ಯಾ ಪ್ರಶಾಂತ್

ಈ ಬಾರಿ ಡಿಸೆಂಬರ್ ತಿಂಗಳ ೧ ನೇ ತಾರೀಖಿನಂದು ನ್ಯೂಜೆರ್ಸಿಯ ಬೃಂದಾವನ ಕನ್ನಡ ಕೂಟದ ವತಿಯಿಂದ ಮಕ್ಕಳೋತ್ಸವ, ವಾರ್ಷಿಕೋತ್ಸವ ಹಾಗೂ ದೀಪಾವಳಿಯ ಕಾರ್ಯಕ್ರಮಗಳು ಈಸ್ಟ್ ಬ್ರುನ್ಸ್ ವಿಕ್ ಹೈಸ್ಕೂಲ್ ನ ರಂಗಮಂದಿರದಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು. ಪೂರ್ವಾಹ್ನ ೧೦.೩೦ ರಿಂದ ರಾತ್ರಿ ೮.೩೦ ರ ವರೆಗೂ ಅಭಿಮಾನಿ ತಂಡದವರು ವಿಧವಿಧವಾದ, ಎಲ್ಲರಿಗೂ ಮನರಂಜನೆಯನ್ನು ಕೊಡುವಂತಹ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ಮಕ್ಕಳಿಗಾಗಿ ಸಾಂಸ್ಕೃತಿಕ ಸ್ಪರ್ಧೆಗಳು, ಯುವ ಬೃಂದಾವನದ ಮಕ್ಕಳಿಗೆ ನಾಟಕಗಳ ಕಾರ್ಯಾಗಾರ, ನಾಟಕಗಳು, ನೃತ್ಯಗಳನ್ನು ಆಯೋಜಿಸಿದ್ದರು.

ಅಪರಾಹ್ನದ ಪುಷ್ಕಳವಾದ ಭೋಜನದ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮವು ಸರಿ-ಸುಮಾರು ೧.೩೦ರ ಹೊತ್ತಿಗೆ ಸುರೇಶ್ ಗಡಗಿಯವರ ಸ್ವಾಗತ ಭಾಷಣದೊಂದಿಗೆ ಆರಂಭಗೊಂಡಿತು. ಯಾವುದೇ ಕಾರ್ಯಕ್ರಮವು ನಿರ್ವಿಘ್ನವಾಗಿ ನಡೆಯಬೇಕಾದರೆ ದೈವ ಕೃಪೆ ಅತ್ಯಗತ್ಯ ಅಂತೆಯೇ ತ್ರಿಶ ಹಾಗೂ ಜಿಯಾ ತಮ್ಮ ಪ್ರಾರ್ಥನೆ ಹಾಡಿನೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಮ್ಮ ಬೃಂದಾವನ ಕನ್ನಡ ಕೂಟದ ಮಕ್ಕಳಲ್ಲಿನ ಪ್ರತಿಭೆ ಅಗಣ್ಯವಾದುದು. ಇದನ್ನು ಬೆಳಕಿಗೆ ತರುವ ನಿಟ್ಟಿನಲ್ಲಿ ಈ ಬಾರಿ ಸಂಕೇತ ಗೀತೆಯ ಬಳಿಕ ಎಂದಿನಂತೆ ಹಾಡುವ ಎರಡು ರಾಷ್ಟ್ರಗಳ(ಭಾರತ ಹಾಗೂ ಅಮೆರಿಕ) ರಾಷ್ಟ್ರಗೀತೆಯನ್ನು ಹರಿಯವರ ನೇತೃತ್ವದಲ್ಲಿ ಮಕ್ಕಳು ಸಂಗೀತ ಸಂಯೋಜನೆಯ ಮೂಲಕ ನುಡಿಸಿ ಹಾಡಿದರು. ಈ ಹೊಸ ಪ್ರಯತ್ನ ಸಭಿಕರೆಲ್ಲರನ್ನೂ ತಲೆದೂಗುವಂತೆ ಮಾಡಿತು. ತದನಂತರ ಬೃಂದಾವನ ಕನ್ನಡ ಶಾಲೆಯ ಮಕ್ಕಳಿಂದ ವಿವಿಧ ಮನೋರಂಜನಾ ಕಾರ್ಯಕ್ರಮಗಳು ಮೂಡಿಬಂದವು.

**(ಮುಂದಿನ ಪುಟಕ್ಕೆ)**



ಈಸ್ಟ್ ವಿಂಡ್ಸರ್ ಶಾಲೆಯ ಮಕ್ಕಳು ಅಲ್ಲಿನ ಸ್ವಯಂಸೇವಾ ಶಿಕ್ಷಕಿಯರಾದ ಉಮಾ ಹಾಗೂ ಅರ್ಚನ ಇವರ ನೇತೃತ್ವದಲ್ಲಿ ಕುವೆಂಪುರವರು ಬರೆದ ಪ್ರಸಿದ್ಧ ನಾಟಕಗಳಾದ 'ನನ್ನ ಗೋಪಾಲ', 'ಬೆರಳ್ ಗೆ ಕೊರಳ್', 'ಮಹಾರಾತ್ರಿ' ಹಾಗು 'ಜಲಗಾರ' ನಾಟಕಗಳನ್ನು ಬಲು ಸುಂದರವಾಗಿ ಅಭಿನಯಿಸಿದರು. ಮಕ್ಕಳ ಈ ಅಭಿನಯವು ಸಭಿಕರೆಲ್ಲರನ್ನೂ ಮಂತ್ರಮುಗ್ಧಗೊಳಿಸಿತು.

ಸೌಥ್ ಬ್ರುನ್ಸ್ ವಿಕ್ ಶಾಲೆಯ ಮಕ್ಕಳು, ಮೊದಲಿಗೆ ಅಲ್ಲಿನ ಸ್ವಯಂಸೇವಾ ಶಿಕ್ಷಕಿ ಶ್ರೀವಿದ್ಯಾ ಪ್ರಶಾಂತ್ ಇವರ ನೇತೃತ್ವದಲ್ಲಿ ಕಲಿತ ಸರಸ್ವತಿ ವಂದನೆಯ ಹಾಡನ್ನು ಹಾಡಿ ನಂತರ ಶ್ರೀಮತಿ.ಗೀತಾ ಮೋಹನ್ ರವರ ನೃತ್ಯ ಸಂಯೋಜನೆಯ, ಕನ್ನಡಾಂಬೆಯ ಹಿರಿಮೆಯನ್ನು ಪ್ರತಿಬಿಂಬಿಸುವ "ಕನ್ನಡದ ರವಿ ಮೂಡಿ ಬಂದ" ಎಂಬ ಹಾಡಿಗೆ ಹೆಜ್ಜೆ ಹಾಕಿ ಕುಣಿದಾಗ ಹೆತ್ತವರ ಹಾಗೂ ಪ್ರೇಕ್ಷಕರ ಸಂತೋಷಕ್ಕೆ ಪಾರವೇ ಇಲ್ಲವೆಂಬಂತ್ತಿತ್ತು.

ಎಡಿಸನ್ ಶಾಲೆಯ ಮಕ್ಕಳು, ಅಲ್ಲಿನ ಸ್ವಯಂಸೇವಾ ಶಿಕ್ಷಕಿ ವಿದ್ಯಾಶ್ರೀ ಯವರ ನೇತೃತ್ವದಲ್ಲಿ ಪ್ರಸ್ತುತ ಪಡಿಸಿದ ಗೀತಗಾಯನವು ಎಲ್ಲರ ಗಮನ ಸೆಳೆಯಿತು. ಇಷ್ಟೇ ಅಲ್ಲದೆ ಲಕ್ಷ್ಮೀಶ ಶ್ರೀಧರ್ ಇವರ ನೇತೃತ್ವದಲ್ಲಿ ಸಾಕಾರಗೊಂಡ ಮ್ಯೂಸಿಕ್ ಫ್ಯೂಝನ್ ಹಾಗೂ ಶ್ರೀಮತಿ ಮೀರಾ ರಾಜಗೋಪಾಲರವರ "ನಾದ ಸ್ಕೂಲ್ ಆಫ್ ಮ್ಯೂಸಿಕ್" ನ ಮಕ್ಕಳು ನಡೆಸಿ ಕೊಟ್ಟ "ಮಂಕುತಿಮ್ಮನ ಕಗ್ಗ" ಸಂಗೀತ ಕಾರ್ಯಕ್ರಮಗಳು ನಾದಲೋಕವನ್ನೇ ಸೃಷ್ಟಿಸಿದವು. ಬಳಿಕ ನಮ್ಮ ಬೃಂದಾವನದ ಪ್ರತಿಭಾವಂತ ಕಲಾವಿದರು ನಡೆಸಿಕೊಟ್ಟ ರಾಜೇಂದ್ರ ಕಾರಂತ್ ರವರ ಪ್ರಸಿದ್ಧ ನಾಟಕ "ಮೈಸೂರು ಮಲ್ಲಿಗೆ" ಹಾಗೂ ಖ್ಯಾತ ನೃತ್ಯ ನಿರ್ದೇಶಕ ಡಾ.ಸಂಜಯ್ ಶಾಂತಾರಾಮ್ ರವರ "ಕರ್ನಾಟಕ ವೈಭವ" ನೃತ್ಯ ನಾಟಕವು ಎಲ್ಲರ ಮನಸೂರೆಗೊಂಡಿತು. ಹೀಗೆ ಹತ್ತು ಹಲವು ವರ್ಣರಂಜಿತ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸಿ, ಕಳೆದ ಎರಡು ವರ್ಷಗಳಿಂದ ಕಾರ್ಯನಿರ್ವಹಿಸಿದ "ಅಭಿಮಾನಿ" ತಂಡದ ಕೊಡುಗೆ ಶ್ಲಾಘನೀಯ.

**(ಮುಂದಿನ ಪುಟಕ್ಕೆ)**









ಯಾವುದೇ ಒಂದು ಸಂಘವು ತನ್ನ ಕಾರ್ಯವೈಖರಿಯನ್ನು ಪರಿಪೂರ್ಣವಾಗಿ ನಿರ್ವಹಿಸಬೇಕಾದರೆ ಅದಕ್ಕೆಂದೇ ಶ್ರಮಿಸುವ, ನಿಷ್ಠಾವಂತ, ಸೇವಾಮನೋಭಾವದ ಸದಸ್ಯರ ಕೊಡುಗೆ ಅಪಾರ. ಈ ನಿಟ್ಟಿನಲ್ಲಿ ಸಂಘದ ಅಧ್ಯಕ್ಷರಾದ ಡಾ.ಅಶೋಕ್ ಕಟ್ಟಿಮನಿ ಯವರು ತನ್ನ ಅಭಿಮಾನಿ ತಂಡದ ಎಲ್ಲಾ ಸದಸ್ಯರ ಸೇವೆಯನ್ನು ನೆನೆದು ಹಾರ್ದಿಕವಾಗಿ ಅಭಿನಂದಿಸಿದರು. ಅಂತೆಯೇ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಗೊಂಡ ಶ್ರೀಯುತ ಸತೀಶ್ ಹೊಸನಗರರವರ ನೇತ್ರತ್ವದ ಹೊಸ ಕಾರ್ಯಕಾರಿ ಸಮಿತಿ "ಸೌರಭ" ತಂಡದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಶುಭ ಹಾರೈಸಿದರು. ಬೃಂದಾವನ ಕನ್ನಡ ಕೂಟದ ದ್ವೈವಾರ್ಷಿಕ ಸಂಚಿಕೆಯಾದ "ವನವಾಣಿ"ಯ ಪ್ರತಿಗಳನ್ನು ಸದಸ್ಯರಿಗೆ ತಲುಪಿಸುವ ನಿರ್ಧಾರ ಕೈಗೊಳ್ಳಲಾಯಿತು. ನಂತರ ಮಕ್ಕಳೋತ್ಸವದ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು.





ಡಾ.ಅಶೋಕ್ ಕಟ್ಟಿಮನಿಯವರ ವಂದನಾರ್ಪಣೆಯ ಮೂಲಕ ಅಂದಿನ ಕಾರ್ಯಕ್ರಮಗಳು ತೆರೆಕಂಡು, ಆ ದಿನವನ್ನು ನಮ್ಮ ಕಲೆ ಹಾಗೂ ಸಂಸ್ಕೃತಿಯ ಇಣುಕು ನೋಟವನ್ನು ಮುಂದಿನ ಪೀಳಿಗೆಗೆ ತೋರಿಸಿ, ತಾಯಿ ಕನ್ನಡಾಂಬೆಯ ಸಿರಿತನವನ್ನು ನೆನೆದಂತಹ ಪುಣ್ಯ ದಿನವನ್ನಾಗಿಸಿದವು. ■

“ಮಕ್ಕಳಿಂದ ಪೂರಬ್ ಮತ್ತು ಪಶ್ಚಿಮ್ ಫ್ಯೂಜನ್ ಬ್ಯಾಂಡ್ ತುಂಬಾ ಚೆನ್ನಾಗಿತ್ತು. ಎಲ್ಲಾ ಮಕ್ಕಳು ತುಂಬಾ ಪ್ರತಿಭೆಯಿಂದ ವಾದ್ಯಗಳನ್ನು ನುಡಿಸಿದರು. ನುರಿತ ಸಂಗೀತಗಾರರ ಕಛೇರಿಗೆ ಹೋದ ಅನುಭವವಾಯ್ತು.”

**ಹರಿಪ್ರಸಾದ್ ಗುರುರಾಜ್**

“ಈ ಸಲ ನಮ್ಮ ಬೃಂದಾವನ ಮಕ್ಕಳ ಅದ್ಭುತ ಸಾಧನೆ ಎಂದರೆ ಅವರು ನಡೆಸಿ ಕೊಟ್ಟ ಫ್ಯೂಜನ್ ಕಾರ್ಯಕ್ರಮ. ಒಂದು ಕಡೆ ಸಾಕ್ಸೋಫೋನ್, ಪಿಟೀಲು, ಮೃದಂಗ ಮತ್ತೊಂದು ಕಡೆ ಕ್ಲಾರಿಯೋನೆಟ್, ಡ್ರಮ್ಸ್ ಹಾಗು ಪಿಯಾನೊ. ಹಂಸಧ್ವನಿ ರಾಗದಲ್ಲಿ “ಮಹಾಗಣಪತಿಮ್ ಭಜೆ” ಹಾಡಿನಿಂದ ಶುರುವಾಗಿ ಬಿಲಹರಿ ರಾಗದ ಚಿತ್ರ ಗೀತೆ “ಕನಸಲೂ ನೂರು ಬಾರಿ ಹಾಗು ಕಣಕಣವೆ ಶಾರದೆ” ನುಡಿಸಿ ಇಡೀ ರಂಗಮಂದಿರ ಹುಚ್ಚೆದ್ದು ಕುಣಿಯುವಂತೆ ಮಾಡಿದ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ “ಚಂದನ್ ಶೆಟ್ಟಿ ಹೇಳುವ ಹಾಗೆ.....ಅದ್ಭುತ! ಪರಮಾದ್ಭುತ!! ಶಹಭಾಷ್ !!!” ಇದೇ ತರಹ ಕಾರ್ಯಕ್ರಮವನ್ನು ನೋಡಲು ಬಯಸುವ ಬೃಂದಾವನದ ಸದಸ್ಯೆ,”

*ಉಷಾ ಪ್ರಸನ್ನ ಕುಮಾರ್*





**ವಾರ್ಷಿಕೋತ್ಸವ**

# ಅಮೆರಿಕದ ನ್ಯೂ ಜೆರ್ಸಿಯಲ್ಲಿ ಮೈಸೂರು ಮಲ್ಲಿಗೆಯ ಕಂಪು.



*ಅಶೋಕ್ ಕಟ್ಟಿಮನಿ*

ಕನ್ನಡದ ಹೆಸರಾಂತ ಪ್ರೇಮ ಕವಿ ಶ್ರೀ ಕೆ. ಎಸ್. ನರಸಿಂಹ ಸ್ವಾಮಿಯವರ ಮೈಸೂರು ಮಲ್ಲಿಗೆಯ ಕವನಗಳು ಹಲವಾರು ದಶಕಗಳಿಂದ ಕನ್ನಡಿಗರ ಮನದಾಳದಲ್ಲಿ ಅಚ್ಚಳಿಯದ ನೆನಪಾಗಿ ಉಳಿದಿವೆ. ಅವರ ಮೈಸೂರು ಮಲ್ಲಿಗೆಯ ಕವನಗಳಲ್ಲಿ, ಪ್ರೀತಿ -ಬಾಂಧವ್ಯ, ಮಧುರ ಸಂಬಂಧಗಳು ಮತ್ತು ಪ್ರೇಮಿಗಳ ಚಿತ್ರಣವಿದೆ. ಜೊತೆಗೆ ಅಲ್ಲಲ್ಲಿ ನವಿರು ಹಾಸ್ಯ, ಹಳ್ಳಿಯ ಸುಂದರ ಲೋಕ, ಎಷ್ಟು ಸಲ ಕೇಳಿದರೂ ಮತ್ತೆ ಮತ್ತೆ ಕೇಳಬೇಕೆಂಬ ಆಸೆ ಹುಟ್ಟಿಸುವ ಕನ್ನಡದ ಸೊಗಡು ಹಾಸು ಹೊಕ್ಕಾಗಿವೆ. ನಾವೆಲ್ಲ ಹುಟ್ಟಿ ಬೆಳೆದದ್ದೇ ಈ ಹಾಡುಗಳನ್ನು ಕೇಳುತ್ತಾ ಅಲ್ಲವೇ? ಇಂತಹ ಸುಂದರ ಕವನಗಳ ಹಿನ್ನೆಲೆಯಲ್ಲಿ ನಾಟಕವೊಂದನ್ನು ರಚಿಸಿ, ಕವಿಯೊಬ್ಬನ ಜೀವನ ಚರಿತ್ರೆಯನ್ನೂ, ಬದಲಾದ ಕಾಲವನ್ನೂ ನಾಟಕ ರೂಪದಲ್ಲಿ ಚಿತ್ರಿಸಿದ ಶ್ರೀ ರಾಜೇಂದ್ರ ಕಾರಂತ್, ಕಲಾ ಗಂಗೋತ್ರಿ ನಾಟಕ ತಂಡ ಮತ್ತು ಡಾ. ರಾಜಾರಾಂ ರವರ ಪ್ರಯತ್ನ ಶ್ಲಾಘನೀಯ. ಮೈಸೂರು ಮಲ್ಲಿಗೆ ನಾಟಕ, ನೂರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡ ಯಶಸ್ವೀ ನಾಟಕ. ಶ್ರೀ ಮೈಸೂರು ಅನಂತಸ್ವಾಮಿ ಮತ್ತು ಶ್ರೀ ಸಿ. ಅಶ್ವಥ್ ರವರ ಮಧುರವಾದ ಸಂಗೀತ, ಸುಶ್ರಾವ್ಯ ಗಾಯನ ಪ್ರೇಕ್ಷಕರನ್ನು ಬೇರೊಂದು ಲೋಕಕ್ಕೆ ಕರೆದೊಯ್ಯುತ್ತವೆ.

ಕನ್ನಡದ ನೆಲದಿಂದ ದೂರವಿರುವ ನಮಗೆ ಅವಕಾಶ ಸಿಕ್ಕಾಗಲೆಲ್ಲ ಕನ್ನಡದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಆಸೆ. ನ್ಯೂ ಜೆರ್ಸಿ ಬೃಂದಾವನ ಕನ್ನಡ ಸಂಘ ಈ ದಿಸೆಯಲ್ಲಿ ಕಳೆದ ಹದಿನಾಲ್ಕು ವರ್ಷಗಳಿಂದ ತಮ್ಮ ಪ್ರತಿ ಕಾರ್ಯಕ್ರಮಗಳಲ್ಲಿ ನಮಗೆಲ್ಲ ವೇದಿಕೆ ಒದಗಿಸುತ್ತ ಬಂದಿದೆ. ನಮ್ಮ ಆಸೆಗೆ ಪೂರಕವಾಗುವಂತೆ ಮೈಸೂರು ಮಲ್ಲಿಗೆ ನಾಟಕದಲ್ಲಿ ಎಪ್ಪತ್ತು -

**(ಮುಂದಿನ ಪುಟಕ್ಕೆ)**



ಎಂಭತ್ತಕ್ಕೂ ಹೆಚ್ಚು ಪಾತ್ರಧಾರಿಗಳು ಭಾಗವಹಿಸಿ, ರಂಗದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಪ್ರತಿಭೆ ಪ್ರದರ್ಶಿಸಲು ಇರುವ ಉತ್ತಮ ಅವಕಾಶ. ಹಿನ್ನಲೆಯಲ್ಲಿ ಹಳ್ಳಿಯ ಚಿತ್ರಣ, ಗಾಯಕರಿಗೆ ಹಾಡುವ ಅವಕಾಶ, ಅಚ್ಚುಕಟ್ಟಾದ ಸಂಭಾಷಣೆ ನಮಗೆ ಹೇಳಿ ಮಾಡಿಸಿದಂತಹ ನಾಟಕ ಎನಿಸಿತು. ಶ್ರೀ ರಾಜೇಂದ್ರ ಕಾರಂತ ಅವರನ್ನು ಸಂಪರ್ಕಿಸಿ ಮೈಸೂರು ಮಲ್ಲಿಗೆ ನಾಟಕ ಮಾಡುವ ನಮ್ಮ ಹಂಬಲ ತಿಳಿಸಿದಾಗ ತುಂಬು ಹೃದಯದಿಂದ ಅನುಮತಿಸಿ ಉತ್ತೇಜಿಸಿದರು. ಒಂದು ವರ್ಷದಿಂದ ಬೃಂದಾವನದ ಕಾರ್ಯಕ್ರಮವೊಂದರಲ್ಲಿ ಈ ನಾಟಕವನ್ನು ಅಭ್ಯಾಸ ಮಾಡಿ ಪ್ರದರ್ಶಿಸಬೇಕೆಂದು ಎಷ್ಟೇ ಪ್ರಯತ್ನಪಟ್ಟರೂ ನಮ್ಮ ಆಸೆ ಕೈಗೂಡಲೇ ಇಲ್ಲ. ಕಳೆದ ಡಿಸೆಂಬರ್ ತಿಂಗಳ ವಾರ್ಷಿಕೋತ್ಸವ ಮತ್ತು ಮಕ್ಕಳ ದಿನಾಚರಣೆ ಕಾರ್ಯಕ್ರಮ, ಹೇಗಾದರೂ ಮಾಡಿ ಈ ನಾಟಕವನ್ನು ಪ್ರದರ್ಶಿಸಲೇಬೇಕೆಂಬ ಹಂಬಲ ನನ್ನದು. ನಾಟಕಗಳಲ್ಲಿ ಸಾಕಷ್ಟು ಆಸಕ್ತಿ ಇರುವ ಶ್ರೀ ಉಮೇಶ ಜೋಯಿಸರನ್ನು ಕೇಳಿದಾಗ ಅವರ ಕಾರ್ಯಕ್ರಮಗಳ ಮಧ್ಯೆ ಬಿಡುವು ಸಿಗಲಾರದು ಎಂದು ತಿಳಿಯಿತು. ಆರು ವಾರಗಳಲ್ಲಿ ಎರಡು ಗಂಟೆಗಳ ನಾಟಕವನ್ನು ಮೂವತ್ತು ನಲವತ್ತು ಕಲಾವಿದರೊಂದಿಗೆ ಪ್ರದರ್ಶಿಸಬಹುದು ಎನ್ನುವುದನ್ನು ಊಹಿಸಲೂ ಅಸಾಧ್ಯ. ಅದರೊಂದಿಗೆ ಇಲ್ಲಿನ ಅನೇಕರಿಗೆ ನಾಟಕಗಳಲ್ಲಿ ಭಾಗವಹಿಸಿ ಅಭ್ಯಾಸವಿಲ್ಲ. ಆಗ ನಮ್ಮ ನೆರವಿಗೆ ಬಂದವರೇ ಮೈಸೂರಿನ ಶ್ರೀ ಗೋವಿಂದನ್.

ಮೈಸೂರಿನ ರಂಗಾಯಣದ ನಾಟಕಗಳಲ್ಲಿ ಪಾತ್ರವಹಿಸಿ, ದೇಶಾದ್ಯಂತ ನಾಟಕ ಪ್ರದರ್ಶಿಸಿದ ಶ್ರೀ ಗೋವಿಂದನ್, ನಾಟಕದ ಮೂಲ ಉದ್ದೇಶಕ್ಕೆ ಧಕ್ಕೆ ಬರದಂತೆ ನಾಟಕದ ಅವಧಿಯನ್ನು ಅರವತ್ತು ನಿಮಿಷಗಳಿಗೆ ಇಳಿಸುವ ಬಗ್ಗೆ ಹಲವಾರು ಸಲಹೆ ಕೊಟ್ಟರು. ಈ ಎಲ್ಲಾ ಸಲಹೆಗಳೊಂದಿಗೆ ಸರಿತಾ, ಸುಜಯ ಮತ್ತು ನಾನು ಹಲವಾರು ಬಾರಿ ಚರ್ಚಿಸಿದಾಗ ನಾಟಕ ನಮಗೆ ಬೇಕೆನಿಸಿದಂತೆ ಒಂದು ರೂಪ ಪಡೆದುಕೊಂಡಿತು. ಕೊನೆಗೆ ಸರಿತಾ ಸಾಕಷ್ಟು ಶ್ರಮಪಟ್ಟು ಹಸ್ತ ಪ್ರತಿಯನ್ನು ಸಿದ್ಧಪಡಿಸಿದಾಗ ಆದ ಸಂತಸ ಅಷ್ಟಿಷ್ಟಲ್ಲ.

ಇನ್ನು ನಾಟಕದ ಪಾತ್ರಧಾರಿಗಳನ್ನು ಗುರುತಿಸುವ ಕೆಲಸ. ಅಮೇರಿಕದ ದೈನಂದಿನ ಕೆಲಸಗಳ ಒತ್ತಡಗಳ ಮಧ್ಯೆ ಅತ್ಯಂತ ಕಡಿಮೆ ಅವಧಿಯಲ್ಲಿ ನಾಟಕದ ಸಂಭಾಷಣೆಗಳನ್ನು ಅಭ್ಯಾಸ ಮಾಡಿ ರಿಹರ್ಸಲ್ ಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಮೈಸೂರು ಮಲ್ಲಿಗೆ ಯಂತಹ ನಾಟಕದಲ್ಲಿ ಭಾಗವಹಿಸಲು ಸಾಕಷ್ಟು ಧೈರ್ಯ ಬೇಕು. ನಮಗೆ ಮುಖ್ಯವಾಗಿ ಬೇಕಾಗಿದ್ದು ಎರಡು ಕವಿ ದಂಪತಿಗಳ ಜೋಡಿ. ಒಂದು ಯುವ ದಂಪತಿಗಳ ಜೋಡಿ, ಮತ್ತೊಂದು ವೃದ್ಧ ದಂಪತಿಗಳ ಜೋಡಿ. ಈ ಎರಡೂ ಜೋಡಿಗಳು ಸಾಕಷ್ಟು ಅಭ್ಯಾಸ ಮಾಡಬೇಕು. ನಿಜ ಜೀವನದ ದಂಪತಿಗಳು ಈ ಪಾತ್ರ ವಹಿಸಿದರೆ ಪ್ರೇಮಕವಿ, ಶ್ರೀ ಕೆ. ಎಸ್. ನ - ರವರ ಮೈಸೂರು ಮಲ್ಲಿಗೆಯ ಮೂಲ ಉದ್ದೇಶಕ್ಕೆ ಒಂದು ಸುಂದರ ಉದಾಹರಣೆಯಾಗಬಲ್ಲದು. **(ಮುಂದಿನ ಪುಟಕ್ಕೆ)**





**ಮುಂದುವರೆದುದು....**

ಸರಿತಾ ಮತ್ತು ಅಹೀಶ್ ವೃದ್ಧ ಕವಿ ದಂಪತಿಗಳಾದರೆ, ದೀಪ್ತಿ ಮತ್ತು ವಿನೋದ್ ಯುವ ಕವಿ ದಂಪತಿಗಳ ಪಾತ್ರದ ಜವಾಬ್ದಾರಿ ಒಪ್ಪಿಕೊಂಡರು. ನಾಟಕದ ಇನ್ನೊಂದು ಮುಖ್ಯ ಪಾತ್ರ ಬಳೆಗಾರ ಚೆನ್ನಯ್ಯನದು. ಮೂಲ ನಾಟಕದಲ್ಲಿ ರಾಜೇಂದ್ರ ಕಾರಂತ್ ರವರೇ ಬಹಳಷ್ಟು ಸಲ ನಟಿಸಿದ ಪಾತ್ರ. ಸುಜಯಾ, ಸರಿತಾ ನೀವೇ ಮಾಡಿ ಎಂದು ನನಗೆ ಹೇಳಿದಾಗ, ಒಂದು ಕ್ಷಣ ಅಳುಕಾದರೂ ಖುಷಿಯಿಂದ ಒಪ್ಪಿಕೊಂಡೆ. ನಾಟಕದಲ್ಲಿ ಮೂರು ತಲೆಮಾರು ಉದ್ದಕ್ಕೂ ಬರುವ ಬಳೆಗಾರ ಚೆನ್ನಯ್ಯ ಕಾಲಾತೀತ.

ಮೈಸೂರು ಮಲ್ಲಿಗೆ ನಾಟಕಕ್ಕೆ ಅದರಲ್ಲಿರುವ ಸುಮಧುರ, ಮನಸ್ಸಿಗೆ ತಟ್ಟುವ ಗೀತೆಗಳೇ ಜೀವಾಳ. ನಾಟಕದ ಪ್ರತಿಯೊಂದು ದೃಶ್ಯಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಹಾಡುಗಳನ್ನು ಪೋಣಿಸ ತೊಡಗಿದೆವು. ಈ ಹಾಡುಗಳನ್ನು ನಾಟಕದ ಹಿನ್ನಲೆಯಲ್ಲಿ ಹಾಡಲು ನಮ್ಮ ನ್ಯೂಜೆರ್ಸಿಯ ಸುಮಧುರ ಹಾಡುಗಾರರಾದ ಶ್ರೇಯಸ್ ಮತ್ತು ವೈಷ್ಣವಿ ಸಂತಸದಿಂದ ಒಪ್ಪಿಕೊಂಡರು. ನಾಟಕದೊಂದಿಗೆ ಹಿನ್ನೆಲೆಯಲ್ಲಿ ಇಂಪಾದ ಹಾಡುಗಳನ್ನು ಕೇಳಿದಾಗ - ಬೇರೊಂದು ಲೋಕಕ್ಕೆ ಕರೆದೊಯ್ದ ಅನುಭವ. ಇತರ ಪಾತ್ರಗಳಿಗೆ ಸವಿತಾ ರಾವ್, ಹರೀಶ್ ಮರಿಯಪ್ಪ, ಕೃಷ್ಣ ಪ್ರಸಾದ್, ರಘುರಾಮ ರಾಯಸಮ್, ಸ್ಪಂದನ, ಆಕಾಂಕ್ಷಾ ಅರುಣ್, ಕೊನೆಯ ಘಳಿಗೆಯಲ್ಲಿ, ಉಷಾ ಪ್ರಸನ್ನ, ರೋಹಿಣಿ, ಲತಾ ಮತ್ತು ಶ್ರೀನಿವಾಸ್ ನಟಿಸಿದ್ದು ನೋಡಿದರೆ ನಮ್ಮೊಳಗಿರುವ ನಟ, ಪಾತ್ರ ಎಷ್ಟೇ ಚಿಕ್ಕದಾಗಿರಲಿ ಮನಸ್ಸು ಕೊಟ್ಟು ಅದರಲ್ಲಿ ಜೀವ ತುಂಬಿಸಲು ಹುರಿದುಂಬಿಸಿಯಾನು. ಎರಡು ಹಾಡುಗಳಿಗೆ ನೃತ್ಯ ಸಂಯೋಜನೆಯ ಜವಾಬ್ದಾರಿ ಹೊತ್ತ ದೀಪ್ತಿ ವಿನೋದ್, ಸವಿತಾ ಆನಂದ್ ಮತ್ತು ಅಮೃತ ರಮೇಶ್ ಸಾಕಷ್ಟು ಶ್ರಮವಹಿಸಿ ಕೊರಿಯಾಗ್ರಾಫ್ ಮಾಡಿದರು. ಅತ್ಯಂತ ಕಡಿಮೆ ಅವಧಿಯಲ್ಲಿ ಹಾಡಿಗೆ ತಕ್ಕಂತೆ ನೃತ್ಯ ಕಲಿತು ಪ್ರದರ್ಶಿಸಿ ನಮ್ಮ ಮನಸೂರೆಗೊಂಡ ಬೃಂದಾವನದ ಬೆಡಗಿಯರನ್ನು ಮತ್ತು ಹಳ್ಳಿಯ ವೇಷಭೂಷಣಗಳಲ್ಲಿ ರಂಜಿಸಿದ ಅರ್ಚನಾ-ಸರತ್, ಸಹನಾ-ಅರುಣ, ಅರ್ಚನ- ಫಣಿರಾಜ್ ಮತ್ತು ಉಮಾ-ರಘು ರಾಯಸಂ ದಂಪತಿಗಳನ್ನು ಎಲ್ಲರೂ ಹಾರೈಸಿ ಹೊಗಳಿದರು. ನಾಲ್ಕು ವಾರಗಳ ಈ ನಾಟಕದ ಅಭ್ಯಾಸಕ್ಕಾಗಿ ತಮ್ಮ ಮನೆಯನ್ನು ಪೂರ್ತಿಯಾಗಿ ಬಿಟ್ಟುಕೊಟ್ಟ ದೀಪ್ತಿ-ವಿನೋದ್, ಅನಿಲ್-ಲಕ್ಷ್ಮಿಗೆ ನಾವು ಅತ್ಯಂತ ಆಭಾರಿ.

**(ಮುಂದಿನ ಪುಟಕ್ಕೆ)**







**ಮುಂದುವರೆದುದು....**

ನಾಟಕವೊಂದು ಯಶಸ್ವಿಯಾಗಲು ಬೇಕಾಗುವ ಬಂಡವಾಳವೇ ದೃಶ್ಯಕ್ಕೆ ತಕ್ಕಂತಹ ಪ್ರಾಪ್ಸಗಳು , ಹಿನ್ನೆಲೆಯಲ್ಲಿನ ದೃಶ್ಯಚಿತ್ರಗಳು. ಸರಿತಾ ಮತ್ತು ಅಹೀಶ್ ಇದಕ್ಕಾಗಿ ಪಟ್ಟ ಶ್ರಮ ಶ್ಲಾಘನೀಯ. ದೃಶ್ಯಕ್ಕೆ ಬೇಕಾದ ಪ್ರಾಪ್ಸ್ ಗಳನ್ನು ಬಹಳಷ್ಟು ಮುತುವರ್ಜಿಯಿಂದ ಹೊಂದಿಸಿದ ಅವರ ಸಂಯಮವನ್ನು ಅಭಿನಂದಿಸಲೇಬೇಕು.


ಪಾತ್ರಗಳೆಲ್ಲ ತಮಗೆ ಬೇಕಾದ ವೇಷಭೂಷಣಗಳನ್ನು ಕುರಿತಾಗಿ ಚರ್ಚಿಸಿ ಹೊಂದಿಸಿಕೊಂಡು, ತಮ್ಮ ಪಾತ್ರಗಳು ಸೊಗಸಾಗಿ ಮೂಡಿ ಬರುವಂತೆ ನೋಡಿಕೊಂಡರು. ಬಳೆಗಾರ ಚೆನ್ನಯ್ಯನ ನನ್ನ ವೇಷಭೂಷಣಗಳಿಗೆ ಬೇಕಾದ ರುಮಾಲು, ಬಳೆಗಳ ಗೊಂಚಲು, ಬಿಳಿಯ ಮೀಸೆ ಗಡ್ಡ ಇವುಗಳೆಲ್ಲವನ್ನೂ ಹುಡುಕಿ ಪಾತ್ರಕ್ಕೆ ತಕ್ಕಂತೆ ಹೊಂದಿಸಿ ಕೊಂಡದ್ದನ್ನು ಬರೆಯುತ್ತಾ ಹೋದರೆ ಅದೇ ಒಂದು ಲೇಖನವಾದೀತು.

ಈ ನಾಟಕ ಪ್ರದರ್ಶಿಸಲು ಅವಕಾಶವಿತ್ತ ಅಭಿಮಾನಿ ತಂಡಕ್ಕೆ ನಮ್ಮೆಲ್ಲರ ಕೃತಜ್ಞತೆಗಳು. ನ್ಯೂಜೆರ್ಸಿಯಲ್ಲಿ ಇಂತಹ ಟ್ಯಾಲೆಂಟ್ ಇರುವುದು ಹೆಮ್ಮೆಯ ವಿಷಯ. ಕೇವಲ ಆರು ವಾರಗಳಲ್ಲಿ ಮೈಸೂರು ಮಲ್ಲಿಗೆಯಂತಹ ನಾಟಕವನ್ನು ಪ್ರದರ್ಶಿಸಿದ ಬೃಂದಾವನ ಸದಸ್ಯರ ಪ್ರಯತ್ನ ಶ್ಲಾಘನೀಯ. ■

**“ ಶ್ರೀ ಕೆ. ಸ್. ನರಸಿಂಹ ಸ್ವಾಮಿಯವರ ಜೀವನ ಚರಿತ್ರೆಯನ್ನು ಕಾಲ್ಪನಿಕವಾಗಿ ಮೈಸೂರು ಮಲ್ಲಿಗೆಯ ಮೂಲಕ ಕಂಪನ್ನು ಮನೋಜ್ಞವಾಗಿ ಪಸರಿಸಿದ ನಾಟಕ ತಂಡಕ್ಕೆ ತುಂಬ ಧನ್ಯವಾದಗಳು . ಅವರ ಜೀವನದ ವಿವಿಧ ಘಟ್ಟಗಳನ್ನು ಸಂಗೀತದ ಧಾರೆಯೊಡನೆ ಬೆರೆಸಿ ಅದನ್ನು ಪ್ರದರ್ಶಿಸಿದ ರೀತಿ ಹಾಗು ದೀಪ್ತಿ , ವಿನೋದ್ , ಅಹೀಶ್ , ಸರಿತಾ , ಅಶೋಕ್ ಹಾಗು ಮತ್ತೆಲ್ಲರ ಅಭಿನಯ ಬಹಳ ಕಾಲ ನೆನಪಿನಲಿ ಉಳಿಯುವಂತಹದು. ”**

**ರಾಘವೇಂದ್ರ ಕುಂದಲಗುರ್ಕಿ**







ವಾರ್ಷಿಕೋತ್ಸವ

# *ಕರ್ನಾಟಕ ವೈಭವದ ಸುಂದರ ಅನುಭವ*




**ಅಮೃತ ಲಕ್ಷೀಶನ್**

*ಕನ್ನಡ ಅನುವಾದ:*
**ರಘುರಾಂ ರಾಯಸಂ**


ಡಾ. ಸಂಜಯ್ ಶಾಂತಾರಾಮ್‌ರವರ ನಿರ್ದೇಶನದಲ್ಲಿ ಮೂಡಿಬಂದಿರುವ "ಕರ್ನಾಟಕ ವೈಭವ" ಕರ್ನಾಟಕವನ್ನು,ನಮ್ಮ ಐತಿಹಾಸಿಕ ಪರಂಪರೆಯನ್ನು, ಕನ್ನಡದ ಸಂಸ್ಕೃತಿಯನ್ನು ಸುಂದರವಾಗಿ ಪ್ರದರ್ಶಿಸುವ ನೃತ್ಯ ನಾಟಕ, ಒಂದು ಅತ್ಯದ್ಭುತ ನಿರ್ಮಾಣ.. ಭರತನಾಟ್ಯಂ, ಕೂಚಿಪುಡಿ, ಕಥಕ್, ಕಮ್ಸಾಲೆ, ಡೋಲು ಕುಣಿತ, ಜನಪದ ಮತ್ತು ಕೋಲಾಟಗಳನ್ನು ಉಪಯೋಗಿಸಿ, ಕರ್ನಾಟಕದ ಇತಿಹಾಸವನ್ನು ಸಾರುವ ಈ ನೃತ್ಯನಾಟಕದಲ್ಲಿ ಪಾಲ್ಗೊಳ್ಳುವ ಯೋಗ ಇತ್ತೀಚೆಗೆ ನಮಗೆ ಕೂಡಿ ಬಂತು. ಬೃಂದಾವನ ತಂಡ ಮತ್ತು ಡಾ. ಸಂಜಯ್ ಅವರ ಸಹಕಾರದಲ್ಲಿ ಈ ನೃತ್ಯ ನಾಟಕವನ್ನು ನ್ಯೂಜೆರ್ಸಿಗೆ ತರಲಾಯಿತು. ಎಲ್ಲಾ ನರ್ತಕ/ನರ್ತಕಿಯರೂ ಬೃಂದಾವನದ ಸದಸ್ಯರು/ಅವರ ಮಕ್ಕಳು ಎನ್ನುವುದೇ ವಿಶೇಷ.



ವಿಜೃಂಭಿತ ಪುಷ್ಪಾಂಜಲಿಯೊಂದಿಗೆ ಪ್ರಾರಂಭವಾದ ಈ ನಾಟಕದಲ್ಲಿ ನಿರೂಪಕರಾದ ಸರ್ವ ಸಾಕ್ಷಿ ಮತ್ತು ನವ ಅವರು ನಮ್ಮನ್ನು ಕರ್ನಾಟಕದ ವೈಭವೋಪೇರಿತ ಇತಿಹಾಸದ ಹಾದಿಯಲ್ಲಿ ಕರೆದೊಯ್ದರು. ಹೊಯ್ಸಳ ಸಾಮ್ರಾಜ್ಯ ಹಾಗೂ ಅದರ ಶ್ರೀಮಂತ ವಾಸ್ತುಶೈಲಿಯನ್ನು ಪರಿಚಯಿಸುವ ಮೊದಲಂಕದಲ್ಲಿ, ಹೊಯ್ಸಳರ ರಾಣಿ - ನಾಟ್ಯ ವಿಶಾರದೆ ಶಾಂತಲೆಯ ನೃತ್ಯದ ವೈಭವ ಹೇಳತೀರದು. ರಾಣಿ ಶಾಂತಲೆಯು ಹೊಯ್ಸಳರ ರಾಜ ಶ್ರೀ ವಿಷ್ಣುವರ್ಧನನ ಪತ್ನಿ. ಇವರ ಆಸೆಯಂತೇ ಬೇಲೂರಿನ ಶ್ರೀ ಚೆನ್ನಕೇಶವ, ಹಳೇಬೀಡಿನ ಹೊಯ್ಸಳೇಶ್ವರ ದೇವಸ್ಥಾನಗಳನ್ನು ಕಟ್ಟಲಾಯಿತು, ಅಲ್ಲಿಯ ಸುಂದರ ಶಿಲಾಬಾಲಿಕೆಯರನ್ನು, ಸ್ವತಃ ರಾಣಿ ಶಾಂತಲೆಯ, ಅವರ ನೃತ್ಯ ಭಂಗಿಗಳ ಆಧರಿಸಿ ಕೆತ್ತಲಾಗಿದೆ ಎಂದು ಹೇಳುತ್ತಾರೆ. (ಮುಂದಿನ ಪುಟಕ್ಕೆ)



ಎರಡನೇ ಅಂಕದಲ್ಲಿ ಈ ನಿರೂಪಣೆಯು ವಿಜಯನಗರ ಸಾಮ್ರಾಜ್ಯಕ್ಕೆ ಮುಂದುವರೆಯಿತು. ಈ ಅಂಕದಲ್ಲಿ, ಡಾ. ಸಂಜಯ್, ಸ್ವತಃ ಶ್ರೀ ಕೃಷ್ಣದೇವರಾಯರಾಗಿ ಪ್ರವೇಶಿಸಿ, ರಾಜನ ಮತ್ತು ಅವನ ಸಾಮ್ರಾಜ್ಯದ ಅದ್ಭುತ ಹಿರಿಮೆಗಳ ಬಗ್ಗೆ ಮಾತನಾಡುವ ಕುಚಿಪುಡಿ ನೃತ್ಯವನ್ನು ನಿರ್ವಹಿಸಿದರು. ಒಂದೆಡೆ ಸಂಜಯ್‌ರವರ ನೃತ್ಯ, ರಾಜನಾಗಿ ಅವರ ಗಾಂಭೀರ್ಯ, ಇನ್ನೊಂದೆಡೆ ರಾಜಾ ಕೃಷ್ಣದೇವರಾಯನ ಕಥೆ, ಎರಡೂ ನಮ್ಮಲ್ಲಿ ಹೆಮ್ಮೆಯನ್ನು ಮೂಡಿಸಿತು. ಮುತ್ತು ರತ್ನಗಳನ್ನು ಸೇರುಗಳಲ್ಲಿ ಮಾರುತ್ತಿದ್ದ ಆ ಕಾಲದಲ್ಲಿ ಕರ್ನಾಟಕದ ಹಿರಿಮೆ ದೇಶದಾಚೆಗೂ ಮೂಡಿತ್ತೆಂದು ಹೇಳುತ್ತಾರೆ.

ನಂತರ ನಾವು ಪ್ರಸಿದ್ಧ ಗುರುಗಳಾದ ಶ್ರೀ ಶಂಕರಾಚಾರ್ಯ, ಶ್ರೀ ಮಧ್ವಾಚಾರ್ಯ ಮತ್ತು ಶ್ರೀ ರಾಮನುಜಾಚಾರ್ಯರ ಬಗ್ಗೆ ಅರಿತೆವು, ಅವರಿಂದ ಸ್ಥಾಪಿಸಲ್ಪಟ್ಟ ವಿವಿಧ ಮಠಗಳ ಬಗ್ಗೆ ತಿಳಿದೆವು. ರಾಮನುಜಾಚಾರ್ಯರು ಕೃಷ್ಣನನ್ನು "ಚೆಲ್ವ ಪಿಳ್ಳೈ" ಎಂದು ಉಲ್ಲೇಖಿಸಿದ್ದರಂತೆ.. ಈ ಸನ್ನಿವೇಶಕ್ಕೆ ಡಾ. ಸಂಜಯ್ ಅವರು, “ಚೆಲುವಯ್ಯ ಚೆಲುವೋ” ಜಾನಪದ ಗೀತೆಯನ್ನು ಬಹಳ ಸುಂದರವಾಗಿ ಹೊಂದಿಸಿದ್ದಾರೆ. ಈ ಜನಪದ ಗೀತೆಗೆ ನಮ್ಮ ನೃತ್ಯಗಾರರು ಮಾಡಿದ ಕೋಲಾಟ ಬಹಳ ಅದ್ಭುತವಾಗಿದ್ದು, ನಮ್ಮನ್ನು ಕರ್ನಾಟಕಕ್ಕೇ ಕರೆದೊಯ್ದಿತು. ನಂತರ ಉಡುಪಿ ಮಠವನ್ನು ಪರಿಚಯಿಸಿದ ನಿರೂಪಕರು,ದಾಸ ಪರಂಪರೆಯನ್ನೂ, ಕನ್ನಡ ಸಾಹಿತ್ಯಕ್ಕೆ ಅವರ ಕೊಡುಗೆಯನ್ನು ಪರಿಚಯಿಸಿದರು. ಕನಕಾದಾಸ ಮತ್ತು ಕನಕನ ಕಿಂಡಿಯ ಕಥೆಯನ್ನು ಪ್ರಸ್ತುತಪಡಿಸುತ್ತಾ, “ಬಾಗಿಲನು ತೆರೆದು ಸೇವೆಯನ್ನು ಕೊಡೊ ಹರಿಯೆ” ಹಾಡಿಗೆ ಡಾ|ಸಂಜಯ್‌ರವರ ಭಾವನಾತ್ಮಕ ನೃತ್ಯ, ಹಲವರ ಕಣ್ಣನ್ನು ಮಂಜಾಗಿಸಿತು.

ಚಾಮುಂಡಿ ದೇವಿ ಮತ್ತು ಮಹಿಷಾಸುರ ಮರ್ದನದ ಉಲ್ಲೇಖವಿಲ್ಲದೇ ಕರ್ನಾಟಕದ ಇತಿಹಾಸ ಪೂರ್ಣವಾಗುವುದಿಲ್ಲ. ಮಹಿಷಾಸುರನಿಂದ ಉಂಟಾದ ವಿನಾಶ , ವಿಪತ್ತು, ಮಹಿಷಾಸುರ ಮತ್ತು ಚಾಮುಂಡಿ ತಾಯಿಯ ನಡುವಿನ ಹೋರಾಟದ ನೃತ್ಯ, ಹಾಗೂ ಕೊನೆಯಲ್ಲಿ ಮಹಿಷಾಸುರ ಮರ್ದನದ ದೃಶ್ಯವು ಪ್ರೇಕ್ಷಕರ ಮೈ ನವಿರೇಳಿಸಿತು.ಈ ದೃಶ್ಯವನ್ನು ಅತ್ಯಂತ ಸುಂದರವಾಗಿ ತೆರೆಗಿಳಿಸಲಾಗಿದೆ. (ಮುಂದಿನ ಪುಟಕ್ಕೆ)







ತದನಂತರ ಈ ಕಥೆಯು ನಮ್ಮನ್ನು ಮೈಸೂರು ದಸರಾ ಮೆರವಣಿಗೆಯತ್ತ ಕರೆದೊಯ್ಯಿತು. ರೋಮಾಂಚನ ಮತ್ತು ಸಂಭ್ರಮದ ವಾತಾವರಣ ಮೂಡಿಸುವ ಈ ಅಂಕದಲ್ಲಿ ಕೋಲಾಟ, ಡೋಲು ಕುಣಿತ, ಕಮ್ಸಾಲೆ ಮತ್ತು ಸುಗ್ಗಿ ಮುಂತಾದ ಕರ್ನಾಟಕದ ಹಲವಾರು ಜಾನಪದ ಕಲೆಗಳನ್ನು ಡಾ. ಸಂಜಯ್ ಅವರು ಪ್ರದರ್ಶಿಸಿದರು. ನೃತ್ಯವು ಅತ್ಯಂತ ವರ್ಣರಂಜಿತ ಮತ್ತು ಅದ್ದೂರಿಯಾಗಿತ್ತು.ಸ್ವತಃ ದಸರಾ ಮೆರವಣಿಗೆಯಲ್ಲಿ ಭಾಗವಹಿಸಿದಂತಿತ್ತು. ನಾವು ಮೈಸೂರು ಮಾಹಾರಾಜರ ಮತ್ತು ಕರ್ನಾಟಕದ ಶ್ರೇಷ್ಠ ತಾಂತ್ರಿಕತಜ್ಞ ಸರ್. ಎಂ. ವಿಶ್ವೇಶ್ವರಯ್ಯ ರವರ ಒಂದು ಕಿರು ಪರಿಚಯವನ್ನೂ ಕಂಡೆವು.ನಾಡಗೀತೆಯಾದ “ಜಯ ಹೇ ಕರ್ನಾಟಕ ಮಾತೇ” ಹಾಗೂ ಭರತನಾಟ್ಯ ಮತ್ತು ಕಥಕ್ ನಡುವಿನ ಜುಗಲ್ಬಂದಿಯಾದ ತಿಲ್ಲಾನ ನೃತ್ಯದೊಂದಿಗೆ ನಮ್ಮ ನಾಟಕವು ಮುಕ್ತಾಯಗೊಂಡಿತು. ಪ್ರೇಕ್ಷಕರಿಗೆ ಸಮಯ ಕಳೆದದ್ದೇ ಗೊತ್ತಾಗಲಿಲ್ಲ. ಅನೇಕ ಪ್ರೇಕ್ಷಕರ ಕಣ್ಣಲ್ಲಿ ಆನಂದಭಾಷ್ಪ ಮೂಡಿಬಂದಿತ್ತು.





ಕರ್ನಾಟಕ ವೈಭವದಲ್ಲಿ ನೃತ್ಯಗಾರ್ತಿಯಾಗಿ ಭಾಗವಹಿಸಿದ ನಾನು, ಕಲಿತಿದ್ದು ಅಪಾರ. ಡಾ. ಸಂಜಯ್ ಮತ್ತು ಅವರ ವಿದ್ಯಾರ್ಥಿನಿ ಸ್ನೇಹರವರು ನಮ್ಮೆಲ್ಲರಿಗೂ ನೃತ್ಯವನ್ನು ಕಲಿಸಿ, ನಮ್ಮ ಭಂಗಿಗಳನ್ನು, ಹೆಜ್ಜೆಗಳನ್ನು ತಿದ್ದಿದರು. ಕರ್ನಾಟಕ ವೈಭವವನ್ನು ಯಶಸ್ವಿಯಾಗಿ ಮಾಡುವಲ್ಲಿ ಎಲ್ಲರೂ ತೋರಿದ ಉತ್ಸಾಹ, ಹುಮ್ಮಸ್ಸು ನೋಡಲು ಭಾರಿ ಹೆಮ್ಮೆಯಾಗುತ್ತಿತ್ತು. ಅಭ್ಯಾಸದ ಸಮಯದಲ್ಲಿ ಒಂದೇ ಕುಟುಂಬದ ವಾತಾವರಣವಿದ್ದು, ಒಂದುಗೂಡಿ ಕಲಿತು, ಒಂದು ಅದ್ಭುತ ಪ್ರದರ್ಶನದ ಭಾಗವಾದ ಅನುಭವ ರೋಮಾಂಚಕವಾಗಿತ್ತು. ಕರ್ನಾಟಕ ವೈಭವದಲ್ಲಿ ತೋರಿಸಲಾದ ಕರ್ನಾಟಕದ ಶ್ರೇಷ್ಠತೆ ಮತ್ತು ನಮ್ಮ ಸಂಸ್ಕೃತಿಯ ಪ್ರದರ್ಶನ ಎಲ್ಲರಿಗೂ ಹೆಮ್ಮೆ ತಂದಿತು. ಶಾಂತಲೆಯ ಸೌಂದರ್ಯ, ಕೃಷ್ಣದೇವರಾಯರ ಗಾಂಭೀರ್ಯ, ಕನಕದಾಸನ ಭಕ್ತಿ, ಮಹಿಷಾಸುರ ಮರ್ಧಿನಿಯ ಪ್ರಬಲತೆ, ಮೈಸೂರು ದಸರಾ ಹಬ್ಬದ ವಾತಾವರಣ ನಮ್ಮೆಲ್ಲರ ಮನಸಿನಾಳಕ್ಕಿಳಿದವು. ಒಂದು ಪರಿಪೂರ್ಣ ನಾಟಕವಾದ "ಕರ್ನಾಟಕ ವೈಭವ"ವು ಅಲ್ಲಿದ್ದ ಪ್ರತಿಯೊಬ್ಬರ ಕನ್ನಡಿಗರ ಹೃದಯದಲ್ಲಿ ಬಹುಕಾಲ ಉಳಿಯುವಂತಹ ಪ್ರದರ್ಶನವಾಯಿತು. ಈ ನಾಟಕದ ಕರ್ತೃವಾದ ಡಾ|ಸಂಜಯ್ ರವರಿಗೂ,ನ್ಯೂ ಜೆರ್ಸಿಗೆ ತಂದ ಬೃಂದಾವನ ತಂಡಕ್ಕೂ ನಾವು ಚಿರಋಣಿ. ■

“ ಕರ್ನಾಟಕದ ವೈಭವವನ್ನು ಇಲ್ಲಿಯವರೆಗೆ ನಾವು ಓದಿದ್ದೆವು ಮತ್ತು ಕೇಳಿದ್ದೆವು ಆದರೆ ಅದರ ಅನುಭವವಿರಲಿಲ್ಲ. ಡಾ. ಸಂಜಯ್ ಶಾಂತಾರಾಂ ರವರ ಕರ್ನಾಟಕ ವೈಭವ ನೋಡಿದ ಮೇಲೆ ಕರ್ನಾಟಕದ ಅದ್ಭುತ ವೈಭವದದ ಅನುಭವವಾಯಿತು. ಈ ನೃತ್ಯ ರೂಪಕವನ್ನು ಡಾ. ಸಂಜಯ್ ಶಾಂತಾರಾಂ ರವರು ಬಹಳ ಸುಂದರವಾಗಿ ಸಂಯೋಜಿಸಿದ್ದಾರೆ. ಕರ್ನಾಟಕ ವೈಭವ ಇಲ್ಲಿಯವರೆಗೆ ನಾವು ಓದಿದ್ದೆವು ಮತ್ತು ಕೇಳಿದ್ದೆವು ಆದರೆ ಅದರ ಅನುಭವವಿರಲಿಲ್ಲ. ಡಾ. ಸಂಜಯ್ ಶಾಂತಾರಾಂ ರವರ ಕರ್ನಾಟಕ ವೈಭವ ನೋಡಿದ ಮೇಲೆ ಕರ್ನಾಟಕದ ಅದ್ಭುತ ವೈಭವದದ ಅನುಭವವಾಯಿತು. ಈ ನೃತ್ಯ ರೂಪಕವನ್ನು ಡಾ. ಸಂಜಯ್ ಶಾಂತಾರಾಂ ರವರು ಬಹಳ ಸುಂದರವಾಗಿ ಸಂಯೋಜಿಸಿದ್ದಾರೆ. ”

*ಸುಷ್ಮಾ ಪ್ರಸಾದ್*

“ ಕರ್ನಾಟಕ ವೈಭವ ಅಮೆರಿಕಾದಲ್ಲಿರುವ ನಮ್ಮ ಮಕ್ಕಳಿಗೆ ನಮ್ಮ ಕರ್ನಾಟಕ ರಾಜ್ಯದ ವೈಭವವನ್ನು ಪರಿಚಯ ಮಾಡಿಕೊಟ್ಟ ವಿವಿಧ ನೃತ್ಯಕಲೆಗಳ ಸಂಗಮವಿದ್ದ ಒಂದು ಮನರಂಜನೆಯುಕ್ತ ” ಕಾರ್ಯಕ್ರಮ.

*ಸವಿತಾ ಆನಂದ್*





ಹಿನ್ನೋಟ

# 'ನಮನ' ದ ಜೊತೆ ನಮ್ಮೆಲ್ಲರ ಪಯಣ



ಉಮಾ ಮೂರ್ತಿ

"ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ, ಬೆಳೆಯುತ್ತಾ ನಾವು ಅದನ್ನು ಅಲ್ಪಮಾನವನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೆ ವಿದ್ಯೆಯ ಕರ್ತವ್ಯವಾಗಬೇಕು." - ಕುವೆಂಪು

ಅದೊಂದು ಮಧ್ಯಾಹ್ನ ಕೃಷ್ಣ ಮಠದಲ್ಲಿ ಮಕ್ಕಳು ಭಗವದ್ಗೀತೆ ಪಠಿಸುತ್ತಿದ್ದರೆ, ಕೇಳುತ್ತಾ ಕುಳಿತಿದ್ದ ಭಕ್ತಾದಿಗಳಿಗೆ ಯಾವುದೋ ಗುರುಕುಲಕ್ಕೆ ಹೋದ ಅನುಭವ. ಏತನ್ಮಧ್ಯೆ ಸಂಗೀತದಲ್ಲಿ ಬರುವ ಅಪಶ್ರುತಿಯಂತೆ ಇಬ್ಬರು ಮಹಾನುಭಾವರು ಉಭಯಕೋಶಲೋಪರಿಯನ್ನು ಎಲ್ಲರಿಗೂ ಕೇಳುವಂತೆ ಗಟ್ಟಿಯಾಗಿ ಮಾತನಾಡುತ್ತಿದ್ದರು. ಬಹಳಷ್ಟು ಸಲ Please Maintain Silence ಎನ್ನುವ Board ಅವರ ಬಳಿಯೇ ಹಿಡಿದರೂ - ವಿಚಲಿತರಾಗದೆ ತಮ್ಮ ಸಂಭಾಷಣೆಯನ್ನು ಮುಂದುವರೆಸಿದರು. ತಿಳಿದೋ ತಿಳಿಯದೆಯೋ ನಾವೆಲ್ಲರೂ ಇದನ್ನೇ ಮಾಡುತ್ತೇವೆ ಎಂದೆನಿಸಿತು. ಹೌದಲ್ಲವೇ ಚಿತ್ರಮಂದಿರದಲ್ಲಿ ಮೌನವಾಗಿ ಕುಳಿತುಕೊಳ್ಳುವ ನಾವು ದೇವಸ್ಥಾನದ ಒಳಗೇಕೆ ಅಷ್ಟೊಂದು ಗದ್ದಲ ಮಾಡುತ್ತೇವೆ? ಆಗ ನೆನಪಿಗೆ ಬಂದಿದ್ದು ಯಾವಾಗಲೋ ಒಮ್ಮೆ ನೋಡಿದ ಕುವೆಂಪುರವರ ನಾಟಕ 'ಜಲಗಾರ'. ಆ ನಾಟಕದಲ್ಲಿ ಜಲಗಾರ ಶಿವ ಗುಡಿಗೆ ಹೋಗಿಬಂದ ರೈತನನ್ನು ಪ್ರಶ್ನಿಸುತ್ತಾನೆ "ಶಿವನನ್ನು ನೋಡಿದೆಯಾ?, ಶಿವನನ್ನು ತಂದೆಯಾ?" ಎಂದು. ನಾವೆಷ್ಟು ಸಲ ದೇವಸ್ಥಾನಕ್ಕೆ ಹೋಗಿಲ್ಲ? ಹೋದಷ್ಟು ಸಲ ಧ್ಯಾನಿಸಲು ಸಾಧ್ಯವಾಯಿತೇ? ಎನ್ನುವ ಚಿಂತನೆ ಜೊತೆ ಇನ್ನೊಮ್ಮೆ ಜಲಗಾರ ನಾಟಕವನ್ನು ಓದಲಾರಂಭಿಸಿದೆ.



ಓದುತ್ತ ಹೋದಂತೆ ಪ್ರತೀ ಪಾತ್ರಗಳಲ್ಲಿ ಕನ್ನಡ ಶಾಲೆಯ ಮಕ್ಕಳೇ ಕಾಣತೊಡಗಿದರು. ಆಗ ಬಂದ ಆಲೋಚನೆ ಡಿಸೆಂಬರ್ ೨೯ ರಸ ಋಷಿ ಕುವೆಂಪುರವರ ಜನ್ಮದಿನವೆಂಬುದು ಮತ್ತು ಅವರ ಕವಿತೆಗಳು ಸದಾಕಾಲ ನಮ್ಮೊಂದಿಗೆ ಉಳಿಯುವಂತೆ ಮಾಡಿದ ಗಾನ ಗಾರುಡಿಗ ಸಿ. ಅಶ್ವತ್ಥ್ ಅವರು ಜನಿಸಿದ್ದು ಹಾಗು ಅಗಲಿದ್ದು ಡಿಸೆಂಬರ್ ೨೯ ರಂದು ಎಂಬುದು. ಬೃಂದಾವನ ರಾಜ್ಯೋತ್ಸವ ಸಂದರ್ಭದಲ್ಲಿ ಇವರಿಗೆ ನಮಿಸುವುದು ನಮ್ಮ ಆದ್ಯ ಕರ್ತವ್ಯವೆನಿಸಿ, ನಮ್ಮ ಈಸ್ಟ್ ವಿಂಡ್ಸರ್ ಕನ್ನಡ ಶಾಲೆ ಶಿಕ್ಷಕ ವೃಂದ ಕುವೆಂಪು ನಾಟಕಗಳ ದೃಶ್ಯಮಾಲೆಗೆ ಶ್ರೀಕಾರ ಬರೆದರು.

ಮೊದಲ ಹೆಜ್ಜೆಯಾಗಿ, ಭಾಗವಹಿಸುತ್ತಿರುವ ೪೨ ಮಕ್ಕಳಲ್ಲಿ ೨೨ ಮಕ್ಕಳನ್ನು 'ನನ್ನ ಗೋಪಾಲ' ನಾಟಕಕ್ಕೂ, ಉಳಿದ ೨೦ ಮಕ್ಕಳನ್ನು 'ಬೆರಳ್ ಗೆ ಕೊರಳ್', 'ಮಹಾರಾತ್ರಿ' ಹಾಗು 'ಜಲಗಾರ' ನಾಟಕಗಳಲ್ಲಿ ತೊಡಗಿಸಿಕೊಂಡೆವು. ನೃತ್ಯ ಸಂಯೋಜಕರಾಗಿ ದೀಪ್ತಿ ವಿನೋದ್, ಲಕ್ಷ್ಮಿ ಅನಿಲ್, ಆರತಿ ದೀಪಕ್ ಜೊತೆಗೂಡಿದ್ದು, ರಾಜೇಶ್ ಆಚಾರ್ಯ ಮತ್ತು ಕಿರಣ್ ಜಾಡರ ಅವರ ರಂಗಸಜ್ಜಿಕೆ, ಹರಿತ ಭಾಸ್ಕರ್ ಅವರು - ತಯಾರಿಸಿದ ಸ್ಲೈಡ್ ಶೋ ಮತ್ತು ತಾಯಂದಿರು ಊಟದ ಜವಾಬ್ದಾರಿಯನ್ನು ತೆಗೆದುಕೊಂಡದ್ದು ಶಿಕ್ಷಕವೃಂದದ ಹೊರೆ ಕಡಿಮೆ ಮಾಡಿದಂತಾಯಿತು. ಸ್ಕ್ರಿಪ್ಟ್ ತಯಾರಿಯಲ್ಲಿ ಸರಳ ಕನ್ನಡದ ನಾಟಕ ಮಾಡುತ್ತಾ ಪುಟ್ಟ ಹೆಜ್ಜೆ ಇಟ್ಟಿರುವ ಪುಟ್ಟ ಮಕ್ಕಳು ಹಳೆಗನ್ನಡ ಸಂಭಾಷಣೆ ಕಲಿಯಲು ಸಾಧ್ಯವೇ ಎಂದುಕೊಳ್ಳುತ್ತಿರುವಾಗ, ಸಹಾಯಕ್ಕೆ ಬಂದವರು ತೀರ್ಥಹಳ್ಳಿಯ ಶ್ರೀಮತಿ ಇಂದಿರಾ ಮನೋಹರ್. ಸುಮಾರು ೭ ನಿಮಿಷಗಳ ಬೆರಳ್ ಗೆ ಕೊರಳ್ ನಾಟಕವನ್ನು ಸರಳ ಸಂಭಾಷಣೆಯಲ್ಲಿ ಬರೆದು ಕಳುಹಿಸಿದರು. ಅಭ್ಯಾಸಕ್ಕೆ ತಮ್ಮ ನಿವಾಸಕ್ಕೆ ಸ್ವಾಗತಿಸಿದ ದೀಪ್ತಿ ವಿನೋದ್, ದಿವ್ಯಾ ಭಾಸ್ಕರ್ ಹಾಗು ಉಷಾ ಪ್ರಸನ್ನ ಅವರಿಗೆ ಧನ್ಯವಾದಗಳು. ನಾಟಕದ ಅಭ್ಯಾಸ ಪ್ರಾರಂಭವಾಯಿತು.

ಮೂರು ವಾರಗಳ ಅಭ್ಯಾಸದ ನಂತರ ಪ್ರದರ್ಶನದ ದಿವಸ ಬಂದೇ ಬಿಟ್ಟಿತು. ನನ್ನ ಗೋಪಾಲದ ಮಕ್ಕಳ ಸಹಜತೆಗೆ ಅಭಿನಯದ ಅಭ್ಯಾಸವೇ ಬೇಡವಾಗಿತ್ತು. ಶ್ರೀ ಕೃಷ್ಣ ಹಾಗು ಗೋಪಾಲರ ಸ್ನೇಹ, ನಿಷ್ಕಳಂಕ ಪ್ರೀತಿಯಿಂದ ಪ್ರಾರಂಭವಾಗಿ **"ನೀನೆನ್ನ ಶಿವ ಭಕ್ತ ನೀನೆ ನಾನಾಗಿರುವೆ ನಾನೇ ನೀನಾಗಿರುವೆ"** .

**(ಮುಂದಿನ ಪುಟಕ್ಕೆ)**





**ಮುಂದುವರೆದುದು....**

-ಎಂದು ಶಿವನು ಜಲಗಾರನೊಂದಿಗೆ ಸಮೀಕರಿಸಿದೊಡನೆ, ಬಾ ಇಲ್ಲಿ ಸಂಭವಿಸು ನರ್ತನದೊಂದಿಗೆ 'ನಮನ' ಮುಕ್ತಾಯ - ಗೊಂಡಾಗ ಪ್ರೇಕ್ಷಕರು ಕರತಾಡನ ಮಾಡಿದರೆ, ಶಿಕ್ಷಕರ ಕಣ್ಣಂಚು ತೇವಗೊಂಡಿತ್ತು. ಇಂತಹ ರೋಮಾಂಚನಕಾರಿ ಪ್ರದರ್ಶನ ನೀಡಿದ ಮಕ್ಕಳನ್ನು ಸಮಯದ ಅಭಾವದಿಂದಾಗಿ ಪರಿಚಯಿಸಲಿಲ್ಲವಲ್ಲ ಎಂಬ ಕೊರಗು ಮನಸ್ಸಿನ ಮೂಲೆಯಲ್ಲಿ; ವಿಶೇಷವೆಂದರೆ ರಾಷ್ಟ್ರಕವಿ ಕುವೆಂಪು ಅವರ ಮರಿಮಗ ಸ್ಮಯ ರೆಡ್ಡಿ ಈ ನಾಟಕದಲ್ಲಿ ಭಾಗವಹಿಸಿದ್ದು. ಈ ದೇಶದಲ್ಲಿದ್ದು, ಪ್ರೇಕ್ಷಕರಿಗೆ ಕುವೆಂಪು ರವರ ಮಹಾನ್ ಕೃತಿಗಳನ್ನು ನೆನಪಿಸಿ, ಅಶ್ವತ್ಥ್ ರ ಕಂಠಸಿರಿಯನ್ನು ಮೆಲುಕು ಹಾಕಿಸಿ, ಕ್ಲಿಷ್ಟಕರವಾದ ಸಂಭಾಷಣೆಗಳನ್ನು ಸುಲಲಿತವಾಗಿ, ಭಾವಪೂರ್ಣವಾಗಿ ಕನ್ನಡಿಗರಿಗೆ ನೀಡಿ, ಮರೆತು ಹೋದ ಮೌಲ್ಯಗಳನ್ನು ನೆನಪಿಸಿದ ಈ ಮಕ್ಕಳಿಗೆಲ್ಲ ನಮ್ಮ ಶಿಕ್ಷಕವೃಂದದ ನಮನ. ■

"ಕುವೆಂಪು ರವರ ಮೂರು ನಾಟಕಗಳನ್ನು ಸಂಕ್ಷಿಪ್ತಗೊಳಿಸಿ ಬೃಂದಾವನದ ಕನ್ನಡ ಶಾಲೆಯ ಮಕ್ಕಳ ಕೈಯಲ್ಲಿ ಆಡಿಸಿದ್ದು ನಿಜಕ್ಕೂ ಶ್ಲಾಘನೀಯ. ಈ ನಾಟಕಗಳ ಮಧ್ಯೆ ಕುವೆಂಪು ರವರು ರಚಿಸಿದ, ಸಿ. ಅಶ್ವತ್ಥ್ ರವರು ರಾಗ ಸಂಯೋಜಿಸಿದ ಹಾಡುಗಳಿಗೆ ನೃತ್ಯಗಳನ್ನು ಅಳವಡಿಸಿದ್ದು, ಆ ಇಬ್ಬರು ಮಹಾನ್ ವ್ಯಕ್ತಿಗಳಿಗೆ ಸಲ್ಲಿಸಿದ ನಿಜವಾದ ನಮನ! ಈ ಮಕ್ಕಳು ತಮ್ಮ ಸಂಭಾಷಣೆಗಳನ್ನು ಕನ್ನಡದಲ್ಲಿ ಸುಲಲಿತವಾಗಿ ಹೇಳುವುದನ್ನು ಕೇಳಿ ಕರ್ಣಾನಂದವಾಯಿತು. ನಿರ್ದೇಶಕ ತಂಡ, ಆಡಿಯೋ/ವಿಡಿಯೋ ತಂಡ, ನೃತ್ಯ ಸಂಯೋಜನೆ ತಂಡಗಳಿಗೆ ಅಭಿನಂದನೆಗಳು." - **ಭಾಸ್ಕರ ತೈಲಗೇರಿ**

"ರಾಷ್ಟ್ರಕವಿ ಕುವೆಂಪುರವರು, 'ಜಲಗಾರ' ನಾಟಕದ ಮೊದಲ ದೃಶ್ಯದಲ್ಲಿ ಭೂದೇವಿಯು, ಉಷೆಯನ್ನು ಆಹ್ವಾನಿಸುವ ಬಗೆಯನ್ನು,

"ಮಬ್ಬಿನ ಮಂಜಿನ ಮುಸುಗನು ಎತ್ತಿ;
ಬಾರಾ ಉದಯಾಚಲವನು ಹತ್ತಿ;
ಹಸುರಿನ ಬನಗಳ ಮುದ್ದಿಸಿ ಬಾರ;
ಗಿರಿಶೃಂಗಗಳಾಲಿಂಗಿಸಿ ಬಾರ;
ಮಲಗಿಹ ಖಗಗಳ ಕರೆಯುತ ಬಾರ;
ಮಂದಾನಿಲನ ಎಬ್ಬಿಸಿ ಬಾರ;"

ಎಂದು ಪ್ರಕೃತಿಯ ಸುಂದರ ಹಂದರದಲ್ಲಿ ಉಷೆ ಹಾಗೂ ಭೂದೇವಿ ಬರುವ ಸೊಬಗನ್ನು ವಿಸ್ತಾರವಾಗಿ ಬಣ್ಣಿಸಿದ್ದಾರೆ. ಇದನ್ನು ಛಾಯಾಚಿತ್ರದಲ್ಲಿ ವಿವರಿಸುವಂತಿದ್ದರೆ, 'time-lapse' mode ನಲ್ಲಿ ಈ ಸೌಂದರ್ಯ ಕಣ್ಣ ಮುಂದೆ ಸುಳಿದಂತಿದೆ ಎನ್ನಬಹುದು. ನಾಟಕದಲ್ಲಿ ಭೂದೇವಿ ಪಾತ್ರ ವಹಿಸಿದ ಕಂದಮ್ಮ, ಉಷಃ ಕಾಲದ ಪ್ರತಿಕ್ಷಣವನ್ನು ರಾಗಮಾಲಿಕೆಯಲ್ಲಿ ಪೋಣಿಸಿ, ಇಂಪಾಗಿ ಹಾಡಿ ಬಣ್ಣಿಸಿದಳು. ಅಂತೆಯೇ ಸಂಜೆಗೀತೆಯಲ್ಲಿ,

"ದೂರದಿಂದ ಮೆಲುನಡೆಯಲಿ ಸಂಜೆವೆಣ್ಣು ಬರುವಳು-ಬಹು ದೂರದಿಂದ ಬರುವಳು....

ದಿನದ ಬೇಗೆಯಿಂದ ಬೆಂದು, ಬಲು ಬಳಲಿಹ ಭೂಮಿಗೆ-ವಿಶ್ರಾಂತಿಯಿತ್ತು ಬರುವಳು; ನಲಿನಲಿಯುತ ಮೆಲು ನಡೆಯಲಿ ಬರುವಳು" ಎಂದು ಮುಂಜಾನೆಯಿಂದ ಮುಸ್ಸಂಜೆಯವರೆಗಿನ ಪರಿವರ್ತನೆಯನ್ನು ಅಷ್ಟೇ ಇಂಪಾಗಿ ವಿವರಿಸಿದಳು. ನಾಟಕಕ್ಕಾಗಿ ಹಾಡು ಕಲಿಸುವ ನೆಪದಲ್ಲಿ, ನಮಗೆಲ್ಲ ಈ ಕವನಗಳನ್ನು ಕಲಿಯುವ ಉತ್ತಮ ಅವಕಾಶ ದೊರಕಿಸಿಕೊಟ್ಟಿತು. ಪ್ರತಿ ಸಲ ಈ ಹಾಡುಗಳನ್ನು ಓದಿ ಹಾಡುತ್ತಿದ್ದಂತೆ, "Smell the roses" ಎನ್ನುವಂತೆ, ನಮ್ಮೆಲ್ಲರಿಗೂ ನಮ್ಮ ಸುತ್ತಮುತ್ತಲಿನ ಪ್ರಕೃತಿ ಸೌಂದರ್ಯವನ್ನು ಪ್ರತಿಕ್ಷಣ ವನ್ನು ಆನಂದಿಸಬೇಕು ಎನ್ನುತ್ತಿದೆಯೋ ಅಂತ ಅನ್ನಿಸುತ್ತಿತ್ತು." - **ಅರ್ಚನಾ ಆಚಾರ್ಯ**



“ಅಮೆರಿಕಾದಲ್ಲಿ ನೆಲೆಸಿದ ನಾವು ನಮ್ಮ ಮಕ್ಕಳನ್ನು ಭಾರತೀಯ ಉಡುಗೆಯಲ್ಲಿ ನೋಡುವುದೆಂದರೆ ಸಂತೋಷವೆನಿಸುತ್ತದೆ. ಅದಕ್ಕೆ ಸಿಕ್ಕ ಸದವಕಾಶ ಎಂದರೆ ಈ ನಾಟಕದ ವಸ್ತ್ರವಿನ್ಯಾಸ ನಿರ್ದೇಶನ. ಪಾತ್ರಗಳಿಗೆ  ತಕ್ಕಂತೆ ಪೋಷಾಕುಗಳನ್ನು ಸೂಚಿಸಿದಾಗ, ಶಾಲೆಯ ಪೋಷಕರು ಒಬ್ಬರಿಗೊಬ್ಬರು ಸಹಕರಿಸುವ ಮೂಲಕ ನಾಟಕದ ಯಶಸ್ಸಿಗೆ ಕಾರಣರಾದರು”. - **ರೋಹಿಣಿ ಅನಂತರಾಮ್**



“ಈಸ್ಟ್ ವಿಂಡ್ಸರ್ ಶಾಲೆಯ  ಸುಮಾರು ೨೦-೨೪ ಮಕ್ಕಳು ರಾಷ್ಟ್ರಕವಿ ಕುವೆಂಪುರವರ  'ನನ್ನ ಗೋಪಾಲ' ನಾಟಕದಲ್ಲಿ ಭಾಗವಹಿಸಿದ್ದರು. ಪ್ರತಿಯೊಂದು ಮಗುವಿಗೂ ನಾಟಕದಲ್ಲಿ ಸರಳವಾದ ಕನ್ನಡದಲ್ಲಿ ಸಂಭಾಷಣೆ ಮಾಡಲು  ತಿಳಿಸಿಕೊಟ್ಟಾಗ, ಮಕ್ಕಳಿಗೂ “ನಾನು ಮಾಡಬಲ್ಲೆ” ಎಂಬ  ವಿಶ್ವಾಸ ಮೂಡಿತು.”

**- ಶುಭ ಕೋಪೆ**

“'ನಮನ'ದಂತಹ ನಾಟಕಮಾಲಿಕೆ ಮಕ್ಕಳಿಗೆ ಚರಿತ್ರೆ/ಪುರಾಣದ ಬಗ್ಗೆ ತುಂಬಾ ಕುತೂಹಲ ಮೂಡಿಸುತ್ತದೆ. ಇದುವರೆಗೂ ಕೇಳದಿರುವ ಕಥೆಗಳನ್ನು ಹೇಳುವುದರ ಜೊತೆಗೆ, ಇನ್ನೂ ಹೆಚ್ಚು ತಿಳಿಯಬೇಕು ಎನ್ನುವ ಭಾವನೆಯನ್ನು ಮನಸ್ಸಿನಲ್ಲಿ ಮೂಡಿಸುತ್ತದೆ. ಮಂತ್ರಮುಗ್ಧಳಾಗಿ  'ಬೆರಳ್ ಗೆ ಕೊರಳ್ ' ನಾಟಕ ನೋಡಿದ ನನ್ನ ಪುಟ್ಟ ಮಗಳು, ಏಕಲವ್ಯನ ಕುರಿತು ಕಥೆ ಪುಸ್ತಕ ಕೊಂಡುಕೊಳ್ಳುವಂತೆ ಕೇಳಿದ್ದೇ ಇದಕ್ಕೆ ಸಾಕ್ಷಿ”.

**- ಆರತಿ ದೀಪಕ್**



“'ನಮನ' ನಾಟಕಮಾಲಿಕೆಯ ಪ್ರಸ್ತುತಿಯಲ್ಲಿ ನಾನು ಗಮನಿಸಿದ ಕೆಲವು ವಿಷಯಗಳು:

೧. ನಲವತ್ತಕ್ಕೂ ಹೆಚ್ಚು ಮಕ್ಕಳನ್ನು ಒಟ್ಟಾಗಿಸಿ, ಮೂರು-ನಾಲ್ಕು ವಾರಗಳಲ್ಲಿ ಅವರಿಂದ ಕುವೆಂಪುರವರ ನಾಟಕ ಮಾಡಿಸುವುದು ಮಕ್ಕಳಾಟವಲ್ಲ.

೨. ಪ್ರಸ್ತುತಿ ನಾಟಕಮಾಲಿಕೆಯದ್ದಾದರೂ, ಒಂದು ನಾಟಕದಿಂದ ಇನ್ನೊಂದು ನಾಟಕಕ್ಕೆ ಸಹಜವಾಗಿ ಪ್ರೇಕ್ಷಕರನ್ನು ಕರೆದೊಯ್ದ ಮಾಂತ್ರಿಕತೆಯ ಯಶಸ್ಸು ನಿರ್ದೇಶಕ ವರ್ಗಕ್ಕೆ ಸಲ್ಲಬೇಕು.'' - **ಅನಿಲ್  ಭಾರಧ್ವಾಜ**



**ಮುಂದುವರೆದುದು....**

"ಸಮೀರನು ಶಾಲೆ ಮುಗಿಸಿ ಮನೆಗೆ ಬಂದು, 'ಜಲಗಾರ' ನಾಟಕದಲ್ಲಿ ಶಿವನ ಪಾತ್ರ ಮಾಡುವುದಾಗಿ ತಿಳಿಸಿದಾಗ, ಅವನು ತಂದಿದ್ದ ದೊಡ್ಡ ಡೈಲಾಗ್ ಶೀಟ್ ನೋಡಿ ನನಗೆ ಗಾಬರಿಯಾಗಿತ್ತು. ಮಕ್ಕಳೋತ್ಸವದ ದಿನ, ಜಲಗಾರ ನಾಟಕ ನೋಡಿದ ಪ್ರೇಕ್ಷಕರು ಸಮೀರನ ಪಾತ್ರ ನಿರ್ವಹಣೆಯನ್ನು ಮೆಚ್ಚಿದಾಗ, ಮನಸ್ಸು ನಾಟಕದ ನಿರ್ದೇಶಕ ತಂಡಕ್ಕೆ ಧನ್ಯತಾ ಭಾವದಿಂದ ವಂದಿಸಿತ್ತು."

**- ಸವಿತ ರಾವ್**

"ಈ ನಾಟಕ ಮಾಡಬೇಕೆಂದು ಮಕ್ಕಳು ತುಂಬಾ ಉತ್ಸುಕರಾಗಿದ್ದರು. ಮಕ್ಕಳು ತಮ್ಮ ಸಂಭಾಷಣೆ ಮತ್ತು ಅಭಿನಯವನ್ನು ಕನ್ನಡಿಯ ಮುಂದೆ, ಕಾರಲ್ಲಿ ಕುಳಿತಾಗ , ಊಟ ಮಾಡುವಾಗ ಮತ್ತು ತಂದೆ ತಾಯಿಯ ಮುಂದೆ ಕರಗತ ಮಾಡಿಕೊಳ್ಳುತ್ತಿದ್ದರು. ಅವರ ಉತ್ಸುಕತೆ ಕಂಡು ನಮಗೆ ಎಲ್ಲಿಲ್ಲದ ಆಶ್ಚರ್ಯ ಹಾಗು ಸಂತೋಷ. ಶಿಕ್ಷಕರ ಪ್ರಯತ್ನ ಮತ್ತು ಮಕ್ಕಳ ಆಸಕ್ತಿ ಕಂಡು ನಾವು ಕೂಡ ಅವರಷ್ಟೆ ಹುಮ್ಮಸ್ಸಿನಿಂದ props ಗಳನ್ನು ಮಾಡುತ್ತಿದ್ದೆವು. ಈ ನಾಟಕಗಳು ಚೆನ್ನಾಗಿ ಮೂಡಿಬರಲು ಕಾರಣ ನಮ್ಮ ಈಸ್ಟ ವಿಂಡ್ಸರ್ ಕನ್ನಡ ಶಾಲೆಯ ಶಿಕ್ಷಕರು, ಮಕ್ಕಳು, ಪೋಷಕರು ಮತ್ತು ನಮ್ಮೆಲ್ಲರಲ್ಲಿನ ಒಂದೇ ಕುಟುಂಬದ ಭಾವನೆ". **-ಕಿರಣ್ ಜಾಡರ**

"ಪ್ರೀತಿಯ ಬೃಂದಾವನದ ಬಂಧುಗಳಿಗೆ ವಂದನೆಗಳು.

ತಮ್ಮ 'ನಮನ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮನ ಮುದಗೂಂಡಿತು. ಮಕ್ಕಳ ಕನ್ನಡ ಭಾಷೆಯ ಸ್ಪಷ್ಟತೆ, ಉಚ್ಚಾರಣೆ ನಮ್ಮನ್ನು ಮೂಕರನ್ನಾಗಿಸಿತು. ಅವರುಗಳು ಭಾಗವಹಿಸಿದ ಎಲ್ಲಾ ಕಾರ್ಯಕ್ರಮಗಳನ್ನೂ ಯಶಸ್ವಿಯಾಗಿಸಿದ್ದಾರೆ.

ನಮ್ಮ ನೆಲದಲ್ಲಿ ಮರೆಯಾಗುತ್ತಿರುವ ಭಾಷೆ ಇಲ್ಲಿ ನೆಲೆಯೂರುತ್ತಿರುವ ಪರಿ ಕಂಡು ಮನ ತುಂಬಿ ಬಂದಿದೆ. ಮಕ್ಕಳನ್ನು ಬಹಳ ಚೆನ್ನಾಗಿ ತಿದ್ದಿ ತೀಡಿರುವ ಶಿಕ್ಷಕ ಬಂಧುಗಳಿಗೆ ಹಾಗೂ ಪೋಷಕರಿಗೆ ನಮ್ಮ ಶುಭ ಹಾರೈಕೆಗಳು. ಅಮೇರಿಕಗೆ ಇದು ನಮ್ಮ ಮೊದಲನೆಯ ಪ್ರವಾಸವಾದರೂ ಬೃಂದಾವನದ ಮಕ್ಕಳ ಕಾರ್ಯಕ್ರಮನ್ನು ನೋಡಿದಾಗ ನಾವು ಕರ್ನಾಟಕದಲ್ಲೇ ಇದ್ದೀವೇನೋ ಅಂತ ಅನಿಸಿತು ಹಾಗು ತುಂಬನೇ ಸಂತೋಷವಾಯಿತು....ಜಯ ಕನ್ನಡಾಂಬೆ ನಿಮಗೆಲ್ಲರಿಗು ಒಳಿತನ್ನು ಮಾಡಲೆಂದು ಮನತುಂಬಿ ಹಾರೈಸುವ"

**- ಲತ ಶ್ರೀನಿವಾಸ್ ಮತ್ತು H K ಶ್ರೀನಿವಾಸ್**

"'ನನ್ನ ಗೋಪಾಲ'ದ ಚಿಕ್ಕ ಮಕ್ಕಳು ಮುದ್ದು ಮುದ್ದಾಗಿ ಕನ್ನಡದಲ್ಲಿ ವಿಧವಿಧವಾಗಿ ತಿಂಡಿ ತಿನಿಸುಗಳ ಹೆಸರುಗಳನ್ನು ಹೇಳುವುದು ಹಾಗು ಸರಸ್ವತಿಯ ಶ್ಲೋಕವನ್ನು ಸ್ಪಷ್ಟವಾಗಿ ಹೇಳುವುದನ್ನು ಕೇಳಲು ತುಂಬಾ ಚೆನ್ನಾಗಿತ್ತು. ಬೆರಳ್ ಗೆ ಕೊರಳ್', 'ಮಹಾರಾತ್ರಿ','ಜಲಗಾರ' ನಾಟಕಗಳು ಸಂಕ್ಷಿಪ್ತವಾಗಿ ಮನಸೆಳೆಯುವಂತೆ ಮೂಡಿಬಂದವು. ನೋಡುವಾಗ ಅಮೆರಿಕಾದಲ್ಲಿರುವುದೇ ಮರೆತುಹೋಯಿತು. ಮಕ್ಕಳ, ಪೋಷಕರ ಹಾಗು ಶಿಕ್ಷಕರ ಕನ್ನಡ ಅಭಿಮಾನ ಸ್ಪಷ್ಟವಾಗಿ ಕಂಡುಬರುತ್ತದೆ". **- ವಸುಧಾ ಗಿರೀಶ್**

"ನಮನ ತಂಡದ ಈ ಸಫಲ ಪ್ರಯತ್ನ, ಪರಿಶ್ರಮದಿಂದ ಏನು ಸಾಧಿಸಿದೆ ಎಂದು ಯೋಚಿಸಿದರೆ ನನಗೆ ಕಾಣುವುದು, ಮಕ್ಕಳು ಪಡೆದುಕೊಂಡ ಹೊಸದಾದ ಸ್ನೇಹ ಸಮ್ಮಿಲನ. 'ಜಲಗಾರ' ನ ಪಾತ್ರ ವಹಿಸಿದ ನನ್ನ ಮಗ, ಆ ಪಾತ್ರದ ಆಳವನ್ನು ತಿಳಿಯಲು ಚಿಕ್ಕವನಾದರೂ, ಈ ನಾಟಕದಲ್ಲಿ ಭಾಗವಹಿಸಿ ತಾನು ಮಾಡಿಕೊಂಡ ಹೊಸ ಬಾಂಧತ್ವನ್ನು ಮೆಲಕು ಹಾಕುವುದನ್ನು ನೋಡಿ ಸಂತೋಷವೆನಿಸುವುದು. ತಾಯಿಯಾಗಿ ಯೋಚಿಸಿದಾಗ ನನಗೆ ಕಂಡಿದ್ದು, ನನ್ನಂತೆಯೇ ತಮ್ಮ ಮಕ್ಕಳು ಕನ್ನಡ ಕಲಿಯಲಿ ಎಂದು ಹಂಬಲಿಸುವ ತಾಯಂದಿರು ಹಾಗು ಕನ್ನಡವನ್ನು, ಹೊಸತನ್ನು ಕಲಿತುಕೊಳ್ಳಲಿ ಎಂದು ಆಶಿಸಿ ಈ ಪ್ರಯತ್ನ ಮಾಡಿದ ಈಸ್ಟ್ ವಿಂಡ್ಸರ್ ಶಾಲೆಯ ಎಲ್ಲ ಅಧ್ಯಾಪಕರು, ಎಲ್ಲರಿಗೂ ನನ್ನ ಹೃತ್ಪೂರ್ವಕ ನಮನ."

**- ಅರುಣಾ ಮಂಜುಕುಮಾರ್**

"ಈ ವರ್ಷದ ಬೃಂದಾವನ ಮಕ್ಕಳೋತ್ಸವದಲ್ಲಿ ಮನಸೆಳೆದ ಮಕ್ಕಳ ಕಾರ್ಯಕ್ರಮವೆಂದರೆ ಈಸ್ಟ್ ವಿಂಡ್ಸರ್ ಕನ್ನಡ ಶಾಲೆಯ 'ನಮನ' ಎನ್ನುವ ಕಿರು ನಾಟಕಗಳ ಸಂಕಲನ. ಇದರಲ್ಲಿ ಕುವೆಂಪುರವರ ನಾಲ್ಕು ನಾಟಕಗಳ ದೃಶ್ಯಗಳನ್ನು ಸಿ.ಅಶ್ವತ್ಥರ ಸಂಗೀತದೊಡನೆ ಬೆಸೆದು, ಈ ಇಬ್ಬರು ಮಹಾನುಭಾವರಿಗೆ ನಮನವಾಗಿ ಸಂಕಲಿಸಿದ ಶಾಲೆಯ ಶಿಕ್ಷಕರ ಪ್ರಯತ್ನ, ಶಾಲೆಯ ಮಕ್ಕಳ ಉತ್ತಮ ಅಭಿನಯ ಮತ್ತು ತಪ್ಪಿಲ್ಲದ ಕನ್ನಡ ಉಚ್ಚಾರಣೆಯಿಂದಾಗಿ ತುಂಬಾ ಪ್ರಭುದ್ಧವಾಗಿ ಹಾಗೂ ಪರಿಣಾಮಕಾರಿಯಾಗಿತ್ತು. ರಾಜೇಶ ಆಚಾರ್ಯ ಹಾಗು ಕಿರಣ್ ಜಾಡರ ಮಾಡಿದ ಪ್ರಾಪ್ಸ್ ನಾಟಕ ದೃಶ್ಯಗಳಿಗೆ ಕಳೆ ತಂದವು. ಶಾಲೆಯ ಮಕ್ಕಳು, ತಂದೆ- ತಾಯಂದಿರು ಹಾಗೂ ಶಿಕ್ಷಕರು ಅಭಿನಂದನೀಯರು". **-ಸರೋಜಾ ಆಚಾರ್ಯ**

## ಚಿಣ್ಣರ ಲೋಕ

# ನನ್ನ ಮಾತು



**ಸಂಕೀರ್ತ್ ಭಾರದ್ವಾಜ್**

ಇತ್ತೀಚೆಗೆ ನಡೆದ ಮಕ್ಕಳೋತ್ಸವ ಕನ್ನಡ ಕಸರತ್ತು ಸ್ಪರ್ಧೆಯ ನನ್ನ ವಿಷಯ 'ಕರ್ನಾಟಕ'. ಇದರ ಬಗ್ಗೆ ನಾನು ಮಾತಾಡಿದ್ದು ಹೀಗಿತ್ತು. "ನಾನು ಹುಟ್ಟಿದ ಪುಣ್ಯ ಭೂಮಿ ಕರ್ನಾಟಕ. ಕರ್ನಾಟಕ, ಭಾರತದಲ್ಲಿ ಒಂದು ಸುಂದರವಾದ ರಾಜ್ಯ. ಅಲ್ಲಿ ಸಿಗುವ ರುಚಿಯಾದ ತಿಂಡಿಗಳು ಪ್ರಪಂಚದಲ್ಲಿ ಎಲ್ಲೂ ಸಿಗುವುದಿಲ್ಲ. ಕರ್ನಾಟಕದ ಕವಿಗಳಿಗೆ ಭಾರತದಲ್ಲಿ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಅದರಲ್ಲಿ ಕೆಲವರು ಕುವೆಂಪು, ದ. ರಾ. ಬೇಂದ್ರೆ ಮತ್ತು ಕಾರಂತರು. ಈ ರಾಜ್ಯದ ಮುಖ್ಯ ಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿಯವರು ನಾನು ಹುಟ್ಟಿದ ಊರಾದ ಹಾಸನದವರು. ನಾವು ಹಿಂದಿನ ವರ್ಷ ಮಾಡಿದ ನಾಟಕ ವಿಶ್ವ ವಿನೂತನದಲ್ಲಿ ಕರ್ನಾಟಕವನ್ನು ಸುಂದರವಾಗಿ ವರ್ಣಿಸಿದ್ದಾರೆ. ಅದರಲ್ಲಿ ಬರುವ ಒಂದು ಸಾಲು "ಗಂಗ ಕದಂಬ, ರಾಷ್ಟ್ರಕೂಟ..." ಎಂದು ಹೇಳಿ ಅನೇಕ ರಾಜರನ್ನು ತಿಳಿಸಿದ್ದಾರೆ." ನಾನು ವಿವರಿಸಿದ ಮಾತುಗಳು ಹೀಗಿದ್ದವು.

ಮಕ್ಕಳೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಾವೂ ಈಸ್ಟ್ ವಿಂಡ್ಸರ್ ಶಾಲೆಯ ಮಕ್ಕಳು 'ನಮನ' ಎಂಬ ನಾಟಕವನ್ನು ಮಾಡಿದೆವು. ಅದರಲ್ಲಿ ಮೊದಲನೇ ಕಥೆ "ಬೆರಳ್-ಗೆ ಕೊರಳ್'. ಅದು ಏಕಲವ್ಯನು ತನ್ನ ಬೆರಳನ್ನು ಗುರುಗಳಿಗೆ ದಕ್ಷಿಣೆಯಾಗಿ ಕೊಟ್ಟಾಗ ಅವನ ತಾಯಿಗೆ ಆಗುವ ದುಃಖವನ್ನು ತೋರಿತು. ಎರಡನೇ ಕಥೆ 'ಮಹಾರಾತ್ರಿ'. ಅದು ಸಿದ್ದಾರ್ಥ ಬುದ್ಧನಾಗುವ ಕಥೆ. ಮೂರನೆ ಕಥೆ 'ಜಲಗಾರ' ಅದರಲ್ಲಿ ಒಬ್ಬ ಜಲಗಾರ ಶಿವನನ್ನು ತನ್ನ ಕೆಲಸದಲ್ಲಿ ಕಾಣುವ ಕಥೆ. ಈ ಮೂರು ಕಥೆಯನ್ನು ಬರೆದವರು ಕುವೆಂಪು. ಈ ನಾಟಕದ ಮಧ್ಯದಲ್ಲಿ ಕೆಲವು ನೃತ್ಯ ಸಂಯೋಜನೆ ಇದ್ದಿತು. ಸಿ. ಅಶ್ವಥರವರು ಹಾಡಿದ "ಬಾ ಇಲ್ಲಿ ಸಂಭವಿಸು" ಹಾಡಿನೊಂದಿಗೆ ಮುಕ್ತಾಯವಾಯಿತು.

ಮಹಾರಾತ್ರಿಯ ಸಿದ್ದಾರ್ಥನ ಪಾತ್ರವನ್ನು ನಾನು ಮಾಡಿದ್ದೆ. ಈ ಪಾತ್ರದಿಂದ ನಾನು ಸಿದ್ಧಾರ್ಥನ ಬಗ್ಗೆ ತುಂಬ ಕಲಿತೆ. ಅವನಿಗೆ ತನ್ನ ರಾಜ್ಯ, ಹೆಂಡತಿ, ಮಗನನ್ನು ಬಿಟ್ಟು ಹೋಗಲು ಬಹಳ ಕಷ್ಟವಾಯಿತು. ಈ ಪಾತ್ರ ದಲ್ಲಿ ನನಗೆ ಇಷ್ಟ ವಾದ ಸಾಲುಗಳು "ಮುದ್ದು ಹಯವೆ ಹೊರಡು, ಓಡು ನಡೆ ಮುಂದೆ, ಎದೆಯ ಕೀಳಾಸೆ ಸುಟ್ಟು ಮನದ ಸಂದೇಹ ಬಿಟ್ಟು, ಪರಮಾತ್ಮನಲಿ ಛಲ ಭಕ್ತಿಯನಿಟ್ಟು ವೈರಾಗ್ಯವನು ತೊಟ್ಟು ನಡೆ ಮುಂದೆ ನಡೆ ಮುಂದೆ". ಈ ಸಾಲುಗಳು ನಾವು ಜ್ಞಾನವನ್ನು ಪಡೆಯುವ ರೀತಿಯನ್ನು ಹೇಳುತ್ತದೆ. ■





**ಹೆಲ್ತ್ ಮತ್ತು ಫಿಟ್ನೆಸ್**

# ಕೀಟೊ ಡಯಟ್, ಬೊಜ್ಜು ಕರಗಿಸುವ ಹೊಸ ವಿಧಾನವೆ?



***ರಘುರಾಂ ರಾಯಸಂ***

ಈ ಹಿಂದೆ ಯಾರಾದರೂ ನಿಮಗೆ "ಯಾಕೋ(ಕೇ) ಕೊಬ್ಬು ಜಾಸ್ತಿನಾ..? ಸಕ್ಕತ್ ಕೊಬ್ಬು ನಿಂಗೆ, ಮಾತಾಡ್ಸೋದೆ ಇಲ್ಲಾ." ಎಂದು ಬೈದಿದ್ದು ನೆನಪಿದೆಯಾ? ಇಂದು ನಾವು ದೇಹದಲ್ಲಿ ಈ ಕೊಬ್ಬು ಏಕೆ ಬೆಳೆಯುತ್ತದೆ, ಕೊಬ್ಬನ್ನು ಕರಗಿಸಲು ಪರಿಹಾರಗಳೇನು? ಈ ಎಲ್ಲಾ ವಿಷಯಗಳ ಬಗ್ಗೆ ತಿಳಿದುಕೊಳ್ಳೋಣ. ಇಲ್ಲಿ ಅಮೆರಿಕಾದಲ್ಲಿ ಮೂವತ್ತು ಪ್ರಮಾಣಕ್ಕೂ ಹೆಚ್ಚು ಜನರಿಗೆ ಕೊಬ್ಬು ಜಾಸ್ತಿ.ಇಲ್ಲಿ ಸ್ಥೂಲಕಾಯತೆ (obesity) ಒಂದು ದೊಡ್ಡ ರೋಗವಾಗಿ ಪರಿಣಮಿಸಿದೆ. ಈ ದೇಹಭಾರದಿಂದಾಗುವ ತೊಂದರೆಗಳು ಹತ್ತು ಹಲವು. ಇಷ್ಟೆಲ್ಲಾ ತೊಂದರೆಗಳು ಇದ್ದರೆ, ಇದಕ್ಕೆ ಪರಿಹಾರವೇ ಇಲ್ಲವೆ?

ಮೊದಲು ಸ್ಥೂಲಕಾಯತೆ ಅಥವಾ ಬೊಜ್ಜು ಬರುವುದಕ್ಕೆ ಕಾರಣ ಏನೆಂದು ತಿಳಿಯೋಣ. ನಾವು ದಿನನಿತ್ಯ ತಿನ್ನುವ ಆಹಾರವನ್ನು ೧) ಕಾರ್ಬೋಹೈಡ್ರೇಟ್, ೨)ಪ್ರೊಟೀನ್ ಮತ್ತು ೩) ಕೊಬ್ಬು ಎಂದು ಮೂರು ಬಗೆಯಾಗಿ ವಿಂಗಡಿಸಬಹುದು.

**೧.ಕಾರ್ಬೋಹೈಡ್ರೇಟ್** ಗಳು ನಮ್ಮೆಲ್ಲರಿಗೆ ಶಕ್ತಿ ಕೊಡುವ ಮುಖ್ಯ ಆಹಾರ. ಕಾರ್ಬೋಹೈಡ್ರೇಟ್ಗಳಲ್ಲಿ ಎರಡು ಬಗೆ.

a. ಸರಳ (Simple) ಕಾರ್ಬೋಹೈಡ್ರೇಟ್: ಇದು ಕೆಲವೇ ಅಣುಗಳಿಂದ(molecules) ಮಾಡಲ್ಪಟ್ಟಿರುತ್ತದೆ. ಹಾಗಾಗಿ ಇದು ಅತಿಬೇಗ ಜೀರ್ಣವಾಗುತ್ತದೆ. ಇದು ಬಹು ಸುಲಭವಾಗಿ ದೇಹದಲ್ಲಿ ಸೇರಿ, ಶಕ್ತಿಯಾಗಿ ಪರಿವರ್ತನೆಯಾಗುತ್ತದೆ.

ಉದಾಹರಣೆ: ಅನ್ನ, ಸಕ್ಕರೆ, ಹಾಲು, ಜೇನು ಮುಂತಾದವುಗಳು.

b. ಸಂಕೀರ್ಣ (complex) ಕಾರ್ಬೋಹೈಡ್ರೇಟ್: ಇದು ಅನೇಕ ಅಣುಗಳು ಕೂಡಿ ಮಾರ್ಪಾಡಾಗಿರುತ್ತದೆ. ಇದು ನಮ್ಮ ದೇಹದಲ್ಲಿ ಸೇರಬೇಕಾದರೆ ಮೊದಲು ಸಣ್ಣ ಸಣ್ಣ ಅಣುವಾಗಿ, ನಂತರ ದೇಹಕ್ಕೆ ಶಕ್ತಿ ಕೊಡಲು ಸಿದ್ಧವಾಗುತ್ತದೆ. ಇದು ನಿಧಾನವಾಗಿ ಜೀರ್ಣವಾಗುವುದರಿಂದ ಕೊಬ್ಬಾಗಿ ಪರಿವರ್ತನೆ ಆಗುವ ಸಾಧ್ಯತೆ ಸ್ವಲ್ಪ ಕಮ್ಮಿ.

ಉದಾಹರಣೆ: ಗೋಧಿ, ಜೋಳ, ಹುರಳಿ ಕಾಳು, ಬೇರಿನ ತರಕಾರಿ.

ನಮ್ಮ ದೇಹಕ್ಕೆ ಕಾರ್ಬೋಹೈಡ್ರೇಟ್ ಗಳು -

**(ಮುಂದಿನ ಪುಟಕ್ಕೆ)**



ಅತ್ಯಾವಶ್ಯಕವಾದರೂ, ತಿಂದದ್ದು ಹೆಚ್ಚಾದರೆ, ದೇಹವು ಬೇಕಾಗಿರುವಷ್ಟು ಕಾರ್ಬೋಹೈಡ್ರೇಟ್ ಉಪಯೋಗಿಸಿ, ಮಿಕ್ಕಿದ್ದನ್ನು ಕೊಬ್ಬಾಗಿ ಪರಿವರ್ತಿಸುತ್ತದೆ.

ಈ ಸ್ಥೂಲಕಾಯತೆಯಿಂದಾಗುವ ದುಷ್ಪರಿಣಾಮಗಳು ಏನು?

*1. ರಕ್ತದೊತ್ತಡ ಹೆಚ್ಚು ವಿಕೆ*
*2. ಮಧುಮೇಹ*
*3. ಹೃದಯರೋಗ*
*4.ಹೃದಯಾಘಾತ*
*5.ಮೂತ್ರನಾಳ ರೋಗ*
*6. ನಿದ್ದೆ ಮಾಡುವಾಗ ಉಸಿರುಕಟ್ಟುವ ತೊಂದರೆ*
*7. ಕೆಲವು ಬಗೆಯ ಕ್ಯಾನ್ಸರ್*
*8. ಅನೇಕ ಬಗೆಯ ಮಾನಸಿಕ ತೊಂದರೆ, ಖಿನ್ನತೆ*
*9. ಮೂಳೆ, ಮೈಕೈ ನೋವು*

**೨.ಪ್ರೋಟೀನ್:** ಇದು ಮಾಂಸಖಂಡ ( Muscle), ಅಂಗಾಂಶ (Tissue) , ಚರ್ಮ ಮುಂತಾದವುಗಳ ಬೆಳವಣಿಗೆಗೆ ಸಹಾಯ ಮಾಡುತ್ತದೆ.ಆದರೆ ಇದು ಸಹ ಹೆಚ್ಚಾಗಿ ತಿಂದಾಗ ಕೊಬ್ಬಾಗಿ ಪರಿವರ್ತನೆಯಾಗುತ್ತದೆ.

ಉದಾಹರಣೆ: ಸೋಯಾ ಬೀನ್ಸ್, ಬೇಳೆ, ಮೊಟ್ಟೆ, ಮಾಂಸ. ಮತ್ತು ಒಣ ಬೀಜಗಳು ( ಬಾದಾಮಿ, ಗೋಡಂಬಿ, ಪಿಸ್ತಾ ಇತ್ಯಾದಿ)

**೩.ಕೊಬ್ಬು** (fat): ನಮ್ಮ ದೇಹದ ಬೆಳವಣಿಗೆಗೆ, ಶಕ್ತಿ ಉತ್ಪತ್ತಿಗೆ ಬೇಕಾದ ಮುಖ್ಯವಾದ ಅಂಶ ಕೊಬ್ಬು. ಇದು ಕಡಿಮೆ ಪ್ರಮಾಣದಲ್ಲಿ ಹೆಚ್ಚು ಶಕ್ತಿ ತಯಾರಿಸಬಲ್ಲದು.

ಉದಾಹರಣೆ: ಬೆಣ್ಣೆ, ಕೊಬ್ಬರಿ ಎಣ್ಣೆ, ಅವಕಾಡೊ ಹಣ್ಣು, ಮೊಸರು ಮುಂತಾದವು.

ಆದರೆ ದೇಹಕ್ಕೆ ಓಡಾಡಲು, ಕೆಲಸಮಾಡಲು ಬೇಕಾದ ಶಕ್ತಿಯನ್ನು ತಯಾರಿಸಲು ಸಾಕಾಗುವಷ್ಟಕ್ಕಿಂತ ಹೆಚ್ಚು ಕೊಬ್ಬು ಇದ್ದರೆ, ದೇಹದ ಹಲವು ಭಾಗಗಳಲ್ಲಿ ( ಉದಾ- ಹೊಟ್ಟೆಯ ಸುತ್ತಾ, ಚರ್ಮದ ಕೆಳಗೆ ಇತ್ಯಾದಿ) ಕೊಬ್ಬು ಶೇಕರಿಸುತ್ತದೆ. ಇದು ದೇಹದ ಹೊರಗಿನ ಸೌಂದರ್ಯ ಒಂದೇ ಅಲ್ಲದೆ, ದೇಹದ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ. ರಕ್ತನಾಳಗಳಲ್ಲಿ ಕೊಬ್ಬು ಶೇಖರಿಸಿದರೆ ರಕ್ತದ ಓಡಾಟವನ್ನೂ ನಿರ್ಬಂಧಿಸುತ್ತದೆ.

ಕಳೆದ ಅನೇಕ ವರ್ಷಗಳಲ್ಲಿ,ಸ್ಥೂಲಕಾಯತೆಗೆ ಪರಿಹಾರವಾಗಿ ಅನೇಕ ತರಹದ ಆಹಾರ ಪದ್ಧತಿಗಳು (Diet) ಲಭ್ಯವಾಗಿವೆ. ಇವುಗಳಲ್ಲಿ ಒಂದಾದ ಕೀಟೋ ಡಯೆಟ್ ಬಗ್ಗೆ ಮಾಹಿತಿ ತಿಳಿದುಕೊಳ್ಳೋಣ. ನಿಮಗೆ ಆಶ್ಚರ್ಯವೆನಿಸಬಹುದು, ಆದರೆ ಕೀಟೋ ಡಯೆಟ್, ಅತಿ ಹೆಚ್ಚು ಕೊಬ್ಬಿನಿಂದ ಕೂಡಿದ ವಿಶೇಷ ಆಹಾರ ಕ್ರಮ. ಕೀಟೋ ಡಯೆಟ್ ಅನುಸರಿಸುವಾವ ನೀವು ಶೇಕಡ 75% ಕೊಬ್ಬು, ಶೇಕಡ 20% ಪ್ರೋಟೀನ್ ಹಾಗೂ ಕೇವಲ 5% ಕಾರ್ಬ್ಸ್ ಸೇವಿಸಬೇಕು. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವಹಾಗೆ, ಕೊಬ್ಬನ್ನು ಕೊಬ್ಬು ತಿಂದೆ ಕರಗಿಸುವುದೇ ಈ ಆಹಾರ ಕ್ರಮದ ವಿಶೇಷ. ಕಡಿಮೆ ಕಾರ್ಬ್ಸ್ ಹಾಗೂ ಹೆಚ್ಚು ಕೊಬ್ಬು ತಿಂದಾಗ, ನಮ್ಮ ದೇಹದಲ್ಲಿ ಕೀಟೋಸಿಸ್ ಎಂಬ ಪ್ರಕ್ರಿಯೆ ಶುರುವಾಗುತ್ತದೆ. ಈ ಕೀಟೋಸಿಸ್ ನಮ್ಮ ದೇಹ ಕೊಬ್ಬನ್ನು ಪರಿಣಾಮಕಾರಿಯಾಗಿ ಕರಗಿಸುತ್ತದೆ. ನಮ್ಮ ಲಿವರ್ ನಲ್ಲಿ ಕೊಬ್ಬು ಕೀಟೋನ್ ಆಗಿ ಪರಿವರ್ತನೆಯಾಗಿ ಇದು ನಮ್ಮ ಮೆದುಳಿಗೆ ಶಕ್ತಿಯನ್ನು ಸಹ ಪೂರೈಸಿಸುತ್ತದೆ.

**(ಮುಂದಿನ ಪುಟಕ್ಕೆ)**



***ಕೀಟೋ ಡಯಟ್ ಅನುಸರಿಸುವಾಗ ಈ ಕೆಳಕಂಡ ಆಹಾರ ತಿನ್ನುವುದನ್ನು ನಿಲ್ಲಿಸಬೇಕು ಅಥವಾ ಬಹಳಷ್ಟು ಕಡಿಮೆ ಮಾಡಬೇಕು.***

1. ಸಿಹಿ ತಿನಿಸು
2. ಎಣ್ಣೆಯಲ್ಲಿ ಕರಿದ ತಿನಿಸು
3. ಅಕ್ಕಿ, ಗೋದಿ ಹಾಗೂ ಇವುಗಳಿಂದ ಮಾಡಿದ ಆಹಾರ , ಉದಾ: ಪಾಸ್ತಾ, ಸೀರಿಯಲ್
4. ಹಣ್ಣುಗಳು(ಬೆರ್ರಿಗಳನ್ನು ಹೊರತುಪಡಿಸಿ)
5. ಬಟಾಣಿ, ಕಿಡ್ನಿ ಬೀನ್ಸ್, ಬೇಳೆ
6. ಬೇರಿನ ತರಕಾರಿಗಳು ಉ.ದಾ: ಆಲೂಗಡ್ಡೆ, ಸಿಹಿ ಗೆಣಸು, ಕ್ಯಾರೆಟ್
7. ತರಕಾರಿ ಎಣ್ಣೆ.
8. ಮದ್ಯಪಾನ, ಧೂಮಪಾನ

***ಅಂತೆಯೇ, ಕೀಟೋ ಡಯಟ್** ಅನುಸರಿಸುವಾಗ **ಈ ಕೆಳಕಂಡ ಆಹಾರ ಸೇವಿಸಬೇಕು.***

1. ಬೆಣ್ಣೆ,ಚೀಸ್, ಮೊಸರು( full fat),
2. ಬಾದಾಮಿ, ವಾಲ್ನಟ್, ಅಗಸೆ ಬೀಜ (flax) ,ಕುಂಬಳಕಾಯಿ ಬೀಜ, ಚಿಯಾ ಬೀಜ ಇತ್ಯಾದಿ.
3. ಕಚ್ಚಾ ಆಲಿವ್ ಎಣ್ಣೆ, ಕೊಬ್ಬರಿ ಎಣ್ಣೆ, ಅವಕಾಡೊ ಎಣ್ಣೆ.
4. ಎಲ್ಲಾ ಹಸಿರು ತರಕಾರಿ, ಟೊಮ್ಯಾಟೊ, ಈರುಳ್ಳಿ, ಅವಕಾಡೊ ಹಣ್ಣು
5. ಉಪ್ಪು, ಮೆಣಸು, ಎಲ್ಲಾ ತರಹದ ಖಾರದ ಪುಡಿಗಳು.
6. ಕೆಂಪು ಮಾಂಸ, ಕೋಳಿ, ಮೀನು, ಮೊಟ್ಟೆ.

ಈ ಆಹಾರಕ್ರಮದಲ್ಲಿ, ಇತರೆ ಡಯೆಟ್ ಗಳ ಹಾಗೆ ಕ್ಯಾಲೋರಿ ಗಳನ್ನು ಲೆಕ್ಕಹಾಕುವ ಅವಶ್ಯಕತೆ ಇಲ್ಲ. ಹೊಟ್ಟೆಯ ತುಂಬ ಕೊಬ್ಬಿನ ಆಹಾರವನ್ನು ತಿನ್ನಬಹುದು. ಈ ಆಹಾರಕ್ರಮವನ್ನು ಆರಂಭಿಸಿದ ಮೊದಲ ಎರಡು ವಾರ ದೇಹ ಇನ್ನೂ ಈ ಡಯೆಟ್ಗೆ ಅಳವಡಿಸಿಕೊಳ್ಳುತ್ತಿರುತ್ತದೆ. ಅನೇಕರಿಗೆ, ಈ ಎರಡು ವಾರ ಬಹಳ ಕಷ್ಟವಾಗಬಹುದು. ಕೆಲವು ಅಡ್ಡ ಪರಿಣಾಮಗಳೂ ಉಂಟಾಗಬಹುದು. ಇದನ್ನು ಕೀಟೋ ಫ್ಲು (keto flu) ಅನ್ನುತ್ತಾರೆ. ಕೀಟೋ ಫ್ಲು ಇದ್ದಾಗ, ನಿರಾಸಕ್ತಿ, ಅತಿ ಹಸಿವು, ನಿದ್ರಾಸಮಸ್ಯೆ, ತಲೆ ನೋವು, ವಾಕರಿಕೆ, ಅಜೀರ್ಣ ಮುಂತಾದ ತೊಂದರೆಗಳು ಬರಬಹುದು. ಇದನ್ನು ಹತೋಟಿಗೆ ತರಲು, ನೀರನ್ನು ಹೆಚ್ಚು ಕುಡಿಯಬೇಕು, ವ್ಯಾಯಾಮ ಮಾಡುವುದನ್ನು ನಿಲ್ಲಿಸಬೇಕು, ನಿಧಾನಗತಿಯಲ್ಲಿ ಕಾರ್ಬ್ಸ್ ಅನ್ನು ಕಡಿಮೆಮಾಡಬೇಕು.

ಈ ಕ್ರಮವನ್ನು ಚಾಚೂ ತಪ್ಪದೆ ಪಾಲಿಸಿದರೆ, ಹತ್ತು ವಾರದ ಬಳಿಕ ನಿಮಗೆ ಈ ಡಯೆಟ್‌ನ ಪರಿಣಾಮ ದೇಹದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಬೊಜ್ಜು ಕರಗುತ್ತದೆ. ಬನ್ನಿ ಎಲ್ಲಾ ನ್ಯೂಜೆರ್ಸಿ ಕನ್ನಡಿಗರೇ, ಎಲ್ಲರೂ ಸೇರಿ ಆರೋಗ್ಯವಂತ ಬಲಿಷ್ಠ ಕನ್ನಡಿಗರ ಸಮೂಹ ಕಟ್ಟೋಣ ! ■

**ಲೇಖನದ ಛಾಯಾಚಿತ್ರ ಕೃಪೆ: ಅಂತರ್ಜಾಲ**

## ಕವನ



*ಶ್ರೀವಿದ್ಯಾ ಪ್ರಶಾಂತ್*

### ನಾರಿ

ನಭದಿ ಬೆಳಗೊ ಸೂರ್ಯನಂತೆ
ಹೊಳೆಯುತಿರುವ ವಜ್ರದಂತೆ
ಸುಜ್ಞಾನದ ದೀಪದಂತೆ
ಶಕ್ತಿಯ ಸ್ವರೂಪಿಯೇ
ನೀ- ನಾರಿ
ಮಮತೆಯ ಸೆಲೆಯಾಗಿ
ಬದುಕಿನ ಸುಮವಾಗಿ
ಕರುಣೆಯ ಕಡಲಾಗಿ
ಸ್ಫೂರ್ತಿಯ ಚಿಲುಮೆಯೇ
ನೀ- ನಾರಿ
ಮಾತೆಯಾಗಿ-ಮಗಳಾಗಿ
ಮಡದಿಯಾಗಿ-ಸಹೋದರಿಯಾಗಿ
ಸಹನೆಯ ಮೂರುತಿಯಾಗಿ
ಮನುಕುಲವ ಪೊರೆವೆಯೇ
ನೀ-ನಾರಿ
ತ್ಯಾಗಮಯಿ- ಪ್ರೇಮಮಯಿ
ಸ್ನೇಹಮಯಿ- ಆನಂದಮಯಿ
ಓ ನಾರಿ ನೀನೇ ಧನ್ಯ
ನೀನಿರದ ಬಾಳೇ ಶೂನ್ಯ.



*ಲಕ್ಷ್ಮಿ ಕೊಲಾಲ್*

### ಕಣ್ಣೀರು

ಕೇಳದೇ ಕರೆಯದೆಯೇ ನೀ
ಬರುವೆ
ಸುಖದುಃಖದೊಡಲಲ್ಲಿ ನೀ ನೆಲೆಸಿರುವೆ
ಆ ವೇದನೆಗಳನ್ನೆಲ್ಲ ನೀ ಕರಗಿಸಿರುವೆ
ನೋವಿನ ಕಂತೆಯನು ನೀ ಮರೆಸಿರುವೆ
ಬೇಕಿಲ್ಲ ನಿನಗಾವುದೇ ಸೆರೆ
ನೀ ಬರುವೆ ಆಲಿಸಿ ಅಂತರಂಗದ ಮೊರೆ
ನೀ ಮೂಡಿಸಬಲ್ಲೆ ಒಂದು ಪುಟ್ಟ ತೊರೆ
ವಿರಳವಾಗಿರಲಿ ನಿನ್ನಾಗಮನದ ಪರಂಪರೆ
ಕಣ್ಣೀರ ಧಾರೆ
ಕಣ್ಣೀರ ಧಾರೆ

# ೭೦ನೇ
# ಗಣರಾಜ್ಯೋತ್ಸವದ
# ಶುಭಾಶಯಗಳು